ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

ಸಂಪುಟ 17
ಸಂಚಿಕೆ 21
ರೂ. 2.00

21 ಮೇ 1995



ಚರಾರ್-ಎ-ಷರೀಫ್ ಘಟನೆ:
ಸಮಗ್ರ ಧೋರಣೆಯ ಅಭಾವದಿಂದ ಮತ್ತೊಂದು ದುರಂತ

ದೇಶದ ಜಾತ್ಯಾತೀತ ಶಕ್ತಿಗಳು, ದೇಶಪ್ರೇಮಿಗಳು ಮೇ 11 ರಂದು ಇನ್ನೊಂದು ಆಘಾತ ಎದುರಿಸಬೇಕಾಯಿತು. ಧರ್ಮದ ಭೇದ ಭಾವವಿಲ್ಲದೆ ಕಾಶ್ಮೀರದ ಜನಗಳ ಅಪಾರ ಗೌರವಕ್ಕೆ ಪಾತ್ರರಾಗಿದ್ದ ಪ್ರಖ್ಯಾತ ಸೂಫಿ ಭಕ್ತಿ ಪಂಥದ ಸಂತ ಶೇಖ್ ನೂರುದ್ದೀನ್ ನೂರಾಣಿಯ ನೆನಪಿಗೆ ಕಟ್ಟಿದ 535 ವರ್ಷಗಳಷ್ಟು ಹಳೆಯ ದರ್ಗಾವನ್ನು ಬೆಂಕಿಗಾಹುತಿ ಮಾಡಿ ಸಂಪೂರ್ಣ ಭಸ್ಮ ಮಾಡಲಾಯಿತು. ಪಕ್ಕದಲ್ಲಿದ್ದ ಮಸೀದಿಗೂ ಬೆಂಕಿ ಹಚ್ಚಿ ಧ್ವಂಸಗೊಳಿಸಲಾಯಿತು. ಈ ದರ್ಗಾ ಇರುವ ಕಾಶ್ಮೀರದ ಚರಾರ್-ಎ-ಷರೀಫ್ ಪಟ್ಟಣದಲ್ಲಿ ಹಾಗೂ ಈ ದರ್ಗಾದಲ್ಲಿ ಕಳೆದ ಮೂರು ತಿಂಗಳುಗಳಿಂದ ಅಡಗಿಕೊಂಡಿದ್ದ ಪಾಕಿಸ್ತಾನ-ಪ್ರೇರಿತ ಉಗ್ರಗಾಮಿಗಳು ಹಾಗೂ ಬಾಡಿಗೆ ಸಿಪಾಯಿಗಳು ಈ ದುಷ್ಕೃತ್ಯ ನಡೆಸಿದ್ದಾರೆ. ಎರಡು ದಿನಗಳ ಮೊದಲು ಈ ಪಟ್ಟಣದ ಸುಮಾರು 1000 ಮನೆಗಳು ಬೆಂಕಿಗಾಹುತಿಯಾದವು. ಪಟ್ಟಣದ ಬಹಳಷ್ಟು ಜನ ಭಾರತೀಯ ಸೇನಾ ಪಡೆಗಳು ಮೂರು ತಿಂಗಳಿಂದ ಉಗ್ರಗಾಮಿಗಳನ್ನು ಹಿಡಿದು ಹಾಕಲು ಪಟ್ಟಣಕ್ಕೆ ಲಗ್ಗೆ ಹಾಕಿದ ಮೇಲೆ ತಮ್ಮ ಮನೆ-ಮಾರು ಬಿಟ್ಟು ಹೋಗಿದ್ದರೆಂದು ತಿಳಿದುಬಂದಿದೆ.

ಸರಕಾರದ ವಿಫಲತೆ

ಈ ಘಟನೆಯ ಬಗ್ಗೆ ಆಘಾತ ವ್ಯಕ್ತಪಡಿಸುತ್ತಾ ಇದನ್ನು ತಪ್ಪಿಸಲು ಬೇಕಾಗಬಹುದಾದ ಎಲ್ಲಾ ಪರಿಕರಗಳನ್ನು ಹೊಂದಿದ್ದರೂ ಭಾರತ ಸರಕಾರ ಈ ಧ್ವಂಸಕೃತ್ಯವನ್ನು ತಡೆಯಲು ವಿಫಲವಾಗಿರುವುದು ದುರದೃಷ್ಟಕರ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಧರ್ಮದ ಭೇಧಭಾವವಿಲ್ಲದೆ ಈ ದರ್ಗಾವನ್ನು ಪವಿತ್ರ ಸ್ಥಾನವೆಂದು ಗೌರವಿಸುತ್ತಿರುವ ಕಾಶ್ಮೀರಿ ಜನತೆಯ ಈ ದುಃಖಕರ ಗಳಿಗೆಯಲ್ಲಿ ಸಹಾನುಭೂತಿ ವ್ಯಕ್ತಪಡಿಸಿದೆ. ಕಳೆದ ಕೆಲವು ದಿನಗಳಿಂದಲೂ ಈ ಪಟ್ಟಣದ ಕೆಲಭಾಗ ಬೆಂಕಿಯಿಂದ ಧ್ವಂಸವಾಗುತ್ತಿದ್ದರೂ ಸರಕಾರ ಕಾರ್ಯಪ್ರವೃತ್ತವಾಗುವಲ್ಲಿ ವಿಫಲವಾದ ಬಗ್ಗೆ ಪೊಲಿಟ್ ಬ್ಯೂರೋ ಖೇದ ವ್ಯಕ್ತಪಡಿಸಿದೆ.

ಪರಿಸ್ಥಿತಿಯನ್ನು ಈಗ ಜಾಗರೂಕತೆಯಿಂದ ನಿರ್ವಹಿಸಬೇಕು. ಇದರಿಂದ ಖಿನ್ನರಾಗಿರುವ ಜನಗಳ ಮನಸ್ಸಿಗೆ ಸಾಂತ್ವನ ನೀಡಬೇಕು ಹಾಗೂ ಉಗ್ರಗಾಮಿಗಳ ತಂತ್ರಗಳನ್ನು ವಿಫಲಗೊಳಿಸಬೇಕು ಎಂದು ಪೊಲಿಟ್ ಬ್ಯೂರೋ ಹೇಳಿದೆ. ಕಾಶ್ಮೀರ ಸಮಸ್ಯೆ ಕುರಿತಂತೆ ಒಂದು ಸಮಗ್ರ ನೀತಿಯ ಅಭಾವದ ದುಷ್ಪರಿಣಾಮ ಇದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸುರ್ಜಿತ್ ಹೇಳಿದ್ದಾರೆ.

ಜನ ಉಗ್ರಗಾಮಿಗಳ ಚಟುವಟಿಕೆಗಳಿಂದ ಬೇಸರಗೊಂಡಿದ್ದಾರೆ. ಆದರೆ ಆದರರ್ಥ ಅವರು ಸರಕಾರದೊಂದಿಗೆ ಇದ್ದಾರೆ ಎಂದಲ್ಲ ಎಂದ ಸುರ್ಜಿತ್ ಎರಡು ತಿಂಗಳಿಂದ ಭದ್ರತಾ ಪಡೆಗಳನ್ನು ಚರಾರ್-ಎ-ಷರೀಫ್‌ನಲ್ಲಿ ಸನ್ನದ್ಧವಾಗಿಡಲಾಗಿತ್ತು. ಆ ಪಟ್ಟಣವನ್ನೂ ಖಾಲಿಮಾಡಲಾಗಿತ್ತು ಕೂಡಾ. ಆದರೂ ಸರಕಾರ ದರ್ಗಾವನ್ನು ರಕ್ಷಿಸುವಲ್ಲಿ ವಿಫಲವಾಗಿದೆ ಈಗ ಸರಕಾರ ಅಂತರಾಷ್ಟ್ರೀಯ ರಂಗದಲ್ಲಿ ಮುಖ ತೋರಿಸುವುದು ಹೇಗೆ ಎಂದು ಪ್ರಶ್ನಿಸಿದ್ದಾರೆ.

ಮಾತುಕತೆ ನಡೆಸಿ

ಚರಾರ್-ಎ-ಷರೀಫ್ ತೊಡಕಿನಲ್ಲಿ ಈಗ ಎಡವಿರುವುದರಿಂದ ಕೇಂದ್ರ ಸರಕಾರ ಕೆಲವು ಕಠಿಣ ನಿರ್ಣಯಗಳನ್ನು ಕೈಗೊಳ್ಳಬೇಕಾಗುತ್ತದೆ. ಈ ಘಟನೆ ಕೇಂದ್ರ ಸರ್ಕಾರ ಕಾಶ್ಮೀರದಲ್ಲಿ ಆರಂಭಿಸಬೇಕೆಂದಿದ್ದ ಚುನಾವಣಾ ಪ್ರಕ್ರಿಯೆಯನ್ನು ಸುಮಾರಾಗಿ ತಡೆಯುವಂತಹ ಸ್ಥಿತಿ ನಿರ್ಮಾಣವಾಗುವಂತಾಗಿದೆ ಎನ್ನುತ್ತಾ ಸುರ್ಜಿತ್ ರವರು ಸರಕಾರದ ವಿಫಲತೆಯನ್ನು ಕಟುವಾಗಿ ಟೀಕಿಸಿದರು.

ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಗುಂಪುಗಳ ಮುಖಂಡರನ್ನು ಬಿಡುಗಡೆ ಮಾಡಿ ಸುಮಾರು ಆರು ತಿಂಗಳೇ ಸಂದಿವೆ. ಆದರೆ ಇದುವರೆಗೂ ಸರಕಾರ ಅವರೊಂದಿಗೆ ಮಾತುಕತೆ ಆರಂಭಿಸಿಲ್ಲ, ಈ ಮುಖಂಡರು ರಾಜ್ಯದಲ್ಲಿ ಒಂದು ಸಾಮೂಹಿಕ ನೆಲೆ ಇರುವ ಜನ. ಆದರೆ ಈ ಆರು ತಿಂಗಳಲ್ಲಿ ಏನೂ ನಡೆಯದೆ ಅವರೂ ಖಾಲಿಯಾಗುತ್ತಿದ್ದಾರೆ. ಈಗ ಕೇಂದ್ರ ಸರಕಾರ ಈ ಮುಖಂಡರೊಂದಿಗೆ ಮಾತುಕತೆ ನಡೆಸುವುದಲ್ಲದೆ ಬೇರೆ ದಾರಿಯಿಲ್ಲ, ಈ ತೊಡಕಿಗೆ ಈಗ ಸುಲಭ ಪರಿಹಾರ ಸಾಧ್ಯವಿಲ್ಲ ಎಂದು ಸುರ್ಜಿತ್ ಹೇಳುತ್ತಾ ಎಲ್ಲಾ ರಾಜಕೀಯ ಪಕ್ಷಗಳ ಸಹಕಾರವನ್ನು ಸರಕಾರ ಈಗ ಪಡೆಯಬೇಕು ಎಂದರು.

ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಗುಂಪುಗಳ ಈ ಮುಖಂಡರನ್ನು ಸ್ವಾಯತ್ತತೆಯ ಒಂದು ಒಪ್ಪಬಹುದಾದ ಅಂಶದ ಆಧಾರದ ಮೇಲೆ ಮಾತುಕತೆಗೆ ಬರುವಂತೆ ಮಾಡಬೇಕು. ಆದರೆ ಪಾಕಿಸ್ತಾನೀ-ಪರ ಗುಂಪುಗಳನ್ನು ಈ ಮಾತುಕತೆಗಳಿಗೆ ಕರೆಯಬಾರದು, ಏಕೆಂದರೆ ಧರ್ಮದ ಆಧಾರದ ಮೇಲೆ ದೇಶದ ಇಭ್ಭಾಗವಾಗಿದೆ, ಆ ತಪ್ಪು ಮರುಕಳಿಸಬಾರದು ಎಂದು ಸುರ್ಜಿತ್ ಆಗ್ರಹ ಪಡಿಸಿದರು.

"ಬೇಸರದ ದಿನ"

ಸಿಪಿಐ(ಎಂ)ನ ಜಮ್ಮು-ಕಾಶ್ಮೀರ ಘಟಕ ಈ ಧ್ವಂಸ ಕಾರ್ಯದ ಬಗ್ಗೆ ಆಘಾತ ಹಾಗೂ ಸಂಕಟ ವ್ಯಕ್ತಪಡಿಸುತ್ತಾ ಎರಡೂ ಕಡೆ(ಭಾರತ ಸರಕಾರ ಹಾಗೂ ಉಗ್ರಗಾಮಿಗಳಲ್ಲಿ) ಬುದ್ಧಿ ಚೆನ್ನಾಗಿದ್ದರೆ ಈ ದುರಂತ ನಡೆಯುತ್ತಿರಲಿಲ್ಲ ಎಂದಿದೆ. ಈ ಘಟನೆಯ ಬಗ್ಗೆ ಒಂದು ನ್ಯಾಯಾಂಗ ತನಿಖೆ ನಡೆಸಬೇಕು, ದರ್ಗಾದ ಪುನರ್ರಚನೆಗೆ ತಕ್ಷಣ ಕ್ರಮ ಕೈಗೊಳ್ಳಬೇಕು ಹಾಗೂ ಸಂಕಟಕ್ಕೀಡಾದ ಜನಗಳ ಪುನರ್ವಸತಿಗೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

"ಇಂದು ಕಾಶ್ಮೀರಿತನದ ಇತಿಹಾಸದಲ್ಲೇ ಒಂದು ಅತ್ಯಂತ ಬೇಸರದ ದಿನ" ಎಂದು ಸಿಪಿಐ(ಎಂ) ಜಮ್ಮು-ಕಾಶ್ಮೀರ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಯೂಸುಫ್ ತರಿಗಾಮಿ ಹೇಳಿದ್ದಾರೆ.

ಕೊನೆಗೂ ಬೀಡಿ ಕಾರ್ಮಿಕರ ಕೂಲಿಯ ಕರಡು ಹೊರಬಂತು!

ಮೇ 4 ರಂದೇ ಸಿದ್ಧವಾಗಿದ್ದ ಕಾರ್ಮಿಕ ಇಲಾಖೆಯ ಅಧಿಕಾರಿಗಳ ಕುತಂತ್ರದಿಂದಾಗಿ ಹೊರಬರದ ಬೀಡಿ ಕಾರ್ಮಿಕರ ಕೂಲಿಯ ಪುನರ್ ವಿಮರ್ಶೆ ಕುರಿತಾದ ಕರ್ನಾಟಕ ರಾಜ್ಯ ಸರಕಾರದ ಕರಡು ಪ್ರಕಟಣೆ ಮೇ 9 ರಂದು ಪ್ರಕಟಗೊಂಡಿತು. ಮೇ 10 ರಂದು ಮುಖ್ಯಮಂತ್ರಿಗಳ ನಿವಾಸದ ಮುಂದೆ ಧರಣಿ ಹಾಗೂ ರಾಜ್ಯಾದ್ಯಂತ ಕಾರ್ಮಿಕ ಇಲಾಖೆಗಳ ಕಛೇರಿಗಳ ಮುಂದೆ ಪಿಕೆಟಿಂಗ್‌ನ ಕಾರ್ಯಕ್ರಮ ನಡೆಸಬೇಕೆಂದು ಸಿಐಟಿಯು ಮೇ 5 ರಂದು ಕರೆ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. 5 ದಿನಗಳ ಈ ವಿಳಂಬ ರಾಜ್ಯ ಸರಕಾರದ ಕಾರ್ಮಿಕ ಇಲಾಖೆಯ ಮುಖವಾಡ ಕಿತ್ತುಹಾಕುವಲ್ಲಿ ಯಶಸ್ವಿಯಾಗಿದೆ ಎಂದು ಸಿಐಟಿಯು ರಾಜ್ಯ ಸಮಿತಿ ಹೇಳಿದೆ.

ಈಗಿನ ಕರಡು ಪ್ರಕಟಣೆ ಸ್ವಾಗತಾರ್ಹವಾದರೂ ಇದರಲ್ಲಿ ಹಲವು ತಪ್ಪುಗಳಿವೆ ಎಂದೂ ಸಿಐಟಿಯು ರಾಜ್ಯ ಸಮಿತಿ ಟೀಕಿಸಿದೆ. ಇತರ ಕಾರ್ಮಿಕರಿಗೆ ಪಾಯಿಂಟಿಗೆ 3 ಪೈಸೆ ತುಟ್ಟಿಭತ್ಯೆ ನೀಡುತ್ತಿದ್ದರೂ ಬೀಡಿ ಕಾರ್ಮಿಕರಿಗೆ ಅದನ್ನು 2 ಪೈಸೆಯಲ್ಲೇ ಉಳಿಸಲಾಗಿದೆ. ಸಾವಿರ ಬೀಡಿಗೆ ಈಗ ಸೂಚಿಸಲಾದ ಹೆಚ್ಚಳ ರೂ. 6.46. ಈ ಹೆಚ್ಚಳ 2 ಪೈಸೆ ದರದಿಂದಾಗಿ ಸ್ವಲ್ಪ ದಿನದಲ್ಲೇ ಮಾಯವಾಗುವುದು ಖಂಡಿತ ಎಂದು ಸಿಐಟಿಯು ಹೇಳಿದೆ. ಏಕೆಂದರೆ ಸರ್ಕಾರದ ಸೂಚನೆ ಅನುಸರಿಸಿಯೂ ಈಗಿನ ಜೀವನ ವೆಚ್ಚ ಸೂಚ್ಯಂಕ 1513 ರಲ್ಲಿ ವಾಸ್ತವ ತುಟ್ಟಿಭತ್ಯೆ ಪ್ರತಿ ಸೂಚ್ಯಂಕಕ್ಕೆ 2.44 ರೂ. ಆಗುತ್ತದೆ. ಇದರ ಬದಲು 2 ಪೈಸೆ ಮಾತ್ರ ಕೊಟ್ಟರೆ ಸೂಚ್ಯಂಕ ಏರಿದಂತೆ ನಿಜ ಕೂಲಿ ಕಮ್ಮಿಯಾಗುವುದು ಖಚಿತ.

ಇದಲ್ಲದೆ ಈ ಪ್ರಕಟಣೆಯಲ್ಲಿ ಇನ್ನೂ ಕೆಲವು ನ್ಯೂನ್ಯತೆಗಳಿವೆ. ಕೆಲಸ ನೀಡದಿರುವ ದಿನಗಳಿಗೆ ಕೊಡಬೇಕಾದ ಖಾತ್ರಿ ಪಡಿಸಿದ ಕೂಲಿಯನ್ನು ರೂ. 11.10 ರಿಂದ ರೂ. 11.65 ಮಾಡಲಾಗಿದೆ. ಅಂದರೆ ಶೇ. 56 ಇದ್ದದನ್ನು ಶೇ. 34ಕ್ಕೆ ಇಳಿಸಿದೆ. ಇದು ಖಂಡನಾರ್ಹ ಧೋರಣೆ ಎಂದು ಸಿಐಟಿಯು ಟೀಕಿಸಿದೆ. ಇತರ ಕಾರ್ಮಿಕರಿಗೆ 20 ರಿಂದ 24 ಶೇಕಡಾ ನೀಡಿರುವಾಗ ಬೀಡಿ ಲೇಬಲಿಂಗ್ ಮಾಡುವ ಕಾರ್ಮಿಕರಿಗೆ ಮಾತ್ರ ಶೇ. 5 ಆಗಿದೆ ಎಂದೂ ಸಿಐಟಿಯು ಖಂಡಿಸಿದೆ.

ಸಿಐಟಿಯು ರಾಜ್ಯ ಸಮಿತಿಯ ಕರೆಯಂತೆ ಮೇ 10 ರಂದು ಮುಖ್ಯಮಂತ್ರಿಯವರ ನಿವಾಸದೆದುರು ಧರಣಿಯಲ್ಲಿ ಬೀಡಿ ಕಾರ್ಮಿಕರು ಹಾಗೂ ಪವರ್ ಲೂಮ್ ಕಾರ್ಮಿಕರಲ್ಲದೆ, ಅಸಂಘಟಿತ ಕಾರ್ಮಿಕರ ಈ ಹೋರಾಟಕ್ಕೆ ತಮ್ಮ ಬೆಂಬಲದ ಸಂಕೇತವಾಗಿ ಹಲವಾರು ಸಂಘಟಿತ ವಲಯದ ಕಾರ್ಮಿಕ ಸಂಘಟನೆಗಳ ಕಾರ್ಯಕರ್ತರು, ಮುಖಂಡರೂ ಭಾಗವಹಿಸಿದ್ದರು. ಧರಣಿಯ ನಂತರ ಮುಖ್ಯ

ಪುಟ 8 ಕ್ಕೆ

ಮೇ 10ರಂದು ಮುಖ್ಯಮಂತ್ರಿ ನಿವಾಸದೆದುರು ರಾಜ್ಯದ ಬೀಡಿ, ಪವರ್‌ಲೂಮ್ ಮತ್ತು ಇತರ ಅಸಂಘಟಿತ ಕಾರ್ಮಿಕರ ಬೇಡಿಕೆಗಳ ಮೇಲೆ ನಡೆದ ಧರಣಿಯನ್ನು ಉದ್ದೇಶಿಸಿ ಎ.ಜಿ.ಕೆ. ನಾಯರ್ ಮಾತನಾಡುತ್ತಿದ್ದಾರೆ. ಕಾಂ. ಸೂರಿಯವರು ಧರಣಿ ಕೂತಿರುವುದನ್ನು ಚಿತ್ರದಲ್ಲಿ ಕಾಣಬಹುದು.



ಇತಿಹಾಸದ ಪುಟಗಳಿಂದ

ಮೇ 9, 1945ರಂದು ಅಂದರೆ ಸರಿಯಾಗಿ ಐವತ್ತು ವರ್ಷಗಳ ಹಿಂದೆ ಇಡೀ ಯುರೋಪನ್ನು ಅಭೂತಪೂರ್ವ ಕ್ರೌರ್ಯಕ್ಕೆ ತುತ್ತಾಗಿಸಿದ್ದ ನಾಝೀ ಯುದ್ಧಯಂತ್ರ ಸೋವಿಯೆತ್ ಕೆಂಪು ಸೇನೆಗೆ ಶರಣಾಯಿತು. ಆದರೆ ಈ ಫ್ಯಾಸಿಸಂ ಎಂಬ ದುಷ್ಟ ರೋಗ ಮತ್ತೆ ಕಾಣಿಸಿಕೊಳ್ಳುವುದಿಲ್ಲ ಎಂದು ಭಾವಿಸಿದರೆ ಅದು ತಪ್ಪಾಗುತ್ತದೆ. ಏಕೆಂದರೆ ಈ ನಾಝೀವಾದ ಅಥವಾ ಫ್ಯಾಸಿಸಂ ಸಾಮ್ರಾಜ್ಯಶಾಹಿಯ ಒಂದು ಸ್ವರೂಪವೇ -ಅದರ ಅತ್ಯಂತ ಹೊಲಸು ಹಾಗೂ ಅಮಾನುಷ ರೂಪ.

ಫ್ಯಾಸಿಸಂನ ಈ ಅಮಾನುಷ ರೂಪ, ಕರಾಳ ಕೃತ್ಯಗಳು ಎರಡನೇ ಮಹಾಯುದ್ಧ ಮುಗಿದ ನಂತರ ನ್ಯೂರೆಂಬರ್ಗ್ ಎಂಬಲ್ಲಿ ನಡೆದ ಯುದ್ಧಾಪರಾಧಿಗಳ ವಿಚಾರಣೆಯ ಕಾಲದಲ್ಲಿ ಇಡೀ ವಿಶ್ವದ ಗಮನಕ್ಕೆ ಬಂತು. ಈ ವಿಚಾರಣೆಯ ಕಾಲದಲ್ಲಿ ಸೋವಿಯೆತ್ ಕಮ್ಯುನಿಸ್ಟ್ ಪಕ್ಷದ ಪತ್ರಿಕೆ 'ಪ್ರಾವ್ಡಾ' ದ ವರದಿಗಾರ ತಂಡದ ನೇತೃತ್ವ ವಹಿಸಿದ್ದ ಬೋರಿಸ್ ಪೋಲೆ ವಾಯ್ ಈ ವಿಚಾರಣೆಗಳನ್ನು ಕುರಿತಂತೆ 1967ರಲ್ಲಿ ಒಂದುಪುಸ್ತಕ ಪ್ರಕಟಿಸಿದರು. The Final Reckoning ಅಥವಾ 'ಕೊನೆಯ ತೀರ್ಪು' ನ್ಯೂರೆಂಬರ್ಗ್ ವಿಚಾರಣೆಯಲ್ಲಿನ ಕೆಲವು ದಾಖಲೆಗಳಿಂದ ಆಯ್ದ ಭೀಕರ ಸಂಗತಿಗಳ ಸಂಕಲನ ಇದು. ಪೋಲೆವಾಯ್ ಎರಡನೇ ಮಹಾಯುದ್ಧದ ಉನ್ಮಾದವನ್ನು ಹತ್ತಿರದಿಂದಲೇ ಪತ್ರಕರ್ತರಾಗಿ ನೋಡಿದವರು ಕೂಡಾ. ಇವರ ಈ ಕೃತಿಯ ಒಂದು ಅಧ್ಯಾಯವನ್ನುಇಲ್ಲಿ ಕೊಡುತ್ತಿದ್ದೇವೆ. ಫ್ಯಾಸಿಸಂನ ಕರಾಳತೆಯ ಒಂದು ಚಿತ್ರವನ್ನು ನೆನಪಿಸಲು -ಬೋರಿಸ್ ಪೋಲೆವಾಯ್ ರವರು ಹೇಳಿರುವಂತೆ 'ಜಗತ್ತು ಮರೆಯಲಿಚ್ಛಿಸುವ, ಆದರೆ ಎಂದೆಂದಿಗೂ ಮರೆಯಬಾರದ ಭಯಾನಕ ದುಸ್ವಪ್ನದ' ಒಂದು ಚಿತ್ರದ ಉಳಿದ ಭಾಗ.

ಮರೆಯಬಾರದ ಭಯಂಕರ ದುಸ್ವಪ್ನ

ಹಿಟ್ಲರನ ಪಂಥದ ದಬ್ಬಾಳಿಕೆಯ ಮಿಲಿಟರಿ ಅಧಿಕಾರಿಯಾಗಿದ್ದ ಸ್ಟ್ರೂಪ್, ತನ್ನ ಮೇಲಧಿಕಾರಿಗಳಿಗೆ ಕಳುಹಿಸಿದ ವರದಿಯಲ್ಲಿ ಈ ಕೃತ್ಯಗಳ ಪ್ರತಿಯೊಂದು ವಿವರವನ್ನೂ ತಿಳಿಸಿದ್ದ. ಹಾಗೆ ಮಾಡುವುದರಿಂದ ತನಗೆ ಪ್ರಶಸ್ತಿಯೇನಾದರೂ ದೊರಕಬಹುದೆಂದು ಅವನು ಆಶಿಸಿರಬೇಕು. ಲಕ್ಷಾಂತರ ಜನರ ಹಣೆಯ ಬರಹವನ್ನು ಪರಿಪೂರ್ಣವಾಗಿ ಸಂಘಟಿತವಾದ ಹಾಗೂ ತ್ವರಿತವಾದ ರೀತಿಯಲ್ಲಿ ತೀರ್ಮಾನಿಸಲಾಯಿತೆಂದು ಅವನು ಜಂಬ ಕೊಚ್ಚಿಕೊಂಡಿದ್ದ. ವರದಿಯನ್ನು ಮುಗಿಸುವ ವೇಳೆಗೆ, ತಾನು ಉದಾರಿಯಾಗಿ ಇಲ್ಲವೇ ಅಲಕ್ಷ್ಯದಿಂದ ವರ್ತಿಸಿರಬೇಕೆಂದು ತನ್ನ ಮೇಲಿನ ಅಧಿಕಾರಿಗಳು ಶಂಕಿಸಬಹುದೆಂಬ ಶಂಕೆ ಅವನಿಗೆ ಉಂಟಾಗಿರಬೇಕು. ಆದುದರಿಂದ, ಅವಶೇಷಗಳಲ್ಲಿ ಅವಿತುಕೊಂಡಿದ್ದವರನ್ನು ನಾಯಿಗಳ ನೆರವಿನಿಂದ ಹಿಡಿಯಲಾಯಿತೆಂಬ ಸಂಗತಿಯನ್ನು ಅವನು ವಿಶೇಷವಾಗಿ ಒತ್ತಿ ಹೇಳಿದ್ದ. ಪರಾರಿಯಾದ ಕೆಲವರು ಒಳಚರಂಡಿಯೊಳಕ್ಕೆ ಇಳಿದವರೆಂದೂ, ಅಲ್ಲಿಂದ ಅವರ ಕಿರುಚಾಟ ಮತ್ತು ನರಳಾಟಗಳು ಕೇಳಿಬಂದಿತೆಂದೂ ಅವನು ಒಪ್ಪಿಕೊಂಡಿದ್ದ. ಪುನಃ ಅವರ ಅನಗತ್ಯವಾದ ಸಂಕಟವನ್ನು ಕೊನೆಗಾಣಿಸುವುದಕ್ಕಾಗಿ ಅನಿಲದ ತಂಡವನ್ನು ಕರೆಸಲಾಯಿತೆಂದೂ, ಅದು ಮ್ಯಾನ್ ಹೋಲ್ ಗಳೊಳಕ್ಕೆ ಹೊಗೆಯ ಬಾಂಬ್ ಗಳನ್ನು ಎಸೆಯಿತೆಂದೂ, ಒಳ ಚರಂಡಿಗಳ ಒಳಗಿದ್ದ ಜನರು ಸುರಕ್ಷತೆಗೆಂದು ಹೊರಕ್ಕೆ ಬಂದಾಗ, ತಮ್ಮ ಬಿಲಗಳಿಂದ ಹೊರಕ್ಕೆ ನೆಗೆಯುವ ಮೊಲಗಳನ್ನು ಸಾಯಿಸುವಂತೆ, ಅವ

ವರದಿಯಲ್ಲಿ ತಿಳಿಸಿದ್ದ. ಒಂದೇ ದಿನ ೧೮೩ ಮ್ಯಾನ್ ಹೋಲ್ ಗಳ ಮುಚ್ಚಳವನ್ನು ತೆಗೆದು, ಅವುಗಳೊಳಕ್ಕೆ ಹೊಗೆಯ ಬಾಂಬ್ ಗಳನ್ನು ಹಾಕಲಾಯಿತೆಂದು ಸ್ಟ್ರೂಪ್ ಬರೆದಿದ್ದ. ಅದು ಮಾರಕವಾದ ವಿಷಾನಿಲವಿರಬೇಕೆಂದು ನಂಬಿ ಯೆಹೂದಿಗಳು ಸುರಕ್ಷತೆಗೆಂದು ಹೊರಕ್ಕೆ ಬಂದಿದ್ದರು. ಒಳಚರಂಡಿಗಳನ್ನು ಸಿಡಿಸಿದಾಗ ಅಧಿಕ ಸಂಖ್ಯೆಯ ಜನರು ನಿಷ್ಕೃಷ್ಟವಾದ ಸಂಖ್ಯೆಯೇನೆಂದು ಹೇಳುವಂತಿಲ್ಲ - ಸತ್ತಿದ್ದರು. ಈ ಕಾರ್ಯಚರಣೆಯಲ್ಲಿ ಸ್ಯಾಪರ್ ಗಳು ಅಸಾಧಾರಣವಾದ ಪರಿಣತಿಯನ್ನು ತೋರಿದ್ದರು. ಆಮೇಲೆ, ಈ ಬರ್ಬರ ಕಾರ್ಯಚರಣೆಯಲ್ಲಿನ ಸೈನಿಕರ ಕಾರ್ಯವನ್ನು ವಿವರಿಸುತ್ತ ಸ್ಟ್ರೂಪ್ ತನ್ನ ವರದಿಯಲ್ಲಿ ನ್ಯಾಷನಲ್ -ಸೋಷಲಿಸ್ಟ್ ಜರ್ಮನ್ ಪ್ರಜೆಯನ್ನು ಮುಂದೆ ಕಂಡಂತೆ ಕಾವ್ಯ ರೂಪದಲ್ಲಿ ವಿವರಿಸಿದ್ದಾನೆ: "ಪ್ರತಿರೋಧವು ಹೆಚ್ಚಿದ್ದಷ್ಟೂ, ಎಸ್.ಎಸ್.ನವರು, ಪೋಲೀಸರು ಮತ್ತು ಸೈನಿಕರು ಹೆಚ್ಚು ನಿರ್ದಯಿಗಳೂ, ನಿಷ್ಕರುಣಿಗಳೂ ಆದರು..... ನಿಕಟವಾದ ಸಹಕಾರ ಮನೋಭಾವದಿಂದ ಅವರು ತಮ್ಮ ಕರ್ತವ್ಯವನ್ನು ನಿರ್ವಹಿಸಿದರು. ಹಾಗೆ ಮಾಡುವಲ್ಲಿ ಅವರು ಮಹಾನ್ ಮಿಲಿಟರಿ ಮನೋಭಾವದಿಂದ ವರ್ತಿಸಿದರು. ಮುಂಜಾವದಿಂದ ರಾತ್ರಿಯಲ್ಲಿ ಬಹಳ ಹೊತ್ತಿನ ವರೆಗೆ ಅವರು ಆಯಾಸವನ್ನು ಲೆಕ್ಕಿಸದೆ ಅವಿರತವಾಗಿ ಕೆಲಸ ಮಾಡಿದರು. ಯೆಹೂದಿಗಳನ್ನು ಅವರು ಬೇಟೆಯಾಡಿದರು. ತಪ್ಪಿಸಿಕೊಳ್ಳಲು ಅವರಿಗೆ ಅವಕಾಶವನ್ನೇ ನೀಡಲಿಲ್ಲ. ಅಧಿಕಾರಿಗಳು, ಸೈನಿಕರು ಮತ್ತು ಪೋಲೀಸರು, ಅದರಲ್ಲಿಯೂ ರಣರಂಗದಲ್ಲಿ ಸೇವೆ ಸಲ್ಲಿಸಿದ್ದವರು, ನಿಜವಾಗಿಯೂ ದಿಟ್ಟ ರೀತಿಯಲ್ಲಿ ಜರ್ಮನ್ ಮನೋಭಾವವನ್ನು ಪ್ರದರ್ಶಿಸಿದರು."

ಈ ವ್ಯಕ್ತಿಗಳು ನಾಜಿ ಆಡಳಿತದ ಆದರ್ಶ ನಾಗರಿಕರಾಗಿದ್ದರು. "ನಿಜವಾದ ಟ್ಯೂಟನ್"ಗಳಿಗೆ (ಸ್ಕಾಂಡಿನೇವಿಯನರು, ಆಂಗ್ಲೋ ಸ್ಯಾಕ್ಸನರು, ಹಾಗೂ ಜರ್ಮನರನ್ನೊಳಗೊಂಡ ಟ್ಯೂಟನ್ ಜನಾಂಗದವರು) ಶಿಕ್ಷಣ ನೀಡಲು ಯತ್ನಿಸಿದ್ದ. ಕುಟಕಟೆಯಲ್ಲಿ ಕುಳಿತಿದ್ದ ಎಲ್ಲರೂ ಮೇಲಿನ ನಿರ್ದೇಶನವನ್ನೇ ಅನುಸರಿಸಿದ್ದರು. ಈ ರೀತಿಯಲ್ಲಿಯೇ ಅವರು ತಮ್ಮ ರಾಷ್ಟ್ರೀಯ ಕರ್ತವ್ಯಕ್ಕೆ ಅರ್ಥ ಕಲ್ಪಿಸಿದ್ದರು ಹಾಗೂ ಗೌರವ, ಧೈರ್ಯ ಮತ್ತು ಮಿಲಿಟರಿ ಶೌರ್ಯಗಳೆಂಬ ಪ್ರಾಚೀನ ಮಾನವ ಮೌಲ್ಯಗಳನ್ನು ಅರ್ಥಮಾಡಿಕೊಳ್ಳಲು ಯತ್ನಿಸಿದ್ದರು. ಅವರು ಬಡಾಯಿ ಕೊಚ್ಚಿಕೊಂಡಿದ್ದುದು ಈ ಬಗ್ಗೆಯೇ, ಹಾಗೂ ಅವರಿಗೆ ಪ್ರಶಸ್ತಿ ದೊರಕಿದ್ದುದೂ ಇದಕ್ಕಾಗಿಯೇ.

"ಈಗ ನನ್ನ ತಲೆಯಲ್ಲಿ ಯಾವ ಯೋಚನೆ ಹೊಳೆಯಿತು ಗೊತ್ತೇ?" ಎಂದು, ಯೂರಿ ಯಾನೋವ್ ವಿರಾಮ ಕಾಲದಲ್ಲಿ ಕ್ಷೋಭೆಯಿಂದ ನೆಟಿಕೆ ಮುರಿಯುತ್ತ ನನ್ನನ್ನು ಕೇಳಿದ. "ಅವರು ಕೊಂದ, ವಿಷ ಪ್ರಯೋಗಿಸಿದ ಹಾಗೂ ಹಿಂಸಿಸಿದ ಎಲ್ಲ ಜನರ ರಕ್ತವು ನೆಲದಿಂದ ಹೊರಸೂಸುವುದಾದರೆ, ಅವರೆಲ್ಲ ಒಂದು ರಕ್ತ ಸರೋವರದಲ್ಲಿ ಮುಳುಗಿ ಸಾಯುವವರು."

ಇವೆಲ್ಲ ಸಾಕಷ್ಟು ಘೋರವಾಗಿದ್ದುವು. ಆದರೆ, ಅತ್ಯಂತ ಘೋರವಾದ ಭಾಗ ಇನ್ನೂ ಬರಲಿತ್ತು. ಆ ಹಜಾರದ ಮಧ್ಯದಲ್ಲಿದ್ದ ಷೋಕೇಸ್ ಗಳು ಹಾಗೂ ಮೇಜಿನ ಮೇಲಿದ್ದ ದಪ್ಪನಾದ ವಸ್ತುಗಳ ಮೇಲಿನ ಹೊದಿಕೆ ಇನ್ನೂ ಹಾಗೆಯೇ ಇತ್ತು. ವಿರಾಮದ ಬಳಿಕ ಪ್ರಾಸಿಕ್ಯೂಟರ್, ಮೇಜಿನ ಮೇಲಿದ್ದ ಒಂದು ವಸ್ತುವಿನ ಮೇಲಿನ ಹೊದಿಕೆಯನ್ನು ತೆಗೆದು ಹಾಕಿದ. ದಿಗ್ಭ್ರಮೆಗೊಂಡ ಸಾರ್ವಜನಿಕರು ಮೌನ ತಾಳಿದರು. ಅನಂತರ ಭಯಗೊಂಡು ಮೆಲು ದನಿಯಲ್ಲಿ ಮಾತನಾಡಲಾರಂಭಿಸಿದರು. ಗಂಟೆಯಾಕಾರದ ಗಾಜಿನ ಪಾತ್ರೆಯ ಕೆಳಗೆ ಅಂದವಾದ ಅಮೃತಶಿಲೆಯ ಪೀಠದ ಮೇಲೆ ಮಾನವ ರುಂಡವೊಂದು ನಿಂತಿತ್ತು. ಹೌದು, ಅದೊಂದು ಮಾನವ ರುಂಡ. ಹಿಂದಕ್ಕೆ ಬಾಚಲಾದ ನೀಳವಾದ ಕೂದಲುಗಳಿದ್ದ ಆ ರುಂಡದ ಗಾತ್ರವನ್ನು ಯಾವುದೆಂದು ಅರ್ಥವಾಗದ ವಿಧಾನದಿಂದ ಒಂದು ದೊಡ್ಡ ಮುಷ್ಟಿಯ ಗಾತ್ರಕ್ಕೆ ಕುಗ್ಗಿಸಲಾಗಿತ್ತು. ಚಿತ್ರಹಿಂಸಾ ಶಿಬಿರವೊಂದರಲ್ಲಿನ ರಾಕ್ಷಸ ಸ್ವಭಾವದ ಕೆಲವು "ಕುಶಲಕರ್ಮಿಗಳು" ತಯಾರಿಸಿದ ಒಡವೆಗಳು ಮತ್ತು ಆಟದ ವಸ್ತುಗಳಲ್ಲಿ ಅದು ಒಂದಂತೆ; ಆ ಶಿಬಿರಕ್ಕೆ ಬಂದ ಗಣ್ಯ ಸಂದರ್ಶಕರಿಗೆ ಆ ಶಿಬಿರದ ಮುಖ್ಯಸ್ಥನು ಉಡುಗೊರೆಯಾಗಿ ಈ ವಸ್ತುಗಳನ್ನು ಕೊಡುತ್ತಿದ್ದನಂತೆ. ಆ ಗಣ್ಯ ಸಂದರ್ಶಕನ ಅಥವಾ ಸಂದರ್ಶಕಿಯ ಕಣ್ಣಿಗೆ ಬಿದ್ದ ಖೈದಿಯನ್ನು ಕೊಲ್ಲಲಾಗುತ್ತಿತ್ತು. ಅವನ ತಲೆಯೊಳಗಿನ ಮೆದುಳು ಮತ್ತು ಮೂಳೆಯನ್ನು ಚೂರುಗಳನ್ನು ಯಾವುದೋ ಒಂದು ತಂತ್ರದಿಂದ ಹೊರತೆಗೆಯಲಾಗುತ್ತಿತ್ತು. ಯಾವುದೋ ವಿಧಾನದಿಂದ ತಲೆಯ ಗಾತ್ರವನ್ನು ಕುಗ್ಗಿಸಲಾಗುತ್ತಿತ್ತು ಹಾಗೂ ಅದರೊಳಕ್ಕೆ ಏನನ್ನಾದರೂ ತುಂಬಿ ಅದನ್ನು ಸಣ್ಣ ಪ್ರತಿಮೆ ಅಥವಾ ಆಭರಣದಂತೆ ಪೀಠದ ಮೇಲೆ ಕೂರಿಸಲಾಗುತ್ತಿತ್ತು.

ಗಂಟೆಯಾಕಾರದ ಗಾಜಿನ ಪಾತ್ರೆಯೊಳಗಿನ ಆ ತಲೆಯನ್ನು ವೀಕ್ಷಿಸಿದಂತೆ, ನಮ್ಮ ಮೈಮೇಲೆ ಎಂಥದೋ ಹುಳು ಹರಿದಂತಾಯಿತು. ನಮ್ಮ ಮೇಲ್ಗಡೆ ಸಂದರ್ಶಕರ ಗ್ಯಾಲರಿಯಲ್ಲಿದ್ದ ಸ್ತ್ರೀಯೊಬ್ಬಳು ಉನ್ಮಾದಗೊಂಡವಳಂತೆ ಕಿರುಚಿಕೊಂಡಳು.

ಲೆವ್ ಸ್ಮಿರ್ನೋವ್ ತನ್ನ ಮಾತನ್ನು ಮುಂದುವರಿಸಿದ. ಕೋನಿಗ್ಸ್ ಬರ್ಗ್ ಸಂಶೋಧನ ಸಂಸ್ಥೆಯ ಸಿಗ್ಮಂಡ್ ಮ್ಯಾಜುರ್ ಎಂಬ 'ವಿಜ್ಞಾನಿ'ಯ ಸಾಕ್ಷ್ಯವನ್ನು ಆತ ಮಂಡಿಸಿದ. ವಿಜ್ಞಾನದ ಪದಗಳನ್ನು ಬಳಸಿ ಶಾಂತಚಿತ್ತನಾಗಿ ಮಾತನಾಡಿದ ಈ 'ವಿಜ್ಞಾನಿ'ಯು, ಆ ಸಂಸ್ಥೆಯ ಪ್ರಯೋಗಾಲಯಗಳು ಬೃಹದಾಕಾರದ ಮೃತ್ಯು ಶಿಬಿರಗಳ ವ್ಯರ್ಥ ಉತ್ಪನ್ನಗಳಾದ ಮಾನವರ ಮಾಂಸ,ಕೊಬ್ಬು ಮತ್ತು ಚರ್ಮಗಳನ್ನು ಕೈಗಾರಿಕೆಗಳಲ್ಲಿ ಯುಕ್ತವಾಗಿ ಬಳಸುವ ಮಾರ್ಗಗಳನ್ನು ಕುರಿತು ಹೇಗೆ ಸೋಧ ನಡೆಸಿತೆಂಬುದನ್ನು ವಿವರಿಸಿದ.

ಪ್ರಾಸಿಕ್ಯೂಟರ್ ನ ಸೂಚನೆಯಂತೆ, ಪ್ರದರ್ಶನದ ಸ್ಟಾಂಡ್ ಗಳು ಮತ್ತು ಮೇಜುಗಳ ಮೇಲಿನ ಹೊದಿಕೆಗಳೆಲ್ಲವನ್ನು ತೆಗೆದುಹಾಕಲಾಯಿತು. ಪರಿಷ್ಕರಣದ ನಾನಾ ಹಂತಗಳಲ್ಲಿದ್ದ -ಹೊಸದಾಗಿ ಸುಲಿದ, ಮಾಂಸವನ್ನು ತೆಗೆದು ಹಾಕಲಾಗಿದ್ದ, ಹದಮಾಡಿದ್ದ -ಮಾನವರ ಚರ್ಮಗಳನ್ನು, ಮತ್ತು ಕೊನೆಯದಾಗಿ ಚರ್ಮದಿಂದ ತಯಾರು ಮಾಡಲಾಗಿದ್ದ ಪದಾರ್ಥಗಳನ್ನು ಸೊಗಸಾದ ಸ್ತ್ರೀಯರ ಪಾದರಕ್ಷೆಗಳು, ಕೈಚೀಲಗಳು, ಬ್ರೀಫ್ ಕೇಸ್ ಗಳು ಬ್ಲಾಟಿಂಗ್ ಪ್ಯಾಡ್ ಗಳು ಮತ್ತು ಜಾಕೆಟ್ ಗಳು ಸಹ ನಾವು ಕಂಡೆವು. ನಾನಾ ಬಗೆಯ ಸಾಬೂನಿನ ಪೆಟ್ಟಿಗೆಗಳೂ ಮೇಜುಗಳು ಮೇಲೆ ಇದ್ದವು. ಸಾಧಾರಣವಾದ ಸಾಬೂನು, ಗೃಹಕೃತ್ಯದ ಸಾಬೂನು, ಮಕ್ಕಳಿಗಾಗಿ ಬಳಸುವ ಸಾಬೂನು, ಕೈಗಾರಿಕೆಗಳಿಗಾಗಿ ಬಳಸುವ ಸಾಬೂನು, ಪರಿಮಳಯುತವಾದ ಮೈ ಸಾಬೂನು ಇವೆಲ್ಲ ಆಕರ್ಷಕವಾದ ರಂಗು ರಂಗಿನ ಹೊದಿಕೆಗಳಲ್ಲಿ ಇದ್ದುವು.



ನಾಝಿ ಸೈನಿಕರು ಒಬ್ಬ ಯುದ್ಧ ಬಂಧಿಯ ತಲೆ ಕಡಿಯಲು ಸಂತೋಷ ಪಡುತ್ತಿದ್ದಾರೆ!

ಸಂಪೂರ್ಣ ನೀರವತೆಯಲ್ಲಿ ಪ್ರಾಸಿಕ್ಯೂಟರ್ ತನ್ನ ಮಾತನ್ನು ಮುಂದುವರಿಸಿದ. ಪ್ರತಿವಾದಿಗಳು ಸೆಟೆದುಕೊಂಡು ನಾನಾ ಭಂಗಿಗಳಲ್ಲಿ ಕುಳಿದಿದ್ದರು. ರಿಬ್ಬನ್ ಟ್ರಾಪ್ ತನ್ನ ಕಣ್ಣುಗಳನ್ನು ಹೊರಳಿಸುತ್ತಿದ್ದ, ನೋವಿನ ಮುಖವನ್ನು ಹೊಂದಿದ್ದ ಅವನು ತನ್ನ ತುಟಿಗಳನ್ನು ಕಚ್ಚಿಕೊಳ್ಳುತ್ತಿದ್ದ. ಮುಖವನ್ನು ಹುಳ್ಳಗೆ ಮಾಡಿಕೊಂಡಿದ್ದ ಗೋರಿಂಗ್ ತನ್ನ ವಕೀಲನಿಗೆ ಒಂದಾಗೂತ್ತಲೊಂದರಂತೆ ಟಿಪ್ಪಣಿಗಳನ್ನು ಬರೆದುಕೊಡುತ್ತಿದ್ದ. ಸ್ಟ್ರೈಶರ್ ಕೆಮ್ಮುತ್ತಿದ್ದ ಹಾಗೂ ಉನ್ಮಾದಕ್ಕೊಳಗಾದವನಂತೆ ನಗುತ್ತಿದ್ದ. ಸೊಣಕಲನಾಗಿದ್ದ ಫಾಕ್ಟ್ ಮತ್ತೆ ಜ್ಞಾನ ತಪ್ಪುವನಂತೆ ಕಾಣಿಸಿದ; ಸಾಮಾನ್ಯವಾಗಿ ನಿಶ್ಚಲವಾಗಿರುತ್ತಿದ್ದ, ಕ್ರೂರವಾದ ಬುಲ್ ಡಾಗ್ ನ ಮುಖವನ್ನು ಹೋಲುತ್ತಿದ್ದ ಅವನ ಮುಖವು ಮಯಣದಿಂದ ಮಾಡಿದಂತೆ ಹಾಗೂ ಗಲಿಬಿಲಿ ಗೊಂಡಂತೆ ತೋರುತ್ತಿತ್ತು.

ಕ್ರುಷಿನ್ ಸ್ಕಿ ಮತ್ತು ನಾನು ಆಸ್ವಿಚಿಂಗೆ ಭೇಟಿಕೊಟ್ಟ ಪ್ರಪ್ರಥಮ ವರದಿಗಾರರು. ಆಗ ಅದನ್ನು ಆಕ್ಷ್ ವಿಟ್ಸ್ ಎಂಬ ಜರ್ಮನ್ ಹೆಸರಿನಿಂದಲೇ ಇನ್ನೂ ಕರೆಯಲಾಗುತ್ತಿತ್ತು. ನಮ್ಮ ಸೇನೆಗಳ ನಂತರ ನಾವು ವಿಮಾನದಲ್ಲಿ ಊರನ್ನು ತಲುಪಿದ್ದೆವು ಹಾಗೂ ಆ ಮೃತ್ಯು ಶಿಬಿರವನ್ನು ಅದು ಕೆಲಸ ಮಾಡುತ್ತಿದ್ದ ಸ್ಥಿತಿಯಲ್ಲಿಯೇ ಕಂಡಿದ್ದೇವು. ವಿಂಗಡಿಸಿ ದರ್ಜೆಗನುಗುಣವಾಗಿ ರಾಶಿ ಹಾಕಲಾಗಿದ್ದ ಅಥವಾ ರವಾನೆಗಾಗಿ ಕಟ್ಟುಗಳಾಗಿ ಸಿದ್ಧವಾಗಿದ್ದ ಮಾನವರ ಕೂದಲಿನಿಂದ ಭರ್ತಿಯಾಗಿದ್ದ ಉಗ್ರಾಣವನ್ನು ನಾವು ನೋಡಿದ್ದೆವು. ಬರ್ಬರ ವೈದ್ಯರ ಅಸಹ್ಯವಾದ ಪ್ರಯೋಗಗಳಿಗೆ ಗುರಿಯಾಗಿದ್ದ ಮಕ್ಕಳನ್ನುನಾವು ವೀಕ್ಷಿಸಿದ್ದೆವು. ಕಡಿಮೆ ಉಷ್ಣಾಂಶಗಳಿಗೆ ಒಡ್ಡಲಾದ ಮಾನವ ಶರೀರವು ತನ್ನ ಹಿಂದಿನ ಸ್ಥಿತಿಗೆ ಬರುವುದೇ ಎಂಬುದನ್ನು ಪರೀಕ್ಷಿಸಲು ಬರ್ಬರ ವೈದ್ಯರು ಬಳಸಿಕೊಂಡಿದ್ದ ಇಬ್ಬರು ರಷ್ಯನ್ ಯುದ್ಧ ಖೈದಿಗಳ ಜತೆ ನಾವು ಮಾತನಾಡಿದೆವು. -ಪ್ರಜ್ಞೆಯನ್ನು ಕಳೆದುಕೊಳ್ಳುವವರೆಗೆ ಅವರನ್ನು ಕ್ರಮೇಣ ಶೀತೀಕರಿಸಲಾಗಿತ್ತು ಹಾಗೂ ಆಮೇಲೆ ನಿಧಾನವಾಗಿ ಮಾಮೂಲು ಸ್ಥಿತಿಗೆ ವಾಪಸು ತರಲಾಗಿತ್ತು. ಇವೆಲ್ಲ ನಮ್ಮ ಮನಸ್ಸಿನಲ್ಲಿ ಇನ್ನೂ ಹಸಿರಾಗಿದ್ದರೂ, ಪುರಾವೆಯಾಗಿ ಮಂಡಿಸಲಾದ "ಕಾರ್ಖಾನೆಗಳ" ಹಡವಲು ಉತ್ಪನ್ನಗಳನ್ನು ಕಂಡು ನಮಗೆ ಎದೆ ಒಡೆದಂತಾಯಿತು. ನನಗೆ ಹೊಟ್ಟೆ ತೊಳೆಸಿದಂತಾಯಿತು. ನನ್ನ ಆಸನದಿಂದ ನೆಗೆದು ನ್ಯಾಯಾಲಯದಿಂದ ಓಡಿ ಹೋಗಬೇಕೆನಿಸಿತು.

ಖಚಿತವಾಗಿ ಹೇಳುವುದಾದರೆ, ಇವು ನಮಗೆ ಹೊಸತೇನೂ ಆಗಿರಲಿಲ್ಲ. ರೈಸ್ಸ್ ಬ್ಯಾಂಕ್ ನ (ಹಿಟ್ಲರ್ ಜರ್ಮನಿಯ ಕೇಂದ್ರ ಸರಕಾರಿ ಬ್ಯಾಂಕ್) ಮಾಜಿ ಅಧ್ಯಕ್ಷ ಹಾಗೂ ಯುದ್ಧದ ಆರ್ಥಿಕ ವ್ಯವಸ್ಥೆಯ ಮಾಜಿ ಕಮೀಷನರ್ ಜನರಲ್ ಆದ ವಾಲ್ಟರ್ ಫಂಕ್ ನ ಮೇಲಿನ ಪುರಾವೆಯನ್ನು ಅಮೇರಿಕದ ಪ್ರಾಸಿಕ್ಯೂಷನ್ ಈಗಾಗಲೇ ಮಂಡಿಸಿತ್ತು. ಚಿತ್ರಹಿಂಸಾ ಶಿಬಿರಗಳಲ್ಲಿ ತಾನು ವಿಶೇಷವಾಗಿ ಸಂಘಟಿಸಿದ್ದ ತಂಡಗಳು, ಕೊಲ್ಲಲ್ಪಟ್ಟವರ ಬಾಯಿಗಳಿಂದ ತೆಗೆಯಲಾದ ಚಿನ್ನ ಮತ್ತು ಪ್ಲಾಟಿನಂನ ಕೃತಕ ಹಲ್ಲುಗಳೆಲ್ಲವನ್ನೂ ಸರಿಯಾಗಿ ಎಣಿಸಿ, ಸಂಗ್ರಹಿಸಿ, ತಿಜೋರಿಗಳಲ್ಲಿ ಇಡಬೇಕೆಂಬ ಆಜ್ಞೆಯನ್ನುಳ್ಳ ಅವನ ಸೂಚನೆಗಳೇ ಆ ಪುರಾವೆಯಾಗಿತ್ತು. ರೈಸ್ಸ್ ಬ್ಯಾಂಕ್ ಗೆ ಈ ಬೆಲೆಬಾಳುವ ಲೋಹಗಳಿಂದ ಎಷ್ಟೊಂದು ಭಾರಿ ಆದಾಯ ಬರುತ್ತಿತ್ತೆಂಬುದು ನಮಗೆ ತಿಳಿದಿತ್ತು. ಈ ಪುರಾವೆಯು ನಿಜವಾಗಿಯೂ ಭಯಾನಕವಾಗಿತ್ತು. ಆದರೂ ಅದನ್ನು ಕೇಳಬೇಕೆನಿಸುತ್ತಿತ್ತು. ಆದರೆ, ಶಾಂತಚಿತ್ತದ ಕಾರ್ಯಸಾಧಕನ ರೀತಿಯಲ್ಲಿ ಬರೆಯಲಾಗಿದ್ದ ಸಿಗ್ಮಂಡ್ ಮ್ಯಾಜುರ್ ನ ಪುರಾವೆಯಲ್ಲಿ ನಿಜವಾಗಿ ಭಯಂಕರವಾದುದು ಏನೋ ಇತ್ತು: "ಮಾನವ ಚರ್ಮವು ಕೂದಲಿನಿಂದ ಆವೃತವಾಗಿಲ್ಲ, ಹೀಗಾಗಿ ಅದನ್ನು ಚೆನ್ನಾಗಿ ಪರಿಷ್ಕರಿಸಬಹುದು. ಪ್ರಾಣಿಗಳ ತೊಗಲುಗಳ ಪರಿಷ್ಕರಣಕ್ಕೆ ಹೋಲಿಸಿದರೆ, ಅನೇಕ ದುಬಾರಿ ಕ್ರಿಯೆಗಳನ್ನು ಇದರಲ್ಲಿ ಬಿಟ್ಟುಬಿಡಬಹುದು". ಅಥವಾ "ತಣ್ಣಗೆ ಮಾಡಿದ ಮೇಲೆ, ಕುದಿದ ದ್ರವ್ಯವನ್ನು ಮಾಮೂಲಿನ ಅಚ್ಚುಗಳಿಗೆ ಸುರಿಯಲಾಗುತ್ತದೆ. ಸಾಬೂನು ಸಿದ್ಧವಾಗುತ್ತದೆ".

ಕುಕ್ರಿನಿಕ್ಸಿ ತ್ರಯರು ದಿಗ್ಭ್ರಮೆಗೊಂಡು ಕುಳಿತಿದ್ದುದನ್ನೂ, ಅವರ ಮುಂದೆ ಅವರ ಫೋಲ್ಡರ್ ಗಳು ತೆರೆದಿದ್ದುದನ್ನೂ, ಅವರ ಕೈಗಳು ಪೆನ್ಸಿಲ್ ಗಳನ್ನು ಹಿಡಿದುಕೊಂಡಿದ್ದುದನ್ನೂ ನಾನು ಗಮನಿಸಿದೆ.

"ಇದಕ್ಕೆ ಹೋಲಿಸಿದರೆ, ಡಾಂಟೆಯ ಇನ್ ಫರ್ನೋ (ನರಕ) ಸಂಗೀತಮಯವಾದ ಸುಖಾಂತ್ಯ ನಾಟಕದಂತಿದೆ" ಎಂದು ಯೂರಿ ಕೊರೊಲ್ಕೋವ್ ಯಾರಿಗೋ ಪಿಸುಗುಟ್ಟಿದ. ಆದರೆ, ವಿಚಾರಣಾ ಕೊಠಡಿಯು ಎಷ್ಟು ನೀರವವಾಗಿತ್ತೆಂದರೆ, ಮೂರು ಸಾಲುಗಳ ಆಚೆ ಅವನು ಪಿಸುಗುಟ್ಟಿದುದು ನಮಗೆ ಕೇಳಿಸಿತು.

ನಾವು ಅಲ್ಲಿಂದ ಮೌನವಾಗಿ ಹೊರಬಿದ್ದೆವು.

"ಇನ್ನು ಮುಂದೆ ನಾನು ಮಾಂಸವನ್ನು ತಿನ್ನಲಾರೆ" ಎಂದು ಮಿಖಾಯಿಲ್ ಗುಸ್ ವ್ಯಾನನ್ನು ಹತ್ತುತ್ತಾ ಹೇಳಿದ.

"ಹಾಗದರೆ, ತರ್ಕದ ರೀತ್ಯಾ ನೀನು ಸಾಬೂನನ್ನು ಬಳಸಬಾರದು" ಎಂದು ಸೆಮ್ಯಾನ್ ನರಿನ್ಯಾನಿ ಖೇದದಿಂದ ತಮಾಷೆ ಮಾಡಿದ.

ನಮ್ಮ ದುಭಾಷಿ ಮಾಯಾಳ ಸ್ಥಿತಿ ಶೋಚನೀಯವಾಗಿತ್ತು. ನಡುಗುತ್ತಿದ್ದ ಆ ಕಾರಿನಲ್ಲಿ ಕುಳಿತಿದ್ದ ಅವಳು ಉನ್ಮತ್ತಳಂತೆ ಅಳುತ್ತಿದ್ದಳು, ತನ್ನ ತುಟಿಗಳನ್ನು ಕಚ್ಚಿಕೊಳ್ಳುತ್ತಿದ್ದಳು. ಅವಳ ಮಗ್ಗುಲಲ್ಲಿ ಕುಳಿತಿದ್ದ ಟೈಪಿಸ್ಟ್ ಗಳು ಆಕೆಯ ಮೂಗಿಗೆ ಘಾಟಾಗಿದ್ದ, ಮೂಸುವ ಲವಣಗಳನ್ನು ಹಿಡಿದಿದ್ದರು.

ಕನಿಷ್ಠ ಪಕ್ಷ ಆ ಒಂದು ದಿನವಂತೂ ನಮಗೆ ನಿಜವಾಗಿ ಹಸಿವೂ ಆಗಲಿಲ್ಲ, ನಿದ್ರೆಯೂ ಬರಲಿಲ್ಲ.



ರಾಜ್ಯಾದ್ಯಂತ ಸಂಭ್ರಮದ ಮೇ ದಿನಾಚರಣೆ

ಕರ್ನಾಟಕ
ಸುದ್ದಿ
ಸಮಾಚಾರ

ಬೆಂಗಳೂರು:

ಮೇ 1, 1995 ರಂದು ಸುಮಾರು 5,000 ಅಸಂಘಟಿತ ಮತ್ತು ಸಂಘಟಿತ ವಲಯದ ಕಾರ್ಮಿಕರು ನಗರದ ವಿವಿಧ ಭಾಗಗಳಿಂದ ಸಿಲ್ವರ್ ಜ್ಯೂಬಿಲಿ ಪಾರ್ಕಿಗೆ ಮೆರವಣಿಗೆಯಲ್ಲಿ ಬಂದು ಸಭೆಯಲ್ಲಿ ಭಾಗವಹಿಸಿ ಮೇ ದಿನಾಚರಣೆಯನ್ನು ನಡೆಸಿದರು. ಸಿಐಟಿಯು, ಎ.ಐ.ಟಿ.ಯು.ಸಿ., ಹೆಚ್.ಎಂ.ಕೆ.ಪಿ., ಹೆಚ್.ಎಂ.ಎಸ್., ಯು.ಟಿ.ಯು.ಸಿ.-(ಎಲ್.ಎಸ್.) ಬ್ಯಾಂಕ್ ಮತ್ತು ಇನ್ಸೂರೆನ್ಸ್ ಎಂಪ್ಲಾಯೀಸ್ ಮತ್ತು ಅಧಿಕಾರಿಗಳ ಸಂಘಗಳು, ಫೆಡರೇಷನ್ ಆಫ್ ಮರ್ಕೆಂಟೈಲ್ ಎಂಪ್ಲಾಯೀಸ್ ಯೂನಿಯನ್ಸ್ (ಎಫ್.ಎಂ.ಇ.ಯು) ಮೈಕೋ ಎಂಪ್ಲಾಯೀಸ್ ಅಸೋಸಿಯೇಷನ್ ಮತ್ತು ಹಿಂದುಸ್ಥಾನ್ ಏರೋನಾಟಿಕ್ಸ್ ಎಂಪ್ಲಾಯೀಸ್ ಅಸೋಸಿಯೇಷನ್ ಜಂಟಿಯಾಗಿ ಮೇ ದಿನಾಚರಣಾ ಸಮಿತಿಯನ್ನು ರಚಿಸಿದ್ದಾಗಿತ್ತು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಕೆ.ಎಸ್. ಸುಬ್ರಮಣ್ಯ (ಸಿಐಟಿಯು) ವಹಿಸಿದ್ದರು. ಕಾಂ. ಹರಿಗೋವಿಂದ್ (ಎ.ಐ.ಟಿ.ಯು.ಸಿ) ಸ್ವಾಗತ ಭಾಷಣ ಮಾಡಿದರು. ನಂತರ ಸಭೆಯನ್ನು ಉದ್ದೇಶಿಸಿ ಕಾಂ. ಶ್ರೀಕಂಠ ಮೂರ್ತಿ (ಹೆಚ್.ಎಂ.ಎಸ್.) ಕಾಂ. ಮಂಜುನಾಥ್ (ಎ.ಐ.ಟಿ.ಯು.ಸಿ.) ಕಾಂ. ಸಿಂಹಾದ್ರಿ,(ಯು.ಟಿ.ಯು.ಸಿ.-ಎಲ್.ಎಸ್.) ಕಾಂ. ಸುಬ್ರಮಣ್ಯ (ಹೆಚ್.ಎ.ಇ.ಎ) ಮಾತನಾಡಿ ಮೇ ದಿನದ ಮಹತ್ವವನ್ನು ವಿವರಿಸಿದರು.

ಸಭಾಧ್ಯಕ್ಷರು ಈ ಕೆಳಗಿನ ಪ್ರತಿಜ್ಞೆಯ ನಿರ್ಣಯವೊಂದನ್ನು ಸಭೆಯ ಮುಂದಿಟ್ಟರು. ಸರ್ವಾನುಮತದಿಂದ ನಿರ್ಣಯವನ್ನು ಸ್ವೀಕರಿಸಲಾಯಿತು. (ಬಾಕ್ಸ್ ನೋಡಿ) ಸಭೆ ಕಾಂ. ದೀಪಕ್ (ಎ.ಐ.ಟಿ.ಯು.ಸಿ.)ರವರ ವಂದನಾರ್ಪಣೆಯೊಂದಿಗೆ ಮೇ ದಿನದ ಹೋರಾಟದ ಘೋಷಣೆಗಳೊಂದಿಗೆ ಮುಕ್ತಾಯವಾಯಿತು.

ಮೇ ದಿನದ ಪ್ರತಿಜ್ಞೆ

1. ರಾಜ್ಯದ ಮತ್ತು ಬೆಂಗಳೂರಿನ ಆರ್ಥಿಕತೆಗೆ ಬಹು ಮುಖ್ಯವಾದ ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳನ್ನು ಉಳಿಸಲು ಮತ್ತು ಬೆಳೆಸಲು ನಾವು ಹೋರಾಡುತ್ತೇವೆ,

2. ಸನ್ಮಾನ್ಯ ವಿಶ್ವೇಶ್ವರಯ್ಯನವರಿಂದ ಸ್ಥಾಪಿಸಲ್ಪಟ್ಟ ರಾಜ್ಯ ಸರ್ಕಾರದ ಕಾರ್ಖಾನೆಗಳನ್ನು ಉಳಿಸಲು ಮತ್ತು ಬೆಳೆಸಲು ನಾವು ಹೋರಾಡುತ್ತೇವೆ,

3. ಎಂಟು ಗಂಟೆಯ ಕೆಲಸ, 1886ರಿಂದ ಕೇಳುತ್ತಾ ಬಂದಿದ್ದರೂ, 110 ವರ್ಷಗಳ ನಂತರ ಬೆಂಗಳೂರಿನ ಲಕ್ಷಗಟ್ಟಲೆ ಕಾರ್ಮಿಕರಿಗೆ ಹೆಚ್ಚಿನ ಗಂಟೆಗಳ ಕಾಲ ದುಡಿಸಿಕೊಳ್ಳಲ್ಪಡುವ ವ್ಯವಸ್ಥೆ ಇರುವುದನ್ನು ತೊಡೆದು ಹಾಕಲು ನಾವು ಹೋರಾಡುತ್ತೇವೆ,

4. ಇ.ಎಸ್.ಐ., ಪಿ.ಎಫ್, ಹೆರಿಗೆ ರಜಾ, ಗ್ರಾಚ್ಯುಯಿಟಿ, ಮುಂತಾದ ಸೌಲಭ್ಯಗಳ ಕಾನೂನು ಎಲ್ಲಾ ಕಾರ್ಮಿಕರಿಗೂ ಸಿಗುವಂತೆ ಜಾರಿಯಾಗಲು ನಾವು ಈ ವರ್ಷದಲ್ಲೇ ಚಳುವಳಿ ಮಾಡುತ್ತೇವೆ.

5. ಎಲ್ಲಾ ಕಾರ್ಮಿಕರಿಗೂ ಸಾಮಾನ್ಯ ಜೀವನಕ್ಕಾದರೂ ಕೂಲಿ ಸಿಗಲು ಸೂಕ್ತ ಕನಿಷ್ಠ ವೇತನದ ಪ್ರಕಟಣೆಗಾಗಿ ಮತ್ತು ಜಾರಿಗಾಗಿ ನಾವು ಹೋರಾಡುತ್ತೇವೆ,

6. ಕಾಂಗ್ರೆಸ್ ಸರಕಾರದ ಆರ್ಥಿಕ ನೀತಿಯನ್ನು ವಿರೋಧಿಸಲು ಸಮಸ್ತ ಜನ ಸಮೂಹವನ್ನು ಒಗ್ಗೂಡಿಸಲು ಪಣ ತೊಡುತ್ತಾ, ಜನತಾದಳ ಸರಕಾರ ಈ ನೀತಿಯನ್ನು ಅನುಸರಿಸಬಾರದೆಂದು ಒತ್ತಾಯಿಸುತ್ತೇವೆ,

7. ಕೋಮುವಾದಿ, ಮೂಲಭೂತವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಸಮಸ್ತ ಜನ ಸಮೂಹವನ್ನು ಒಗ್ಗೂಡಿಸಿ ಹೋರಾಡುತ್ತೇವೆ,

8. ಸಮಗ್ರ ಭೂ ಸುಧಾರಣೆಯನ್ನು ಒಳಗೊಂಡ, ಸ್ವಾವಲಂಬನಾಧಾರಿತ ಬದಲಿ ಆರ್ಥಿಕ ನೀತಿಗಾಗಿ ಹೋರಾಡುತ್ತೇವೆ ಮತ್ತು ಜಾತ್ಯಾತೀತ ಜನತಾಂತ್ರಿಕ ಹಾಗೂ ಸಮಾಜವಾದಿ ಶಕ್ತಿಗಳನ್ನು ಒಗ್ಗೂಡಿಸುತ್ತೇವೆ. ದೇಶದ ಸಾರ್ವಭೌಮತ್ವವನ್ನು ರಕ್ಷಿಸುತ್ತೇವೆ.

9. ಮೇಲಿನ ಹಕ್ಕು ಕೇಳಿಕೆಗಳಿಗೆ ಇಲ್ಲಿ ನೆರೆದ ನಾಯಕರುಗಳು ಒಂದುಗೂಡಿ ಬೃಹತ್ ಐಕ್ಯತಾ ಹೋರಾಟಕ್ಕೆ ನೇತೃತ್ವ ಕೊಡಬೇಕೆಂದು ಒತ್ತಾಯಿಸುತ್ತೇವೆ.

ಬಿಜಾಪುರ:

ಮೇ1 ರಂದು ಎ.ಪಿ.ಎಂ.ಸಿ.ಯಿಂದ ಸಿಐಟಿಯು ಹಾಗೂ ಎಐಟಿಯುಸಿ ಕಾರ್ಮಿಕ ಸಂಘಟನೆಗಳು ಬೃಹತ್ ಮೆರವಣಿಗೆ ಹೊರಟು ಮುಖ್ಯ ಬೀದಿಗಳಲ್ಲಿ ಹಾಯ್ದು ಜಗತ್ತಿನ ಕಾರ್ಮಿಕರೆ ಒಂದಾಗಿ, ಬಂಡವಾಳಶಾಹಿ ಮುರ್ದಾಬಾದ್ ಸಮಾಜವಾದ ಜಿಂದಾಬಾದ್ ಮುಂತಾದ ಘೋಷಣೆ ಕೂಗುತ್ತ ಬಸವನದಲ್ಲಿ ಸಭೆ ಸೇರಿತು. ಸಭೆ ಅಧ್ಯಕ್ಷತೆಯನ್ನು ಪಿ.ಎಸ್.ಡಬ್ಲ್ಯುನ ಈರಣ್ಣ ಹಳ್ಳಿ ವಹಿಸಿದ್ದರೂ ಸಿ.ಐ.ಟಿ.ಯು.ನ ಮುಖಂಡ ಮುನ್ನಸಾಬ ಕಲಾದಗಿ ಸ್ವಾಗತಿಸಿದರು. ನಿಧನರಾದ ಮಾಜಿ ಕಾರ್ಮಿಕ ಮುಖಂಡರಾದ ಸುಂದರೇಶ ಸಾಹಿತಿಗಳಾದ ಕುವೆಂಪು, ಮಾಜಿ ಪ್ರಧಾನಿ ಮುರಾರ್ಜಿಗೆ ಮುಂತಾದವರಿಗೆ ಶ್ರದ್ಧಾಂಜಲಿಯನ್ನು ಶಿವರಾಜ ಬಿರಾದಾರ ಅರ್ಪಿಸಿದರು. ಭೀಮಶಿ ಕಲಾದಗಿ ಕಾರ್ಮಿಕ ಮುಖಂಡ ಹಾಗೂ ಎಲ್.ಕೆ. ಚಂಚಲಕರ. ಡಿ.ಹೆಚ್. ಮುಲ್ಲಾ, ಪ್ರಕಾಶ ಹಿಟ್ನಳ್ಳಿ ಶ್ರೀಶೈಲ ಸಜ್ಜನ ಮುಂತಾದವರು ಮಾತನಾಡಿದರು. ಸಭೆಯು ಹಲವು ನಿರ್ಣಯಗಳನ್ನು ಅಂಗೀಕರಿಸಿತು.

ರಾಮದುರ್ಗ

ಮೇ ದಿನಾಚರಣೆ ಮತ್ತೆ ಬಂದಿದೆ. ಕಾರ್ಮಿಕ ವರ್ಗ ಹೊಸ ಸವಾಲುಗಳನ್ನು ಎದುರಿಸುತ್ತಿದೆ. ಉದಾರ ಆರ್ಥಿಕ ನೀತಿಯ ಹೆಸರಿನಲ್ಲಿ ಖಾಸಗೀಕರಣದ ಹುನ್ನಾರ ನಡೆದಿದೆ. ದೇಶದ 'ಏಕತೆ, ಸಮಗ್ರತೆ ಕಾಪಾಡಲು ಭಾರತದ ದುಡಿಯುವ ವರ್ಗ ಪಣತೊಡಬೇಕಿದೆ" ಎಂದು ಸಿಪಿಐ(ಎಂ) ಮುಖಂಡ ವಿ.ಪಿ. ಕುಲಕರ್ಣಿ ತಿಳಿಸಿದರು. ಅವರು ಮೇ ದಿನಾಚರಣೆಯ ನಿಮಿತ್ತ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದರು.

ಮೇ 1 ರಂದು ಬೆಳಿಗ್ಗೆ ನೂರಾರು ಬೀಡಿ ಮಹಿಳಾ ಕಾರ್ಮಿಕರು, ವಸತಿ ರಹಿತರ ಸಂಘದ ಸದಸ್ಯರು ಜೊತೆಗೂಡಿ ಆಕರ್ಷಕ ಮೆರವಣಿಗೆ, ಸಭೆ ನಡೆಸಿದರು. ಸಿಪಿಐ(ಎಂ) ಕಾರ್ಯದರ್ಶಿ ಕಾಂ. ಗೈಬು ಸಾಬ ಆರಂಭದಲ್ಲಿ ಮೇ ದಿನಾಚರಣೆಯ ಹಿನ್ನೆಲೆ, ಮಹತ್ವದ ಕುರಿತು ವಿವರಿಸಿದರು.

ಮೆರವಣಿಗೆಯ ನೇತೃತ್ವವನ್ನು ಸಿಪಿಐ(ಎಂ) ಕಾರ್ಯದರ್ಶಿಗಳಾದ ಗೈಬು ಸಾಬ ಮತ್ತು ನಾಗಪ್ಪ ಬಂಡೀವಡ್ಡರ ಮತ್ತಿತರರು ವಹಿಸಿದ್ದರು.

ಮೈಸೂರು

ಮೈಸೂರು ನಗರದಲ್ಲಿ ಸಿಐಟಿಯು ಮತ್ತು ಎಐಟಿಯುಸಿ ಜಿಲ್ಲಾ ಸಮಿತಿಗಳು ಜಂಟಿಯಾಗಿ ಸಂಘಟಿಸಿದ್ದ ಮೇ ದಿನಾಚರಣೆಯ ಕಾರ್ಮಿಕರ ರ್‍ಯಾಲಿಯು ಮೇ ಒಂದರಂದು ನಡೆಯಿತು. ಜೆ.ಕೆ. ಗ್ರೌಂಡ್ಸ್ ನಿಂದ ಅಧಿಕ ಸಂಖ್ಯೆಯಮಹಿಳಾ ಕಾರ್ಮಿಕರಿಂದ ಕೂಡಿದ ಸುಮಾರು ಎರಡು ಸಾವಿರದಷ್ಟು ಕಾರ್ಮಿಕರಿದ್ದ ಮೇ ದಿನದ ಮೆರವಣಿಗೆಯು ನಗರದ ಪ್ರಮುಖ ರಸ್ತೆಗಳಲ್ಲಿ ಸಾಗಿ ಸಂಜೆ 5 ಗಂಟೆಗೆ ಪುರಭವನದ ಮೈದಾನದಲ್ಲಿ ಬಹಿರಂಗ ಸಭೆಯಾಗಿ ಮಾರ್ಪಟ್ಟಿತು.

ಬಹಿರಂಗ ಸಭೆಯಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದ ಸಿಐಟಿಯು ಮೈಸೂರು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಮೋಹನ್ ಕುಮಾರ್ ರವರು ಈ ವರ್ಷದ ಮೇ ದಿನಾಚರಣೆಯ ಸಂದರ್ಭದಲ್ಲಿನ ಮಹತ್ವ, ಅಂತರ್‍ರಾಷ್ಟ್ರೀಯವಾಗಿ ಕಾರ್ಮಿಕ ವರ್ಗ ಎದುರಿಸುತ್ತಿರುವ ಸವಾಲುಗಳ ಬಗ್ಗೆ ವಿವರಿಸಿದರು.

ಎಐಟಿಯುಸಿಯ ಕಾಂ. ಶೇಷಾದ್ರಿ ಮಾತನಾಡಿದರು. ಕಾಂ. ಕೆ. ವೆಂಕಟರಾಮಯ್ಯ ಅಧ್ಯಕ್ಷತೆ ವಹಿಸಿದ್ದರು. ಕಾಂ. ಎನ್.ಆರ್. ಸೋಮಸುಂದರಂ ಸ್ವಾಗತಿಸಿ, ಕಾಂ. ಹೆಚ್.ಎಸ್. ಜಗದೀಶ್ ವಂದನಾರ್ಪಣೆ ಮಾಡಿದರು.

ಚಿಕ್ಕಮಗಳೂರು

ಮೇ 1 ರಂದು ಸಿಐಟಿಯುಗೆ ಸೇರ್ಪಡೆಯಾದ ಕಾಫಿ ಕ್ಯೂರಿಂಗ್ ಮತ್ತು ಇತರ ಕಾರ್ಮಿಕ ಸಂಘದ ಸದಸ್ಯರು ಸಂಘದ ಉಪಾಧ್ಯಕ್ಷರಾದ ಕಾಂ. ಕೆ.ಎಂ. ಅಬ್ದುಲ್ ಜಬ್ಬಾರ್ ಇವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೇ ದಿನಾಚರಣೆ ಆಚರಿಸಿದರು.

ಸಭೆಯನ್ನು ಉದ್ದೇಶಿಸಿ ಸಂಘದ ಕಾರ್ಯದರ್ಶಿಯಾದ ಎ.ಕೆ. ವಿಶ್ವನಾಥ್ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರಾದ ಕೇಶವಮೂರ್ತಿ ಮಹತ್ವವನ್ನು ವಿವರಿಸಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಕಾಂ. ಅಬ್ದುಲ್ ಜಬ್ಬಾರ್ ರವರ ಅಧ್ಯಕ್ಷರ ಭಾಷಣದಲ್ಲಿ ವಿಶ್ವದಾದ್ಯಂತ ಕಾರ್ಮಿಕರು ಅವರ ಹಕ್ಕುಗಳಿಗಾಗಿ ನಡೆಸಿದ ಹೋರಾಟ ಮತ್ತು ತ್ಯಾಗ ಬಲಿದಾನಗಳನ್ನು ಜ್ಞಾಪಿಸಿ ಕಾರ್ಮಿಕರು ಮುಂದಿನ ದಿನಗಳಲ್ಲಿ ಆಳುವ ಮತ್ತು ಶೋಷಕ ವರ್ಗದ ವಿರುದ್ಧ ತೀವ್ರ ಹೋರಾಟ ನಡೆಸಬೇಕೆಂದು ಕರೆ ಕೊಟ್ಟರು. ಕೇಶವ ಮೂರ್ತಿಯವರು ಕೊನೆಯಲ್ಲಿ ವಂದಿಸಿದರು.

ಸುಂಕದ ಕಟ್ಟೆ

ಸುಂಕದಕಟ್ಟೆ (ಬೆಂ.) ಮೇ 1 ರಂದು ಕಾರ್ಮಿಕ ದಿನಾಚರಣೆ ಅಂಗವಾಗಿ ಜೆ.ಜೆ. ಎಕ್ಸ್‌ಪೋರ್ಟ್‌ನ ಮತ್ತು ಇತರೆ ಸುಂಕದ ಕಟ್ಟೆ ಪ್ರದೇಶದ ಕಾರ್ಮಿಕರು ಮಧ್ಯಾಹ್ನ ಧ್ವಜಾರೋಹಣ ನಡೆಸಿದರು. ಧ್ವಜಾರೋಹಣವನ್ನು ಮಹಿಳಾ ಕಾರ್ಮಿಕರಾದ ಎಸ್. ದಾರ್ ರಾಣಿ ಎಂಬುವರು ನೆರವೇರಿಸಿದರು. ಕಾರ್ಮಿಕ ಮುಖಂಡರಾದ ಟಿ.ಎಂ. ರಾಮಕೃಷ್ಣ, ಪಂಚಲಿಂಗ, ಮೂಡ್ಲಗಿರಿ ಮಾತನಾಡಿ ಕಾರ್ಮಿಕರ ಐಕ್ಯತೆ ಬಲಪಡಿಸುವ ಮೂಲಕ ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಕುಂದಾಪುರ

ಮೇ ದಿನಾಚರಣೆಯ ಅಂಗವಾಗಿ ಕುಂದಾಪುರದಲ್ಲಿ ಮೇ ಒಂದರಂದು ಸಿಐಟಿಯುವಿಗೆ ಸೇರಿದ ಸಂಘಗಳ ನೇತೃತ್ವದಲ್ಲಿ ಬೃಹತ್ ರ್‍ಯಾಲಿ ನಡೆದು, ಸಂಜೆ ಐದು ಗಂಟೆಗೆ ಸರಿಯಾಗಿ ಕುಂದಾಪುರ ಗಾಂಧಿ ಮೈದಾನಿನಲ್ಲಿ ಸಾರ್ವಜನಿಕ ಸಭೆ ನಡೆಯಿತು.

ಆರಂಭದಲ್ಲಿ ಹಂಚಿನ ಕಾರ್ಮಿಕರ ಸಂಘದ ಕುಂದಾಪುರ ಡಿವಿಜನ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀಯುತ ಸಿ. ನಾರಾಯಣನವರು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾ ರೈತ ಸಂಘದ ಕಾರ್ಯದರ್ಶಿಯವರಾದ ಅಬ್ರಹಾಂ ಕರ್ಕಡರು ವಹಿಸಿದ್ದರು.

ರೈತ ಕಾರ್ಮಿಕ ಮುಖಂಡರಾದ ಕೆ. ಶಂಕರ್, ಯು. ದಾಸ್ ಭಂಡಾರಿ, ವಿ. ನರಸಿಂಹ ಮತ್ತು ಮಹಾಬಲ ಒಡೇರ ಹೋಬಳಿ ಇವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ್ದ ಶ್ರೀಯುತ ಅಬ್ರಹಾಂ ಕರ್ಕಡರು ಹಾಗೂ ಸಿಐಟಿಯುವಿನ ರಾಜ್ಯ ಕಾರ್ಯದರ್ಶಿಯವರಾದ ಕೆ. ಶಂಕರ್ ರವರು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಕುಂದಾಪುರದಲ್ಲಿ ಮೇ ದಿನದ ಮೆರವಣಿಗೆಯ ಒಂದು ದೃಶ್ಯ



ಬಸ್ ನಿಲ್ದಾಣಕ್ಕೆ ಒತ್ತಾಯಿಸಿ ರಸ್ತೆ ತಡೆ

ಏಪ್ರಿಲ್ 14ರಂದು ಸುಂಕದಕಟ್ಟೆಯಲ್ಲಿ ಡಿ.ವೈ.ಎಫ್.ಐ ನೇತೃತ್ವದಲ್ಲಿ 50ಕ್ಕೂ ಹೆಚ್ಚು ಮಹಿಳೆಯರು ಸೇರಿದಂತೆ ನೂರಾರು ಜನರು ರಸ್ತೆ ತಡೆ ನಡೆಸಿ ಬಂಧಿತರಾದರು. ಸುಂಕದಕಟ್ಟೆ ಜೆ.ಜೆ. ಎಕ್ಸ್ ಪೋರ್ಟ್ ಬಳಿ ಬಸ್ ನಿಲ್ದಾಣ ಅಗತ್ಯವಾಗಿದ್ದು, ಅದು ಕೈಗಾರಿಕಾ ಪ್ರದೇಶವಾಗಿದ್ದು ಈ ಪ್ರದೇಶದಲ್ಲಿ ಬಸ್ ನಿಲ್ದಾಣಮಾಡಬೇಕೆಂದು ಒತ್ತಾಯಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿಯನ್ನು ನೀಡಲಾಯಿತು.

ಬಂಧಿತರಾದವರಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ, ಜಿಲ್ಲಾ ಕಾರ್ಯದರ್ಶಿ ಮಂಡಳಿಸದಸ್ಯ ಎಸ್. ನರಸಿಂಹಮೂರ್ತಿ, ಸುಂಕದಕಟ್ಟೆ ಘಟಕದ ಅಧ್ಯಕ್ಷರಾದ ಟಿ.ಎಂ. ರಾಮಕೃಷ್ಣ ಮತ್ತು ಕಾರ್ಯದರ್ಶಿ ಪಂಚಮಿರವರು ಸೇರಿದ್ದಾರೆ. ಈ ಅಕ್ರಮ ಬಂಧನವನ್ನು ಡಿ.ವೈ.ಎಫ್.ಐ ಖಂಡಿಸಿರುವುದಲ್ಲದೆ, ತಕ್ಷಣ ಬೇಡಿಕೆ ಈಡೇರಿಸ ಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

ನೀರಿನ ಸೌಕರ್ಯಕ್ಕೆ ಒತ್ತಾಯಿಸಿ ಧರಣಿ

ಟಿ. ದಾಸರಹಳ್ಳಿ: ಅತಿದೊಡ್ಡ ಕೈಗಾರಿಕ ಪ್ರದೇಶವಾದ ಟಿ. ದಾಸರಹಳ್ಳಿಯಲ್ಲಿ ಕುಡಿಯುವ ನೀರಿನ ಪರದಾಟ ಹೇಳತೀರದು. ಡಿ.ವೈ.ಎಫ್.ಐ ದಾಸರಹಳ್ಳಿ ಘಟಕ ಏಪ್ರಿಲ್ 29 ರಂದು ದಾಸರಹಳ್ಳಿ ಅದಿಸೂಚಿಕ ಪ್ರದೇಶದ ಸಮಿತಿ ಎದುರು ಧರಣಿ ನಡೆಸಿ ಸಹಾಯಕ ಕಮೀಷನರ್ ರವರಿಗೆ ಮನವಿ ನೀಡಿ ಒತ್ತಾಯಿಸಿತು. ಈ ಧರಣಿಯಲ್ಲಿ 45ಕ್ಕೂ ಹೆಚ್ಚು ಮಹಿಳೆಯರು ಸೇರಿದಂತೆ ನೂರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು.

ಈ ಧರಣಿಯಲ್ಲಿ ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಗೋಪಾಲ ಕೃಷ್ಣ ಮಾತನಾಡಿ ಪ್ರದೇಶದ ಜನರಿಗೆ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಬೇಕು. ಹೆಸರುಘಟ್ಟ, ತಿಪ್ಪೆಗೊಂಡನಹಳ್ಳಿ ಜಲಾಯಶದಿಂದ ಕುಡಿಯುವ ನೀರನ್ನು ಈ ಪ್ರದೇಶಕ್ಕೆ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಡಿ.ವೈ.ಎಫ್.ಐ ಮುಖಂಡರಾದ ನಂಜರಾಜ್ ರವರು ಮಾತನಾಡಿ ಸ್ಥಳಿಯ ಸಮಸ್ಯೆಗಳ ಬಗ್ಗೆ ಸರ್ಕಾರ ನಿರ್ಲಕ್ಷತೋರಿಸುತ್ತಿದೆ. ಇದೇ ರೀತಿ ಮುಂದುವರೆದರೆ ಮುಂದೆ ರಸ್ತೆತಡೆ ಚಳುವಳಿ ನಡೆಸಲಾಗುವುದು ಎಂದು ಎಚ್ಚರಿಸಿದರು. ಘಟಕದ ಅಧ್ಯಕ್ಷರಾದ ಮಾನಪ್ಪ ನೇತೃತ್ವ ವಹಿಸಿದ್ದರು. ಕಾರ್ಯದರ್ಶಿ ನರಸಿಂಹಮೂರ್ತಿ ವಂದಿಸಿದರು.

ಡಿ.ವೈ.ಎಫ್.ಐ ಯುವ ಮಿಲನ-95 ವಿನೂತನ ಪ್ರಯತ್ನ

ಬಂಟ್ವಾಳ: ಮಾ 26 ರಂದು ಬಂಟ್ವಾಳದ ಪೇಟೆಯ ನಾಗರಿಕರಿಗೆ ವಿನೂತನ ಜಾತ್ರೆಯ, ಹಬ್ಬದ ವಾತಾವರಣ ನಿರ್ಮಾಣ ಮಾಡುವುದರ ಮೂಲಕ dyfi ಬಂಟ್ವಾಳ ತಾಲೂಕು ಸಮಿತಿಯೂ ಯುವ ಪ್ರತಿಭೆಗಳನ್ನು ಗುರುತಿಸಿ, ಸ್ಫೂರ್ತಿಯನ್ನು ನೀಡಿ ಕ್ರೀಡೆ ಮತ್ತು ಸಾಂಸ್ಕೃತಿಕ ವಿವಿದ ವಿನೋದವಳಿಗಳ ಮೂಲಕ ಯುವಜನರ ಮನಸ್ಸನ್ನು ರಂಜಿಸಿದೆ.

ಯುವಮಿಲನ-95 ಕಾರ್ಯಕ್ರಮವನ್ನು ಮನೆ ಮನೆಗೂ ತಲುಪಿಸುವ ಯೋಜನೆ ಹಾಕಿ, ಕೇಬಲ್ ಟಿ.ವಿ. ಗಳಲ್ಲಿ ನೇರ ಪ್ರಸಾರ ನೀಡುವುದರ ಮೂಲಕ ಮನೆ ಮಂದಿಯಲ್ಲಾ ಒಟ್ಟಾಗಿ ಕೂತು ಯುವ ಮಿಲನ ರಂಜನೆಯನ್ನು ಆಸ್ವಾದಿಸುವ ವಿನೂತನ ಕಾರ್ಯಕ್ರಮವನ್ನು dyfi ಮಾಡಿದೆ.

ಮುಕ್ತ ಕಬಡ್ಡಿ ಪಂದ್ಯಾಟದ ಉದ್ಘಾಟನೆಯನ್ನು ಬಂಟ್ವಾಳ ತಾಲೂಕಿನ ಸಮಾಜ ಶಿಕ್ಷಣ ವಿಸ್ತರಣಾದಿಕಾರಿಯಾದ ಕೆ. ಮಹಾಬಲ ಆಳ್ವ ಅವರು ಮಾಡಿದರು.ಮುಖ್ಯ ಅತಿಥಿಯಾಗಿ ರಮಾನಾಥ ಕಾರದೂರು ಅವರು ಆಗಮಿಸಿ ಮಾತನಾಡಿದರು. dyfi ಜಿಲ್ಲಾ ಕಾರ್ಯದರ್ಶಿ ಕಾಂ. ವಸಂತ ಆಚಾರಿ, ಸಿ.ಪಿ.ಐ(ಎಂ) ತಾಲೂಕು ಕಾರ್ಯದರ್ಶಿ ಕಾಂ. ವಾಸುಗಟ್ಟಿ ಮಾತನಾಡಿದರು. ರಾಮಣ್ಣ ಎ. ಅವರು ಅಧ್ಯಕ್ಷತೆ ವಹಿಸಿದ್ದು, dyfi ತಾಲೂಕು ಕಾರ್ಯದರ್ಶಿ ಬಿ. ಉದಯಕುಮಾರ್ ಅವರು ಸ್ವಾಗತಿಸಿ. ಎಸ್. ರಾಜಾಕುಮಾರ್ ಅವರು ವಂದಿಸಿದರು.

ಸಂಜೆ ಹೊತ್ತಿನ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಬಂಟ್ವಾಳದ ಶಾಸಕರಾದ ಶ್ರೀ ಬಿ. ರಮಾನಾಥರೈ ಅವರು ಉದ್ಘಾಟಿಸಿದರು. ಡಿ.ವೈ.ಎಫ್.ಐ ರಾಜ್ಯ ಕಾರ್ಯದರ್ಶಿಗಳಾದ ಕಾಂ. ಎಸ್.ವೈ. ಗುರುಶಾಂತ್ ಅವರು ಅಧ್ಯಕ್ಷತೆ ವಹಿಸಿ ಮಾತವಾಡುತ್ತಾ, ಸಾಂಸ್ಕೃತಿಕ ಕ್ಷೇತ್ರಗಳ ಮೇಲೆ ಸಾಮ್ರಾಜ್ಯಶಾಹಿಗಳು ನಡೆಸುತ್ತಾ ಬಂದಿರುವ ದಾಳಿಗಳ ಒಳಪರಿವುಗಳನ್ನು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಸ್ಥಳಿಯ ಉಧ್ಯಮಿಗಳಾದ ಪೆತ್ರಿಯನ್ ಪಿಂಟೋ, ಬಿ. ಮಂಜುನಾಥ ಸಪಲ್ಯ ಆಗಮಿಸಿದರು.

ಪವರ್ ಲೂಮ್ ಕಾರ್ಮಿಕರ ಪ್ರತಿಭಟನೆ ಮಾಲಿಕರ ಭೂತ ದಹನ

ವಿಶ್ವದಾದ್ಯಾಂತ ಕಾರ್ಮಿಕರ ದಿನಚರಣೆಯ ದಿನವಾದ ಮೇ 1 ರಂದು ಶ್ರೀರಾಮಪುರದ ಲಕ್ಷ್ಮಿನಾರಾಯಣಪುರದಲ್ಲಿ ಪವರ್ ಲೂಂ ಕಾರ್ಮಿಕರು 6 ಜನ ಕಾರ್ಮಿಕರನ್ನು ಕೆಲಸದಿಂದ ವಜಾಮಾಡಿದ್ದ ಕುಗೂರು ರಾಮಕೃಷ್ಣಪ್ಪ ಮಾಲೀಕನ ವಿರುದ್ಧ ಪ್ರತಿಭಟನೆ ನಡೆಸಿ ಲಕ್ಷ್ಮಿನಾರಾಯಣಪುರ 81 ಬಸ್ ನಿಲ್ದಾಣದಿಂದ ಮೆರವಣಿಗೆ ನಡೆಸಿ ಮಾಲೀಕರ ಮನೆ ಮುಂದೆ ಭೂತದಹನ ನಡೆಸಲಾಯಿತು. ಈ ಸಂದರ್ಭದಲ್ಲಿ ಮಿನರ್ವ ಮಿಲ್ ಕಾರ್ಮಿಕ ಸಂಘದ ಮುಖಂಡರಾದ ಕಾಂ.ಚಂದ್ರು, ಕಾಂ. ಪುಷ್ಪರಾಜ್ ಮಾತನಾಡಿದರು. dyfi ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣರವರು ಮಾತವಾಡಿ ಕೂಡಲೇ ಕಾರ್ಮಿಕರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಯಿತು.

21/5/1995

ಫ್ಯಾಸಿಸಂ ಮೇಲೆ ವಿಜಯದ 50ನೇವಾರ್ಷಿಕೋತ್ಸವದ ಸಂದರ್ಭದಲ್ಲಿ ವಿಶೇಷ ಲೇಖನ

"ಫ್ಯಾಸಿಸಂ -ದುಡಿಯುವ ಜನರ ಮೇಲೆ ಬಂಡವಾಳದ ಅತ್ಯಂತ ದುಷ್ಟ ಆಕ್ರಮಣವಾಗಿದೆ.

ಫ್ಯಾಸಿಸಂ -ಲಂಗುಲಗಾಮಿಲ್ಲದ ಅಂಧ ದೇಶಾಭಿಮಾನವಾಗಿದೆ ಹಾಗೂ ಕೊಳ್ಳೆಹೊಡೆಯುವ ಯುದ್ಧವಾಗಿದೆ.

"ಫ್ಯಾಸಿಸಂ -ಹೀನ ಪ್ರತಿಗಾಮಿ ಹಾಗೂ ಕ್ರಾಂತಿವಿರೋಧಿಯಾಗಿದೆ.

ಫ್ಯಾಸಿಸಂ -ಕಾರ್ಮಿಕ ವರ್ಗದ ಹಾಗೂ ಎಲ್ಲಾ ದುಡಿಯುವ ಜನರ ಅತ್ಯಂತ ಕಡು ವೈರಿಯಾಗಿದೆ." ಎಂದಿದ್ದರು ಕಮ್ಯುನಿಸ್ಟ್ ಅಂತರಾಷ್ಟ್ರೀಯದ 7ನೇ ಮಹಾಧಿವೇಶನದಲ್ಲಿ ದಿಮಿತ್ರೋವ್.

ಫ್ಯಾಸಿಸಂ ಮೇಲಿನ ವಿಜಯದ 50ನೇ ವಾರ್ಷಿಕೋತ್ಸವವನ್ನು ಆಚರಿಸುವ ಈ ಸಂದರ್ಭದಲ್ಲಿ ಮಾನವ ನಾಗರಿಕತೆಯ ಸಾಧನೆಯನ್ನು ನಾಶ ಮಾಡಲು ಹೊರಟ ಇಂತಹ ಶಕ್ತಿಗಳ ವಿರುದ್ಧ ತೀಕ್ಷ್ಣ ಹೋರಾಟ ನಡೆಸಲು ನಮ್ಮೆಲ್ಲ ಶಕ್ತಿಯನ್ನು ಧಾರೆಯೆರೆಯಲು ನಾವು ಪಣತೊಡಬೇಕು ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಸುರ್ಜಿತ್

ದುಡಿಯುವ ಜನರ ಹೀನ, ಕಡುವೈರಿ ಫ್ಯಾಸಿಸಂ

-ಹರ್ಕಿಷನ್ ಸಿಂಗ್ ಸುರ್ಜಿತ್

ಬರ್ಲಿನ್‌ನ ರೈಕ್ ಸ್ಟಾಗ್ (ಅಂದಿನ ಸಂಸತ್ ಭವನ) ಮೇಲೆ ಕೆಂಪು ಸೇನೆಯ ಇಬ್ಬರು ಸೈನಿಕರು ನಿಂತಿರುವ ಭಾವಚಿತ್ರ ಮನಸ್ಸಿನಲ್ಲಿ ಸದಾ ಹಸಿರಾಗಿದೆ. ಭೂಮಿಯ ಮೇಲಿನ ಹೇಯ ಹಾಗೂ ಕ್ರೂರ ವ್ಯವಸ್ಥೆಯನ್ನು ಪ್ರತಿನಿಧಿಸುವ ಮೂರನೇ ರೈಕ್‌ನ ಆಡಳಿತ ಕೇಂದ್ರದಮೇಲೆ ಕುಡುಗೋಲು ಮತ್ತು ಸುತ್ತಿಗೆಯುಳ್ಳ ಧ್ವಜವನ್ನು ಈ ಸೈನಿಕರು ಹಾರಿಸಿದರು. ಅದು ನಾಜಿಗಳ ಯುದ್ಧಯಂತ್ರ ನಾಶ ಹೊಂದಿದ್ದ ಸಂಕೇತವಾಗಿತ್ತು. ಬರ್ಲಿನ್‌ನತ್ತ ಮುನ್ನಡೆದ ಪಡೆಯ ನೇತೃತ್ವ ವಹಿಸಿದ್ದ ಕೆಂಪುಸೇನೆಯ ವಿಭಾಗದೊಂದಿಗೆ ಇಡೀ ಜಗತ್ತು ಸೇರಿಕೊಂಡು ಹಿಟ್ಲರ್ ಮೇಲೆ ಸಾಧಿಸಿದ ವಿಜಯೋತ್ಸವವನ್ನು ಆಚರಿಸಿತು.

ಎರಡನೇ ಮಹಾಯುದ್ಧದಲ್ಲಿ 2.03 ಕೋಟಿ ಸೈನಿಕರು ಮಡಿದರು. 3.5 ಕೋಟಿ ಸೈನಿಕರು ಗಾಯಗೊಂಡರು. ನಾಜಿಗಳ ಆಕ್ರಮಣಕ್ಕೊಳಗಾದ ಸೋವಿಯತ್ ಒಕ್ಕೂಟ ಅತ್ಯಂತ ಹೆಚ್ಚು ಜೀವಹಾನಿಯನ್ನು ಅನುಭವಿಸಿತು. 2.3 ಕೋಟಿ ಜನರು ಸತ್ತರು. ಪೋಲೆಂಡ್‌ನ 60 ಲಕ್ಷ, ಯುಗೋಸ್ಲಾವಿಯಾದ 17 ಲಕ್ಷ ಮಂದಿ ಮೃತರಾದರು. ಫ್ರಾನ್ಸ್‌ನ ಆರು ಲಕ್ಷ, ಅಮೆರಿಕದಲ್ಲಿ 4.5 ಲಕ್ಷ ಹಾಗೂ ಬ್ರಿಟನ್‌ನಲ್ಲಿ 3 ಲಕ್ಷ 75 ಸಾವಿರ ಸೈನಿಕರು ಹತರಾದರು. ಜರ್ಮನಿ 60 ಲಕ್ಷ ಜನರನ್ನು ಕಳೆದು ಕೊಂಡಿತು. ಈ ಅವಧಿಯಲ್ಲಿ ನಾನಾ ರಾಷ್ಟ್ರೀಯತೆಗಳಿಗೆ ಸೇರಿದ ಕನಿಷ್ಠ 80 ಲಕ್ಷ ಜನರನ್ನು ನಾಜಿಗಳ ಯಾತನಾಶಿಬಿರಗಳಲ್ಲಿ (concentration camps) ಕ್ರೂರವಾಗಿ ಕೊಲ್ಲಲಾಯಿತು. ಹಿಟ್ಲರ್ ಆಡಳಿತದ ಪ್ರತೀಕವಾದ ಈ ಕ್ರೌರ್ಯ ಫ್ಯಾಸಿಸಂನ ನಿಜವಾದ ಮುಖವಾಗಿದೆ. ಹಿಟ್ಲರ್ ಸೋಲಿಗೆ ಇಡೀ ಜಗತ್ತು ಅಮಿತೋತ್ಸಾಹದಿಂದ ಸ್ಪಂದಿಸಲು ಈ ಅಂಶವೇ ಕಾರಣ.



"ಏಲಿಯ ಗಟ್ಟಲೆ ಮಂದಿ ನನ್ನ ಹಿಂದಿದ್ದಾರೆ" ಎಂಬ ಹಿಟ್ಲರನ ಜಂಭವನ್ನು ವ್ಯಂಗ್ಯವಾಡಿ ಜರ್ಮನ್ ವರ್ಣಚಿತ್ರಕಾರ ಜಾನ್ ಹಾರ್ಟ್‌ಫೀಲ್ ರಚಿಸಿದ ಪೋಸ್ಟರ್ ಇದು. ಆತನ ಹಿಂದೆ ಇದ್ದದ್ದು ಜರ್ಮನ್ ಪ್ರತಿಗಾಮಿ ಆಳುವ ವರ್ಗದ ಏಲಿಯ ಗಟ್ಟಲೆ ನೋಟುಗಳು ಎಂಬ ಸಂಗತಿಯನ್ನು ಇಲ್ಲಿ ಪ್ರತಿಬಿಂಬಿಸಲಾಗಿದೆ.

ದುರಂತವನ್ನು ತಪ್ಪಿಸಬಹುದಿತ್ತೆ?

ಈ ಮಹಾದುರಂತವನ್ನು ತಪ್ಪಿಸಲು ಜಗತ್ತಿಗೆ ಸಾಧ್ಯವಿತ್ತೇ, ಮತ್ತು ಫ್ಯಾಸಿಸಂ ಆಡಳಿತಕ್ಕೆ ಬಂದದ್ದು ಒಂದು ಅಗತ್ಯ ಐತಿಹಾಸಿಕ ಪ್ರಕ್ರಿಯೆಯೇ ಎಂಬ ಪ್ರಶ್ನೆ ಆಗಾಗ ಉದ್ಭವಿಸುತ್ತಿದೆ. ಫ್ಯಾಸಿಸಂ ಗುತ್ತೇದಾರಿ ಬಂಡವಾಳಶಾಹಿಯ ಅತ್ಯಂತ ಪ್ರತಿಗಾಮಿ ವಿಭಾಗಗಳ ಆಡಳಿತವನ್ನು ಪ್ರತಿನಿಧಿಸುವುದರಿಂದ ಈ ಪ್ರಶ್ನೆ ಏಳುತ್ತದೆ. ಜರ್ಮನಿ ಮತ್ತು ಇಟಲಿಯಲ್ಲಿ ಫ್ಯಾಸಿಸಂ ತಲೆಯೆತ್ತಲು ಕಾರಣವಾದ ಐತಿಹಾಸಿಕ ಸನ್ನಿವೇಶದಲ್ಲಿ ಇದಕ್ಕೆ ಉತ್ತರ ಅಡಗಿದೆ.

ಸಮಾಜವಾದಿ ಸೋವಿಯತ್ ಒಕ್ಕೂಟದ ಅಸ್ತಿತ್ವವನ್ನು ಸಾಮ್ರಾಜ್ಯಶಾಹಿ ಯಾವತ್ತೂ ಸಹಿಸಿಕೊಳ್ಳಲೇ ಇಲ್ಲ. ಸೋವಿಯತ್ ಒಕ್ಕೂಟದಲ್ಲಿ ನೇರವಾಗಿ ಹಸ್ತಕ್ಷೇಪ ಮಾಡುವ ಹಾಗೂ ಆ ದೇಶದಲ್ಲಿ ಅಂತಃಕಲಹವನ್ನು ಹುಟ್ಟು ಹಾಕುವ ಪ್ರಯತ್ನಗಳು ವಿಫಲವಾದಾಗ ಆಗಷ್ಟೇ ಹುಟ್ಟಿದ ದುಡಿಯುವ ವರ್ಗದ ಆಗಷ್ಟೇ ಹುಟ್ಟಿದ ರಾಜ್ಯವನ್ನು(ಯು.ಎಸ್.ಎಸ್.ಆರ್) ನಾಶಮಾಡಲು ಹೊಸ ಹೊಸ ಪ್ರಯತ್ನಗಳನ್ನು ನಡೆಸಲಾಯಿತು.

ಸೋವಿಯತ್ ಒಕ್ಕೂಟ ಮತ್ತು ಸಮಾಜವಾದಿ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿದ್ದರಿಂದ ಜಗತ್ತಿನಲ್ಲಿ ಗಮನೀಯ ಬದಲಾವಣೆ ಉಂಟಾಯಿತು. ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಮತ್ತು ಶೋಷಕ ವ್ಯವಸ್ಥೆಯನ್ನು ನಾಶಮಾಡುವ ದಿಸೆಯಲ್ಲಿನ ದುಡಿಯುವ ವರ್ಗದ ಹೋರಾಟಗಳು ಸೋವಿಯತ್ ಒಕ್ಕೂಟವನ್ನು ತಮ್ಮ ವಿಶ್ವಾಸಾರ್ಹ ಮಿತ್ರ ಹಾಗೂ ಸ್ಫೂರ್ತಿಯ ಮೂಲ ಎಂದು ಪರಿಗಣಿಸಿದವು. ಇನ್ನೊಂದೆಡೆ, ಕಮ್ಯುನಿಷ್ಟ್ ವಿರೋಧವನ್ನು ತನ್ನ ಸಿದ್ಧಾಂತದ ಮೂಲವನ್ನಾಗಿ ಮಾಡಿಕೊಂಡ ಫ್ಯಾಸಿಸಂ ಸೋವಿಯತ್ ಒಕ್ಕೂಟವನ್ನು ನಾಶಮಾಡುವ ಪರಿಣಾಮಕಾರಿ ಸಾಧನ ಎಂದು ಸಾಮ್ರಾಜ್ಯಶಾಹಿ ಶಕ್ತಿಗಳು ಲೆಕ್ಕಹಾಕಿದವು. ಆದ್ದರಿಂದ ಸಾಮ್ರಾಜ್ಯಶಾಹಿಗಳು ತಲೆಯೆತ್ತುತ್ತಿದ್ದ ಫ್ಯಾಸಿಸಂ ಪಿಡುಗನ್ನು ಎದುರಿಸುವ ಗೋಜಿಗೆ ಹೋಗಲಿಲ್ಲ. ಫ್ಯಾಸಿಸಂನ ಅಪಾಯದ ಬಗ್ಗೆ ಮೊದಲ ಬಾರಿಗೆ ಎಚ್ಚರಿಕೆ ಕೊಟ್ಟಿದ್ದು ಕಮ್ಯುನಿಸ್ಟ ಇಂಟರ್ ನ್ಯಾಶನಲ್. 1928 ರಲ್ಲಿ ನಡೆದ ಆರನೆ ಮಹಾಧಿವೇಶನದಲ್ಲಿ ಕೊಮಿಂಟರ್ನ್ ಹೀಗೆಂದಿತು-

"ಸ್ವಲ್ಪ ಹೆಚ್ಚು ಅಥವಾ ಕಡಿಮೆ ಬೆಳವಣಿಗೆ ಹೊಂದಿದ ಸ್ವರೂಪದಲ್ಲಿ ಫ್ಯಾಸಿಸಂ ಪ್ರವೃತ್ತಿಗಳ ಹಾಗೂ ಫ್ಯಾಸಿಸ್ಟ ಚಳುವಳಿಯ ಮೊಳಕೆಗಳು ಜಗತ್ತಿನ ಎಲ್ಲೆಡೆ ಕಂಡುಬರುತ್ತಿವೆ."

1930ರ ದಶಕದಲ್ಲಿ ಬಂಡವಾಳಶಾಹಿ ಜಗತ್ತು ಭಾರೀ ಬಿಕ್ಕಟ್ಟನ್ನು ಎದುರಿಸುತ್ತಿತ್ತು. ಹೆಚ್ಚು ಹೆಚ್ಚು ಕ್ರಾಂತಿಕಾರಿಯಾಗುತ್ತಿದ್ದ ಕಾರ್ಮಿಕ ವರ್ಗವನ್ನು ಸದೆಬಡಿಯಲು ಬಂಡವಾಳಶಾಹಿಗಳು ಫ್ಯಾಸಿಸಂನತ್ತ ಒಲವು ತೋರಿಸತೊಡಗಿದರು.

ಬಿಕ್ಕಟ್ಟಿನ ಹೊರೆಯನ್ನು ಕಾರ್ಮಿಕರ ಮೇಲೆ ಹೊರಿಸಲು ಸಾಮ್ರಾಜ್ಯಶಾಹಿ ವಲಯಗಳು ಯತ್ನಿಸುತ್ತಿವೆ. ಆದಕ್ಕಾಗಿ ಅವರಿಗೆ ಫ್ಯಾಸಿಸಂ ಬೇಕಾಗಿದೆ.

ದುರ್ಬಲ ದೇಶಗಳನ್ನು ಗುಲಾಮಗಿರಿಗೆ ತಳ್ಳಿ, ವಸಾಹತುಗಳಲ್ಲಿನ ದೌರ್ಜನ್ಯವನ್ನು ಹೆಚ್ಚಿಸಿ ಹಾಗೂ ಯುದ್ಧದಿಂದ ಜಗತ್ತನ್ನು ಹೊಸದಾಗಿ ವಿಭಜಿಸುವ ಮೂಲಕ ಮಾರುಕಟ್ಟೆಯ ಸಮಸ್ಯೆಗಳನ್ನು ಬಗೆಹರಿಸಲು ಅವರು (ಸಾಮ್ರಾಜ್ಯಶಾಹಿಗಳು) ಯತ್ನಿಸುತ್ತಿದ್ದಾರೆ ಎಂದು ಕೊಮಿಂಟರ್ನ್‌ನ ಏಳನೇ ಮಹಾಧಿವೇಶನ ವಿಶ್ಲೇಷಿಸಿತು.

"ಅನೇಕ ದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಜರ್ಮನಿಯಲ್ಲಿ, ಜನ ಸಮೂಹ ನಿರ್ಣಾಯಕವಾಗಿ ಕ್ರಾಂತಿಯತ್ತ ಹೊರಳುವ ಮುನ್ನವೇ ಕಾರ್ಮಿಕ ವರ್ಗವನ್ನು ಸೋಲಿಸಿ ಫ್ಯಾಸಿಸ್ಟ್ ಸರ್ವಾಧಿಕಾರವನ್ನು ಸ್ಥಾಪಿಸುವಲ್ಲಿ ಸಾಮ್ರಾಜ್ಯಶಾಹಿ ವಲಯಗಳು ಯಶಸ್ವಿಯಾದವು" ಎಂದೂ ವರದಿ ಹೇಳಿತು.

ಕಮ್ಯುನಿಸ್ಟ್ ಇಂಟರ್‌ನ್ಯಾಷನಲ್‌ನ ಕಾರ್ಯಕಾರಿ ಸಮಿತಿಯ 13 ನೇ ಪ್ಲೀನಂ ಇದಕ್ಕೂ ಮುಂಚೆ ಫ್ಯಾಸಿಸಂ ಅನ್ನು ಈ ರೀತಿಯಾಗಿ ವಿಶ್ಲೇಷಿಸಿತು. *"ಹಣಕಾಸು ಬಂಡವಾಳದ ಅತ್ಯಂತ ಪ್ರತಿಗಾಮಿ, ಅತ್ಯಂತ ಅರಾಜಕವಾದಿ ಹಾಗೂ ಕಟು ಸಾಮ್ರಾಜ್ಯಶಾಹಿ ಶಕ್ತಿಗಳ ನಗ್ನಭಯೋತ್ಪಾದಕ ಸರ್ವಾಧಿಕಾರವಾಗಿವೆ"*

ಮುಯ್ಯಿತೀರಿಸುವ ಭಯಾನಕ ಸಂಸ್ಥೆ

ಏಳನೇ ಮಹಾಧಿವೇಶನಕ್ಕೆ ಸಲ್ಲಿ... ವರದಿಯಲ್ಲಿ ಫ್ಯಾಸಿಸಂ, ಅದರ ಬೆಳ... ಹಾಗೂ ಅಗತ್ಯವನ್ನು ವಿಶ್ಲೇಷಿಸಿದ ಜಾ... ದಿಮಿತ್ರೋವ್ ಹೀಗೆ ಹೇಳಿದ್ದರು. *"ಫ್ಯಾ... ಸ್ವತಃ ಹಣಕಾಸು ಬಂಡವಾಳದ ಶಕ್ತಿಯಾ... ಅದು ಕಾರ್ಮಿಕ ವರ್ಗ ಮತ್ತು ರೈತಾಪಿ... ಹಾಗೂ ಬುದ್ಧಿಜೀವಿಗಳ ಕ್ರಾಂತಿಕಾರಿ ವಿಭಾ... ವಿರುದ್ಧ ಭಯಾನಕವಾಗಿ ಸೇಡು ತೀರಿ... ಳ್ಳುವ ಸಂಘಟನೆಯಾಗಿದೆ. ವಿದೇಶಾಂಗ... ಯಲ್ಲಿ ಫ್ಯಾಸಿಸಂನ ಅತ್ಯಂತ ಬರ್ಬರ... ಇತರ ದೇಶಗಳ ವಿರುದ್ಧ ದ್ವೇಷವನ್ನು ಪ್ರ... ದಿಸುವ ಅಂಧ ದೇಶಾಭಿಮಾನ ಆಗಿರು...* ಫ್ಯಾಸಿಸಂ ವಿರುದ್ಧ ಕಾರ್ಮಿಕ ... ಸಂಯುಕ್ತರಂಗವನ್ನು ರೂಪಿಸಬೇಕೆನ್ನು... ತ್ರೋವ್ ಕರೆ ಕೊಟ್ಟಿದ್ದಲ್ಲದೆ, ಸಂ... ರಂಗವನ್ನು ರಚಿಸುವಂತೆ ಕರೆ ನೀಡಿದ...

ಜನರ ಮೇಲೆ ಫ್ಯಾಸಿಸಂ ಯ... ಪ್ರಭಾವ ಬೀರಿದೆ ಎಂಬುದನ್ನು ... ತ್ರೋವ ವಿಶ್ಲೇಷಿಸಿದ್ದಾರೆ.

"ಜನರ ತುರ್ತು ಅಗತ್ಯಗಳು ಹಾ... ಬೇಡಿಕೆಗಳಿಗೆ ಸ್ಪಂದಿಸುವುದರಿಂದ ಜನ... ಆಕರ್ಷಿಸಲು ಫ್ಯಾಸಿಸಂ ಸಮರ್ಥವಾಗಿದೆ. ... ಹೊತ್ತಿಗೆ ಫ್ಯಾಸಿಸಂ ಕ್ರಾಂತಿಯಲ್ಲಿ ಜನರಿಗ... ನಂಬಿಕೆಯನ್ನು ಬಳಸಿಕೊಂಡು ತಾನೂ ಸಮಾ... ವಾದದ ಪರ ಎಂದು ಹೇಳಿಕೊಂಡು ಕ್ರಾಂ... ರಿಯ ಸೋಗು ಹಾಕುತ್ತದೆ." ಎಂದು ದಿ... ತ್ರೋವ್ ಹೇಳಿದರು.

"ಕಾರ್ಮಿಕ ವರ್ಗದ ಕ್ರಾಂತಿಕಾರಿ ಚಳ... ಮತ್ತು ಅತೃಪ್ತರಾಗಿರುವ ಇತರ ಜನರ ವ... ಆಕ್ರಮಣ ನಡೆಸುವ ಪಕ್ಷವಾಗಿ ಫ್ಯಾಸಿಸಂ ... ಕಾರಕ್ಕೆ ಬರುತ್ತದೆ. ಆದರೂ ಅದು, ... 'ಇಡೀ ದೇಶದ ಪರವಾಗಿ' ಬಂಡವಾಳಶಾಹಿ ಮ... ವಿರುದ್ಧದ ಕ್ರಾಂತಿಕಾರಿ ಚಳುವಳಿಯೆಂಬು... ಹೇಳಿಕೊಳ್ಳುತ್ತದೆ. ನ್ಯಾಯಯುತ ಕೂಲಿ... ತ್ತೇನೆ ಎಂದಿದ್ದರಿಂದ ಅದು ಕಾರ್ಮಿಕರ...

ಪ್ರಧಾನ ಶತ್ರು ಎಂಬ ಬಗ್ಗೆ ಬರಡು ಊಹಾಪೋಹ

ಸಿಪಿಐ(ಎಂ)ಗೆ ತನ್ನ ಪ್ರಧಾನ ಶತ್ರು ಯಾರು ಎಂಬ ಬಗ್ಗೆ ಗೊಂದಲವಿದೆ ಎಂಬ ಬಂಡವಾಳಶಾಹೀ ಪತ್ರಿಕೆಗಳ 'ವಿಶ್ಲೇಷಣೆ'ಗಳ ಬಗ್ಗೆ ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ "ಪೀಪಲ್ಸ್ ಡೆಮಾಕ್ರಸಿ" ಸಂಪಾದಕೀಯ

15ನೇ ಮಹಾಧಿವೇಶನ ಮುಗಿದಿದೆ. ಇಡೀ ಮಹಾಧಿವೇಶನ ಸಾಮೂಹಿಕವಾಗಿ ಯೋಚಿಸಿ ಅತ್ಯಂತ ಕ್ಲಿಷ್ಟ ರಾಜಕೀಯ ಸನ್ನಿವೇಶದ ಹಿನ್ನೆಲೆಯಲ್ಲಿ ಇಂದಿನ ಪ್ರಧಾನ ರಾಜಕೀಯ ಕರ್ತವ್ಯ ಏನು ಎಂದು ನಿರ್ವಚಿಸಿದೆ.

ಕಾಂಗ್ರೆಸ್(ಐ) ದೇಶಾದ್ಯಂತ ನೆಲೆ ಕಳೆಕೊಳ್ಳುತ್ತಿದೆ. ಇನ್ನೊಂದು ತುದಿಯಲ್ಲಿ ಬಿಜೆಪಿ ಕಾವಿ ಪಡೆಗಳ ಇತರ ವಿಧವಿಧದ ಸಂಘಟನೆಗಳ ಬೆಂಬಲದೊಂದಿಗೆ ನೆಲೆ ಗಳಿಸುತ್ತಿದೆ. ಇದರ ಅಪಾಯದ ಮಟ್ಟವನ್ನು ಸರಿಯಾಗಿ ಅಂದಾಜು ಮಾಡದಿರುವುದು ನಿಜವಾಗಿಯೂ ಮೂರ್ಖತನವಾಗುತ್ತದೆ. ಇಂತಹ ಸನ್ನಿವೇಶ ನಿರ್ಮಾಣ ಮಾಡಿದ್ದು ಕಾಂಗ್ರೆಸ್ ಪಕ್ಷ ರಾಜಿ ಮಾಡಿಕೊಳ್ಳುವ ತನ್ನ ರಾಜಕೀಯದಿಂದ ಮತ್ತು ತಲೆಚಿಟ್ಟು ಹಿಡಿಸುವ ಭ್ರಷ್ಟಾಚಾರದಿಂದ. ಒಂದೆಡೆ ಭ್ರಷ್ಟ ಕಾಂಗ್ರೆಸ್(ಐ), ಇನ್ನೊಂದೆಡೆ 'ಮೆದು' ಹಿಂದುತ್ವದ, ಆಕ್ರಮಣಕಾರಿ ಕೋಮುವಾದದ ಬಿಜೆಪಿ. ಈ ಎರಡು ಧ್ರುವಗಳ ನಡುವೆ ನಿಂತಿವೆ ಕಾಂಗ್ರೆಯೇತರ ಜಾತ್ಯಾತೀತ ಪ್ರತಿಪಕ್ಷಗಳು. ಇವರ ವಿಷಯದಲ್ಲೂ ತಾವೇ ಗಾಯ ಮಾಡಿಕೊಂಡು, ಸತತವಾಗಿ ಕೈಕಾಲು ಮುರಿದುಕೊಳ್ಳುವ ವಿಚಿತ್ರ ಕಾಯಿಲೆ ಯಾರ ಕಣ್ಣು ತಪ್ಪಿಸಲೂ ಸಾಧ್ಯವಿಲ್ಲ. ಎಡಶಕ್ತಿಗಳು ಅಲ್ಲಲ್ಲಿ ಸಣ್ಣಪುಟ್ಟ ತೊಂದರೆಗಳಿದ್ದರೂ ಹೆಚ್ಚು ಸುಸಂಗತ ಹಾಗೂ ಒಗ್ಗಟ್ಟಾಗಿವೆ. ಆದರೆ ನಾವು ಈ ದೇಶದಲ್ಲಿನ ಘಟನೆಗಳ ದಿಕ್ಕನ್ನು ಬದಲಿಸುವ ನಿರ್ಣಾಯಕ ಪ್ರಭಾವ ಬೀರುವಷ್ಟು ಬಲಿಷ್ಠವಾಗಿಲ್ಲ. ಈ ಎಲ್ಲಾ ಅಂಶಗಳನ್ನು ಒಟ್ಟಾಗಿ ಸೇರಿಸಿಟ್ಟಾಗ ಮೂಡಿ ಬರುವ ಚಿತ್ರವೆಂದರೆ ಕಳೆಗುಂದಿದ ಭಾರತೀಯ ರಾಜಕೀಯ ವ್ಯವಸ್ಥೆ.

ಸಿಪಿಐ(ಎಂ) ಯಾರನ್ನು ಹೆಚ್ಚು ಅಪಾಯಕಾರಿ ಎಂದು ಪರಿಗಣಿಸುತ್ತದೆ? -ಕಾಂಗ್ರೆಸ್ಸನ್ನೇ ಅಥವಾ ಬಿಜೆಪಿಯನ್ನೇ? -ಇದು ಕಮ್ಯುನಿಸ್ಟೇತರ ಪತ್ರಿಕೆಗಳ ಅತ್ಯಂತ ಪ್ರೀತಿಯ ಚಾಳಿ. ಅದಕ್ಕೊಂದು ಸರಳ ಉತ್ತರ ಇಷ್ಟೆ-ಯಾವ ಅಪಾಯದ ವಿರುದ್ಧ ನೀವು ಹೋರಾಡುತ್ತಿಲ್ಲವೋ ಅದು ಹೆಚ್ಚು ಅಪಾಯಕಾರಿ. ಈ ಹೋರಾಟವೇನೂ ನಿರ್ವಾತದಲ್ಲಿ ನಡೆಯುವುದಿಲ್ಲ. ಪ್ರಶ್ನೆಗಳ ಮೇಲೆ ನಡೆಯುತ್ತದೆ. ಆದ್ದರಿಂದ ಪ್ರಶ್ನೆಗಳೇ ಹೋರಾಟದ ಸ್ವರೂಪವನ್ನು, ಯಾರು-ಯಾರನ್ನೆಲ್ಲಾ ಹೋರಾಟಕ್ಕೆ ಅಣಿಗೊಳಿಸಬೇಕೆಂಬುದನ್ನು ನಿರ್ಧರಿಸುತ್ತವೆ. ಒಂದು ನಿರ್ದಿಷ್ಟ ಸಮಯದಲ್ಲಿ ನಮ್ಮ ಶತ್ರುಗಳಲ್ಲಿ ಯಾರು ಪ್ರಧಾನ ಶತ್ರು, ಯಾರ ವಿರುದ್ಧ ಧಾಳಿಯನ್ನು, ಕೇಂದ್ರೀಕರಿಸಬೇಕು ಎಂಬುದನ್ನು ಎದ್ದು ಬರುವ ಪ್ರಶ್ನೆಗಳೇ ನಿರ್ಧರಿಸುತ್ತವೆ. ಇಲ್ಲಿ ಕೂಡಾ ಒಬ್ಬ ಶತ್ರುವಿನ ವಿರುದ್ಧ ನಮ್ಮ ಧಾಳಿಯನ್ನು ಕೇಂದ್ರೀಕರಿಸಿದರೆ ಇನ್ನೊಬ್ಬ ಶತ್ರು ನಮ್ಮ ಮಿತ್ರನಾಗುತ್ತಾನೆ ಎಂದು ಭಾವಿಸಬಾರದು.

ಸಿಪಿಐ(ಎಂ) ತನ್ನ ಪ್ರಧಾನ ಶತ್ರುವನ್ನು ಗುರುತಿಸುವ ಬಗ್ಗೆ ಪತ್ರಿಕೆಗಳಲ್ಲಿ ನಡೆದಿರುವ ಊಹಾಪೋಹ ಬಹಳ ಮೃದುವಾಗಿ ಹೇಳಬೇಕಾದರೆ ಬರಡುತನವಷ್ಟೆ. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ನಮ್ಮ ಪ್ರಧಾನ ಶತ್ರುಗಳು. ಇಬ್ಬರ ವಿರುದ್ಧವೂ ನಾವು ಹೋರಾಡುತ್ತೇವೆ. ಆದರೆ ಸಂದರ್ಭಾನುಸಾರ ಅವು ಒಡ್ಡುವ ಅಪಾಯದ ಮೇಲೆ, ಎರಡರಲ್ಲಿ ಒಂದರ ವಿರುದ್ಧ ಹೋರಾಟ ಮುಂಚೂಣಿಗೆ ಬರಬಹುದು.

ಪಕ್ಷದ ಕೇಂದ್ರ... ಕೆಲಸ

ಪಕ್ಷದ ಕೇಂದ್ರದ ... ಸದ ಬಗ್ಗೆ ಮದ್ರಾಸ್ ಮ... ಧಿವೇಶನದ ನಿರ್ದೇಶ... ಆಧಾರದ ಮೇಲೆ ಸಾ... ಸುಧಾರಣೆ ಆಗಿದೆ. ಪೊ... ಬ್ಯೂರೋ ದ ನಿಯ... ಸಭೆಗಳು ಹಾಗೂ ದೆಹಲಿಯಲ್ಲಿರುವ ... ಸದಸ್ಯರು ಪ್ರತಿ ಬೆಳಿಗ್ಗೆ ಸೇರು... ನಿಯಮಿತವಾಗಿ ನಡೆಯತ್ತಿದೆ. ಕೇ... ಸಮಿತಿಯ ಉಪಸಮಿತಿಗಳು ಹೆಚ್ಚು ... ಸ್ಥಿತವಾಗಿ ಕಾರ್ಯನಿರ್ವಹಿಸಲು ಆರಂ... ದ್ದರೂ, ಇನ್ನೂ ಸಾಕಷ್ಟು ಸುಧಾ... ಆಗಬೇಕಾಗಿದೆ. ಕಿಸಾನ್ -ಕೃಷಿಕೂಲಿಕಾ... ಉಪಸಮಿತಿ ಆ ರಂಗಗಳ ವಾ... ವಿಮರ್ಶೆ ಮಾಡಿ ವರದಿ ತಯಾರಿ... ಟ್ರೇಡ್ ಯೂನಿಯನ್ ಉಪಸಮಿತಿ ವಾ...



ಲದ ಜೀತವನ್ನು ಹಾಗೂ ಗೇಣಿಯನ್ನು
ಿನಗೊಳಿಸುತ್ತೇನೆ ಎಂದು ಭರವಸೆ
ಿಟ್ಟಿದ್ದರಿಂದ ರೈತರನ್ನು ಸೆಳೆಯಲು
ದಕ್ಕೆ ಸಾಧ್ಯವಾಯಿತು."

ಜರ್ಮನಿಯಲ್ಲಿ ಫ್ಯಾಸಿಸಂ
ಜಯ ಅನಿವಾರ್ಯವಾಗಿತ್ತೇ
ಂಬ ಪ್ರಶ್ನೆಗೆ 'ಇಲ್ಲ' ಎಂಬುದೇ
ಮಿತ್ರೋವ್‌ರ ಖಚಿತ ಉತ್ತರ.
ಫ್ಯಾಸಿಸಂ ವಿರುದ್ಧ ಸಂಯುಕ್ತ ರಂಗ
ವನ್ನು ಕಟ್ಟಬೇಕೆಂದು ಕಮ್ಯುನಿಸ್ಟರು
ಪದೇ ಪದೇ ಮುಂದಿಟ್ಟ ಪ್ರಸ್ತಾವ
ಳನ್ನು ಸೋಷಲ್ ಡೆಮೊಕ್ರಾಟರು
ಒಪ್ಪಿದ್ದರೆ ಫ್ಯಾಸಿಸಂಗೆ ಜಯವಾಗು
ತ್ತಿರಲಿಲ್ಲ ಎಂದವರು ಅಭಿಪ್ರಾಯ
ಪಟ್ಟಿದ್ದಾರೆ.

*"ಕಾರ್ಮಿಕ ವರ್ಗ ತನ್ನ ಸಹಜ
ಮಿತ್ರರಿಂದ ಬೇರ್ಪಟ್ಟಿದ್ದು ಕೂಡ
ಫ್ಯಾಸಿಸಂ ಅಧಿಕಾರಕ್ಕೆ ಬರಲು ಕಾರಣ
ವಾಯಿತು. ಸೋಷಿಯಲ್ ಡೆಮೊಕ್ರಾ
ಟರು ಕಾರ್ಮಿಕ ವರ್ಗದ ಹೆಸರಿನಲ್ಲಿ
ಅನುಸರಿಸಿದ ನೀತಿಗಳು ವಾಸ್ತವವಾಗಿ
ರೈತ ವಿರೋಧಿಯಾಗಿದ್ದರಿಂದ ರೈತರ
ದೊಡ್ಡ ವಿಭಾಗದ ಒಲವನ್ನು ಗಳಿಸಿ
ಕೊಂಡು ಅಧಿಕಾರಕ್ಕೆ ಬರಲು ಫ್ಯಾಸಿ
ಸಂಗೆ ಸಾಧ್ಯವಾಯಿತು."*

ಫ್ಯಾಸಿಸ್ಟ್ ಅಪಾಯದ ವಿರುದ್ಧ
ಹೋರಾಡಲು,ರಾಷ್ಟ್ರೀಯ ವಿಮೋ
ಚನಾ ಆಂದೋಳನಗಳ ಭಾಗವಾ
ಗುವಂತೆ ಆಗಲು, ವಸಹಾತುಶಾಹಿ
ದೇಶಗಳಲ್ಲಿ ರೈತರ ಮತ್ತು ಬಂಡ
ವಾಳಶಾಹಿ ಪಾತ್ರಕ್ಕೆ ಸಂಬಂಧಿಸಿದ
ಸಂಕುಚಿತ ಪಂಥವಾದಿ ಧೋರ
ಣೆಯಿಂದ ಪಾರು ಮಾಡಲು ಕಮ್ಯು
ನಿಸ್ಟ್ ಚಳುವಳಿಗೆ ಮಾರ್ಗದರ್ಶನ
ನೀಡಲು ಕಮ್ಯುನಿಸ್ ಇಂಟರ್
ನ್ಯಾಷನಲ್‌ನ 7ನೇ ಮಹಾಧಿವೇ
ಶನ ಭಾರತದ ಕಮ್ಯುನಿಸ್ಟ ಅಂದೋ
ಳಕ್ಕಂತೂ ಹೊಸ ಚೇತನವನೇ
ಒದಗಿಸಿತು. ಅದು ಇತರ ಸಾಮ್ರಾ
ಜ್ಯಶಾಹಿ ವಿರೋಧಿ ಶಕ್ತಿಗಳೊಂ
ದಿಗೆ ಕೂಡಿಕೊಂಡು ರಾಷ್ಟ್ರೀಯ
ಚಳುವಳಿಯಲ್ಲಿ ದೊಡ್ಡ ಪಾತ್ರ
ವನ್ನು ವಹಿಸಲು ಆರಂಭಿಸಿತು.

ವ್ಯರ್ಥವಾದ ಮನವಿ

ಕೊಮಿಂಟರ್ನ್‌ನ ಏಳನೇ ಮಹಾಧಿವೇಶನದ ನಂತರ ಜಗತ್ತಿನಲ್ಲೆಡೆಯ ಕಮ್ಯುನಿಸ್ಟ್ ಪಕ್ಷಗಳು ಫ್ಯಾಸಿಸಂ ಸ್ವರೂಪವನ್ನು ಬಯಲುಮಡಲು ಸತತವಾಗಿ ಶ್ರಮಿಸಿದರು. ಫ್ಯಾಸಿಸ್ಟ್ ಪಿಡುಗನ್ನು ಎದುರಿಸಲು ಒಂದಾಗುವಂತೆ ಸೋವಿಯತ್ ಒಕ್ಕೂಟ ಸಾಮ್ರಾಜ್ಯಶಾಹಿ ದೇಶಗಳಿಗೆ ಒಂದಾದ ಮೇಲೆ ಇನ್ನೊಂದರಂತೆ ಮನವಿ ಮಾಡಿತು. ಆದರೆ ಅವು ತಮ್ಮ ವರ್ಗಗುಣ ಮತ್ತು ಸೋವಿಯತ್ ವಿರುದ್ಧದ ದ್ವೇಷದಿಂದಾಗಿ ಸಮಾಜವಾದಿ ದೇಶವನ್ನು ನಾಶ ಮಾಡುವುದರಲ್ಲೇ ಹೆಚ್ಚು ಆಸಕ್ತವಾಗಿದ್ದವು. ಈ ಉದ್ದೇಶಕ್ಕಾಗಿ ಫ್ಯಾಸಿಸ್ಟ್ ಶಕ್ತಿಗಳನ್ನು ಬಳಸಿಕೊಳ್ಳಬಹುದು ಎಂದೂ ಆಲೋಚಿಸಿದವು.

ಈ ನಡುವೆ, ಹಿಟ್ಲರನ ಆಡಳಿತದಲ್ಲಿ ಜರ್ಮನಿ ಭಾರೀ ಸೇನೆಯನ್ನೇ ಜಮಾಯಿಸಿಕೊಂಡು ಯುದ್ಧಕ್ಕೆ ಅಂತಿಮವಾಗಿ ಜಗತ್ತಿನ ಮೇಲೆ ಹಿಡಿತ ಸ್ಥಾಪಿಸಲು ಸಜ್ಜುಗೊಂಡಿತು. ಹಿಟ್ಲರ್ ಮೊದಲು ದುರ್ಬಲವಾದ ನೆರೆ ದೇಶದ ವಿರುದ್ಧ ಪ್ರಯೋಗ ನಡೆಸಿದ. ಫ್ಯಾಸಿಸಂ ವಿರುದ್ಧ ತಮ್ಮ ಜನರನ್ನು ಅಣಿನೆರೆಯಿಸಲು ವಿಫಲವಾದ ಈ ದೇಶಗಳ ಸರಕಾಗಳು ನಾಜಿ ಪಡೆಗಳು ಮುನ್ನುಗ್ಗುವುದನ್ನು ತಡೆಯಲು ವಿಫಲವಾದವು. ತನ್ನ ಯುದ್ಧಯಂತ್ರದ ದಕ್ಷತೆಯಯನ್ನು ಕಂಡು ಹಾಗೂ ಯಶಸ್ಸಿನ ರುಚಿಯನ್ನು ಅನುಭವಿಸಿದ ಮೇಲಷ್ಟೆ ಹಿಟ್ಲರ್ ತನ್ನ ಸೇನೆಯನ್ನು ಸೋವಿಯತ್ ಒಕ್ಕೂಟದತ್ತ ತಿರುಗಿಸಿದ.

ಪುಟ 7ಕ್ಕೆ

ವಿನಾಶದತ್ತಲೇ ಪಯಣ

ಪಯಣ ಹೊರಟರೆ ಒಳ್ಳೆಯ ಗುರಿ ಸೇರುವ ಉದ್ದೇಶದಿಂದ ಹೊರಡುತ್ತೇವೆ. ಹಾಗೆ ಯಾವುದಾದರೂ ಕೆಲಸ ಮಾಡುವಾಗ ಒಳ್ಳೆಯದನ್ನು ಸಾಧಿಸುವ ಸಲುವಾಗಿ ಕೆಲಸ ಮಾಡುತ್ತೇವೆ. ಉದಾರೀಕರಣದ ಉದ್ದೇಶವೂ ಈ ದೇಶದ ಒಳಿತೇ ಎಂದು ನರಸಿಂಹರಾಯರ ಸರ್ಕಾರ ದೊಡ್ಡ ಬಂಡವಾಳಿಗರ ಪತ್ರಿಕೆಗಳು ಮಾಧ್ಯಮಗಳು ಶಂಖ ಹೊಡೆದು ಕೂಗಿ ಕೂಗಿ ಹೇಳುತ್ತಿವೆ. ಸಂಸತ್ತಿನಲ್ಲೂ ಸರ್ಕಾರ ಇದನ್ನೇ ಹೇಳುತ್ತದೆ. ಇದನ್ನು ಸಾದರಪಡಿಸಲು ಸುಳ್ಳುಗಳ ಸರಮಾಲೆಯನ್ನೆ ಹೆಣೆಯುತ್ತದೆ. ಆದರೆ ನಿಜವೇನು? ಈ ಉದಾರೀಕರಣ ದೇಶವನ್ನು ಎತ್ತ ಕೊಂಡೊಯ್ಯುತ್ತಿದೆ?

ಎಡಪಂಥೀಯರ ಅಭಿಪ್ರಾಯ ಬೇಡ. ಬೂರ್ಝ್ವ ಪತ್ರಿಕೆಯೊಂದು ಬರೆದಿರುವುದನ್ನು ನೋಡಿದರೆ ನಿಜ ಸ್ಫಟಿಕದಷ್ಟು ಸ್ಪಷ್ಟವಾಗುತ್ತದೆ. ಅದು ಬಳಸಿರುವ ಪರಿಕರಗಳು ಭಾರತೀಯ ಆರ್ಥಿಕದ ಅಧ್ಯಯನ ಕೇಂದ್ರ (ಸಿ.ಎಮ್.ಐ.ಇ -CMIE)ದ ಅಂಕೆ ಸಂಖ್ಯೆಗಳು. ಈ ಸಿಎಂಐಇಯ ಅಧ್ಯಯನದ ಪ್ರಕಾರದ

1. 1987-88 ರಿಂದ 1993-94ರ ಅವಧಿಯಲ್ಲಿ ದೇಶದ ಒಟ್ಟುತ್ಪಾದನೆಯ ಬೆಳವಣಿಗೆ ಕುಸಿದಿದೆ.
2. ಹಣ ಹೂಡಿಕೆ ಅದರಲ್ಲೂ ಉತ್ಪಾದನೆಗೆ ಅತ್ಯವಶ್ಯವಾಗಿ ಬೇಕಾಗಿರುವ ಯಂತ್ರೋಪಕರಣಗಳಲ್ಲಿನ ಹೂಡಿಕೆ ಕುಸಿದಿದೆ.
3. ಸ್ಥಿರಾಸ್ತಿಗಳ ಉತ್ಪಾದಕತೆ 1990-91 ರಿಂದ 1993-94 ರ ನಡುವೆ ಬಹಳ ಕುಸಿದಿದೆ.
4. ಕಂಪನಿಗಳ ಲಾಭದ ಪ್ರಮಾಣ ಈ ಸಮಯದಲ್ಲಿ ಏರಿದೆ.

ಉದಾರೀಕರಣದ ಉದ್ದೇಶಗಳೊಂದಿಗೆ ಇವನ್ನು ಹೋಲಿಸಿ ನೋಡೋಣ.

⊙ ಉದಾರೀಕರಣ ಇಲ್ಲಿ ಇರತಕ್ಕ ಅಡೆತಡೆಗಳನ್ನು ತೆಗೆದುಹಾಕಿ ಹಣ ಹಣ ಹೂಡಿಕೆಯ ಪ್ರಮಾಣವನ್ನು ಹೆಚ್ಚಿಸಬಯಸುತ್ತದೆ. ಆದರೆ ಅದು ಕುಸಿದಿದೆ.

⊙ ಶೇರು ಮಾರುಕಟ್ಟೆಯ ನಿರ್ಭಂಧಗಳನ್ನು ತೆಗೆದು ಹಾಕಿದರೆ ಹಣ ಹೂಡಿಕೆ ಹೆಚ್ಚಾಗುತ್ತದೆ. ಹೀಗೆ ಆಗುವುದರಿಂದ ಹೂಡಿಕೆಯ ಮೇಲಿನ ಪ್ರತಿಫಲವೂ ಹೆಚ್ಚುತ್ತದೆ ಎಂಬುದು ಉದಾರೀಕರಣ ಅರ್ಥಶಾಸ್ತ್ರದ ವಿಶ್ಲೇಷಣೆ ಆದರೆ ಈ ಪ್ರತಿಫಲ ಕುಸಿದಿದೆ.

⊙ ಎಲ್ಲಕ್ಕೂ ಮಿಗಿಲಾಗಿ ಸರ್ಕಾರ ಉದಾರೀಕರಣದಿಂದ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗುತ್ತವೆ, ಆ ಮೂಲಕ ಹೆಚ್ಚು ಜನ ಉದ್ಯೋಗಿಗಳಾಗಿ ಅನುಕೂಲಸ್ಥರಾಗುತ್ತಾರೆ, ಬಡತನ ಕಡಿಮೆ ಆಗುತ್ತದೆ ಎಂದಿತ್ತು. ಇದಕ್ಕೆ ವಿರುದ್ಧವಾದದೇ ಆಗಿದೆ. ಉದ್ಯೋಗಸ್ಥರು ಉದ್ಯೋಗ ಕಳೆದುಕೊಳ್ಳುತ್ತಿದ್ದಾರೆ.

⊙ ಉದಾರೀಕರಣದಿಂದ ಎಲ್ಲ ವಸ್ತುಗಳ ಬೆಲೆಗಳು ಇಳಿಯುತ್ತವೆ ಎಂದು ಹೇಳಲಾಗಿತ್ತು. ಆದರೆ ಯಾವ ವಸ್ತುವಿನ ಬೆಲೆ ಕಡಿಮೆಯಾಗಿದೆ? ಬದಲಿಗೆ ಎಲ್ಲ ವಸ್ತುಗಳ ಬೆಲೆ ಏರುತ್ತಲೇ ಇವೆ.

⊙ ಕಂಪನಿಗಳ ಲಾಭ ಹೆಚ್ಚಾಗಿವೆ ಹೇಗೆ? ಎಲ್ಲ ತರಹದ ಅವ್ಯವಹಾರಗಳಿಂದ ಭ್ರಷ್ಟ ವ್ಯವಹಾರಗಳಿಂದ.

ಕಂಪನಿಗಳು ಶೇರು ಮಾರುಕಟ್ಟೆಯಿಂದ (ಬಹುತೇಕ ಸಾಮಾನ್ಯ ಜನರಿಂದ) ಎತ್ತಿದ ಹಣ ಏನಾಯ್ತು? ಅದು ಉತ್ಪಾದಕ ಉದ್ದೇಶಗಳಿಗೆ ಬಳಕೆಯಾಗುತ್ತಿಲ್ಲವಾದರೆ ಎಲ್ಲಿ ಹರಿದು ಹೋಗುತ್ತದೆ?

ಈ ಕಂಪನಿಗಳ ಅವ್ಯವಹಾರ ಮುಚ್ಚಿಡಲು ಸುಳ್ಳುಗಳ ಪ್ರಚಾರ ಮಾಡಿ ಮಾರುಕಟ್ಟೆಯಿಂದ ಕೊಳ್ಳೆ ಹೊಡೆಯಲು ಖರ್ಚಾಗಿರುತ್ತದೆ.

ಇದನ್ನು ಒಂದು ಬೂರ್ಝ್ವ ಪತ್ರಿಕೆಯೇ ಬರೆದಿದೆ ಎಂದರೆ ಪರಿಸ್ಥಿತಿ ಹೇಗಿರಬೇಕೆಂದು ನೀವೇ ಊಹಿಸಿಕೊಳ್ಳಿ. ಎಂತಹ ಉದಾರ ಉದಾರೀಕರಣ!! ಅಲ್ಲವೆ?

ವಿಷವುಣಿಸಿ ಅಮೃತ ಕರೆವರೆ?

ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಮಾತನಾಡಿ ನಮ್ಮ ಉದಾರೀಕರಣದ ಸರ್ಕಾರ ಈ ಉದ್ದಿಮೆಗಳ ನಷ್ಟದಾಯಕತೆ, ಅಸಮರ್ಥತೆ ಇತ್ಯಾದಿಗಳ ಬಗ್ಗೆ ಉದ್ದಾನುದ್ದ ಮಾತುಗಳನ್ನಾಡುತ್ತದೆ. ಆದರೆ ಈ ಸಾರ್ವಜನಿಕ ವಲಯದ ಉದ್ದಿಮೆಗಳ ಪರಿಸ್ಥಿತಿಗೆ ಕಾರಣರಾರು?

ಈ ಸಾರ್ವಜನಿಕ ವಲಯದ ಉದ್ದಿಮೆಗಳ ಬಗೆಗಿನ ಸಂಸತ್ ಸಮಿತಿ ಸರ್ಕಾರವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಕಾರಣ? ಸರಕಾರ ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಆಗುವ ವಿಳಂಬದಿಂದಲೇ ಈ ಪರಿಸ್ಥಿತಿ. ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಓಸಿ)ನ ಉದಾಹರಣೆ ನೀಡುವ ಸಮಿತಿ ಐಓಸಿಯ ಹಲವು ಯೋಜನೆಗಳಿಗೆ ಒಪ್ಪಿಗೆ ನೀಡುವಲ್ಲಿ ಸರ್ಕಾರ ವಿಳಂಬ ಮಾಡಿದ್ದುದರಿಂದಲೇ ಈ ಐಓಸಿ ಅಪಾರ ಹಾನಿ ಅನುಭವಿಸಬೇಕಾಗಿ ಬಂದಿದೆ ಎಂದಿದೆ.

ಸರ್ಕಾರದ ಈ ವಿಷವುಂಡೂ ಈ ಉದ್ದಿಮೆಗಳು ಲಾಭವೆಂಬ ಅಮೃತ ನೀಡಬೇಕೆ?

"ಅಂತರ್ರಚನೆಗೆ ಖರ್ಚು ಮಾಡಲು ನಮಗೇನು ಗ್ರಹಚಾರವೇ?"

ಇದು ಖಾಸಗಿ ಬಂಡವಾಳಿಗರು ಈಗ ಕೇಳುವ ಪ್ರಶ್ನೆ. ಉದಾರೀಕರಣ ಬಂದಾಗಿನಿಂದ ಅಂತರ್ರಚನೆಗಳಾದ ಕಲ್ಲಿದ್ದಲು, ತೈಲ, ಬಂದರು ನಿರ್ಮಾಣ, ರಸ್ತೆಗಳು ಇತ್ಯಾದಿ ಕ್ಷೇತ್ರಗಳಲ್ಲೆಲ್ಲ ಖಾಸಗಿ ಬಂಡವಾಳಕ್ಕೆ ಅವಕಾಶವನ್ನು ಸರ್ಕಾರ ತೆರೆಯುತ್ತಲೇ ಬಂದಿವೆ. ವಿದ್ಯುತ್ ವಲಯದಲ್ಲಂತೂ ಸರ್ಕಾರ ಪ್ರತಿಫಲದ ಭರವಸೆಯನ್ನೇ ನೀಡಿದೆ. ಇದೊಂದು ಕ್ಷೇತ್ರದಲ್ಲಿ ಸುಲಭವಾಗಿ ತಿರುಚಿ ಹಣದೋಚಲು ಸಾಧ್ಯವೆಂಬ ಕಾರಣಕ್ಕಾಗಿ ಕೆಲವು ಬಹುರಾಷ್ಟ್ರೀಯ ಕಂಪನಿಗಳು ಮುಂದೆ ಬಂದು ಹಣಹೂಡಿವೆ.

ಆದರೆ ಉಳಿದ ಕ್ಷೇತ್ರಗಳು? ಈ ಕ್ಷೇತ್ರಗಳಿಂದಲೂ ಅಪಾರ ಪ್ರಮಾಣದಲ್ಲಿ ಲಾಭ ದೊರೆವುದಾದರೆ ಬಹುರಾಷ್ಟ್ರೀಯ ಕಂಪನಿಗಳು ಅಥವಾ ಖಾಸಗಿ ಬಂಡವಾಳಿಗರು ಬಂದಾರು, ಉದಾಹರಣೆಗೆ ರಸ್ತೆ ಅಭಿವೃದ್ಧಿ ಮಾಡಿದ ಸಂಸ್ಥೆ ಆ ರಸ್ತೆಯನ್ನು ಹಣ ನೀಡಿದವರಿಗೆ ಮಾತ್ರ ಬಳಸಲು ನೀಡುವಂತೆ ಅವಕಾಶ ಮಾಡಿಕೊಟ್ಟರೆ ಆಗ ಇಲ್ಲಿ ಹಣ ಹೂಡಲು ಬಂದಾರು.

ಆದರೆ ಅಂತರ್ರಚನೆ ಸೌಕರ್ಯಗಳು ಇಲ್ಲದೆ ಯಾವ ದೇಶವೂ ಅಭಿವೃದ್ಧಿಯಾಗದು. ಸರ್ಕಾರ ಹಣಹೂಡದು. ಖಾಸಗಿಯವರಿಗೆ ಈ ಹಣಹೂಡಿಕೆ ಬೇಡ.

ಹಾಗಾದರೆ ಉದಾರೀಕರಣಕ್ಕೂ ಅಭಿವೃದ್ಧಿಗೂ ಎಣ್ಣೆ-ಸೀಗೆ ಸಂಬಂಧ ಅಲ್ಲವೆ?



ಭಯಾನಕ ರೋಗ ಬೆಳೆಸುವವರು

ವಿಶ್ವ ಆರೋಗ್ಯ ಸಂಸ್ಥೆ ವಿಶ್ವದ ಎಲ್ಲಾ ಭಾಗದ ಜನರ ಪರಿಸ್ಥಿತಿಗಳನ್ನು ಅಧ್ಯಯನ ಮಾಡಿ ಒಂದು ನಿರ್ಣಯಕ್ಕೆ ಬಂದಿವೆ. ಅದರ ಪ್ರಕಾರ ಬಡತನವೇ ಜಗತ್ತಿನ ಅತ್ಯಂತ ಭಯಾನಕ ರೋಗ.

ಬಡವರ ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚುತ್ತಲೇ ಇದೆ. ಬಡತನ ಹೆಚ್ಚಿದಂತೆಲ್ಲ ಆರೋಗ್ಯದತ್ತ ಗಮನ ಕಡಿಮೆಯಾಗುತ್ತಲೇ ಹೋಗುತ್ತದೆ. ಆದ್ದರಿಂದ ಬಡವರು ರೋಗಗಳ ಆಗರವಾಗಿ ಹೋಗುತ್ತಾರೆ. ಇದು ಅತ್ಯಂತ ಅಪಾಯಕಾರಿ ಪರಿಸ್ಥಿತಿ.

ಆದ್ದರಿಂದಲೇ ಬಡತನವನ್ನು ಕಡಿಮೆ ಮಾಡಬೇಕು. ಬಡವರು ಮತ್ತು ಶ್ರೀಮಂತರ ನಡುವಿನ ಅಂತರವನ್ನು ಕಡಿಮೆ ಮಾಡಬೇಕು. ಇದು ಜಗತ್ತಿನ ಒಳಿತಿಗೆ ದಾರಿ.

ಇದು ವಿಶ್ವ ಆರೋಗ್ಯ ಸಂಸ್ಥೆಯ ಮಾತು. ಆದರೆ ನಮ್ಮ ಉದಾರೀಕರಣವಾದಿಗಳಿಗೆ ಇದಕ್ಕೆ ವಿರುದ್ಧವಾದದ್ದೇ ಪ್ರಿಯವಾದದ್ದು.

ಬಡತನ ಹೆಚ್ಚಿಸುವುದು, ಬಡವ ಶ್ರೀಮಂತರ ನಡುವಿನ ಅಂತರವನ್ನು ಹೆಚ್ಚಿಸುವುದು ಇವೇ ಉದಾರೀಕರಣದ ಗುರಿ ಅಲ್ಲವೇ?

ಸಾಲಭಾರದ. ಹೊರೆ

ಕೇಂದ್ರ ಸರ್ಕಾರದ ಸಾಲದ ಹೊರೆ ಹೆಚ್ಚುತ್ತಲೇ ಇದೆ. ಸರ್ಕಾರದ್ದೇ? ಆಗಲಿ ಬಿಡಿ ಎನ್ನಬೇಡಿ. ಇದು ಈ ದೇಶದ ಬಡವರ ಮೇಲಿನ ಹೊರೆ. ಬಂಡವಾಳಿಗರು ಈ ಹೊರೆಗೆ ಹೆಗಲು ನೀಡುವುದಿಲ್ಲ.

ಈ ಸಾಲದ ಭಾರ ಈಗ ಐದು ಲಕ್ಷದ ಐವತ್ತೆಂಟು ಸಾವಿರ ನಾಲ್ಕು ನೂರ ಇಪ್ಪತ್ತೊಂದು(558421) ಕೋಟಿ ರೂಪಾಯಿಗಳು. ಕಳೆದ ವರ್ಷದಲ್ಲಿ ಇದ್ದದ್ದಕ್ಕಿಂತ ಇದು ಎಪ್ಪತ್ತೇಳು ಸಾವಿರದ ಒಂಬೈನೂರ ಐವತ್ತನಾಲ್ಕು (77954) ಕೋಟಿ ರೂಪಾಯಿಗಳಷ್ಟು ಹೆಚ್ಚು.

ವಿದೇಶೀ ಸಾಲದ ಪ್ರಯಾಣವೂ ತೀವ್ರವಾಗಿ ಹೆಚ್ಚಿರುವುದರಿಂದ ಈ ಸಾಲದ ಮೇಲಿನ ಬಡ್ಡಿಯೂ ಹೆಚ್ಚಾಗಿದೆ.

ಸರ್ಕಾರ ಈಗ ಯೋಜನೆಗಳಿಗೆ ಹಣ ನೀಡುವುದಿಲ್ಲ, ಸಹಾಯಧನಗಳಿಗೆ ಹಣವಿಲ್ಲ, ಬಡಜನರಿಗೆ ನೆರವಾಗುವ ಯೋಜನೆಗಳಿಗೆ ಹಣ ನೀಡುವುದಿಲ್ಲ. ಅಭಿವೃದ್ಧಿ ಕಾರ್ಯಗಳ ಬಗ್ಗೆ ಈಗ ಸರ್ಕಾರದ ಜವಾಬ್ದಾರಿಯೇ ಅಲ್ಲ.

ಆದರೂ ಈ ಪ್ರಮಾಣದಲ್ಲಿ ಸಾಲದ ಹೊರೆ ಬೆಳೆಯುತ್ತಲೇ ಇದೆ. ಹಾಗಾದರೆ ಈ ಹಣವೆಲ್ಲಿ ಎಲ್ಲಿ ಹೋಗುತ್ತದೆ?

ಸರ್ಕಾರದ ಆಡಂಭರದ ಖರ್ಚಿಗೆ ತಾನೆ? ಇದೇ ಅಲ್ಲವೆ ಉದಾರೀಕರಣ?

15ನೇ ಮಹಾಧಿವೇಶನ ಕಂಡಂತೆ

15ನೇ ಮಹಾಧಿವೇಶನದಲ್ಲಿ ಮಂಡಿಸಲಾದ ಸಂಘಟನಾ ವರದಿಯ ಮುಖ್ಯ ಅಂಶಗಳ ಬಗ್ಗೆ ವರದಿಯಲ್ಲಿ ಹಿಂದಿನ ಸಂಚಿಕೆಯಲ್ಲಿ ಓದಿದ್ದೀರಿ. ವರದಿಯಲ್ಲಿ ಚರ್ಚಿಸಲಾದ ಸಿಪಿಐ(ಎಂ) ಮುಂದಿರುವ ಪ್ರಮುಖ ಸಂಘಟನಾ ಸಮಸ್ಯೆಗಳನ್ನು ಈ ಕೆಳಗೆ ಸಂಗ್ರಹಿಸಲಾಗಿದೆ.

ಸಿಪಿಐ(ಎಂ)ನ ಮುಂದಿರುವ ಪ್ರಮುಖ ಸಂಘಟನಾ ಸಮಸ್ಯೆಗಳು

ಯಾರಿಸಿಲ್ಲ, ಮಹಿಳಾ ಉಪಸಮಿತಿಯನ್ನು
ಕ್ರಿಯಗೊಳಿಸಬೇಕಾಗಿದೆ.

ಶಿಕ್ಷಣ, ಪ್ರಚಾರ-ಪ್ರಕ್ಷೋಭೆ ಪ್ರಕಟಣೆಯ ಕೆಲಸ

ಪಕ್ಷದ ಸೈದ್ಧಾಂತಿಕ ಶಿಕ್ಷಣ ಇನ್ನೂ
ವ್ಯವಸ್ಥಿತವಾಗಿ ನಡೆದಿಲ್ಲ, ಕೇರಳ, ಪಶ್ಚಿಮ
ಬಂಗಾಳಗಳಲ್ಲಿ ಶಾಶ್ವತ ಪಕ್ಷದ ಶಿಕ್ಷಣಾ ಕೇಂದ್ರ
ಹಾಗೂ ಪಠ್ಯಕ್ರಮವನ್ನು ಸ್ಥಾಪಿಸಲಾಗಿದೆ.
ಇನ್ನು ಕೆಲವು ರಾಜ್ಯಗಳಲ್ಲಿ ಇಂತಹ
ಪ್ರಯತ್ನ ನಡೆದಿದೆ. ಕೇಂದ್ರದಲ್ಲೂ ಎರಡು
ಪಾರ್ಟಿ ಸ್ಕೂಲುಗಳು ನಡೆದವು. ಆದರೂ
ಈ ವಿಧಿಸಬೇಕಾದ ಸೈದ್ಧಾಂತಿಕ ಸಮರಕ್ಕೆ
ಹೋಲಿಸಿದರೆ ಈ ಪ್ರಯತ್ನಗಳು ಏನೂ ಸಾಲವು. ಪಕ್ಷದ ಸ್ಕೂಲನ್ನು ವ್ಯವಸ್ಥಿತಗೊಳಿಸುವತ್ತ, ಪಠ್ಯಕ್ರಮ ಇತ್ಯಾದಿ ರೂಪಿಸಲು ಕೇಂದ್ರ ಸಮಿತಿ ಒಂದು ಉಪಸಮಿತಿಯನ್ನು ರಚಿಸಬೇಕಾಗಿದೆ.

ಪಕ್ಷ ಕೇಂದ್ರದ ಮುಖಪತ್ರಿಕೆಗಳಾದ "ಪೀಪಲ್ಸ್ ಡೆಮಾಕ್ರಸಿ" ಹಾಗೂ "ಲೋಕ ಲಹರ್" 12 ಪುಟಗಳಿಂದ 16 ಪುಟಕ್ಕೇರಿಸಿದ್ದರೂ ಪ್ರಸಾರ ಹಾಗೂ ಸಂಪಾದಕೀಯ ಗುಣಮಟ್ಟದಲ್ಲಿ ತೃಪ್ತಿಕರ ಬೆಳವಣಿಗೆ ಆಗಿಲ್ಲ. ಸುದ್ದಿ ಸಂಸ್ಥೆಯಾಗಿ ಐ.ಎನ್.ಎನ್. (ಇಂಡಿಯಾ ನ್ಯೂಸ್ ನೆಟ್‌ವರ್ಕ್) ಸ್ಥಾಪಿಸಲಾಗಿದ್ದರೂ ರಾಜ್ಯಗಳಲ್ಲಿ ಸಮರ್ಥ ವರದಿಗಾರರ ಅಭಾವ ಇದೆ. ಮುಖಪತ್ರಿಕೆಗಳಲ್ಲಿ ಸಂಪಾದಕೀಯ ಗುಣಮಟ್ಟ ಉತ್ತಮಪಡಿಸಲೂ ಸಮರ್ಥ ಕಾರ್ಯಕರ್ತರ ಅಭಾವ ಮುಖ್ಯ ಸಮಸ್ಯೆ. ಕೇರಳ, ಪಶ್ಚಿಮ ಬಂಗಾಳ, ಆಂಧ್ರ, ತಮಿಳುನಾಡುಗಳಲ್ಲಿ ಪಕ್ಷದ ದೈನಿಕಗಳು ಆಧುನೀಕರಿಸಿ ಗಮನಾರ್ಹ ಪ್ರಸಾರ ಹೆಚ್ಚಳ, ಹೆಚ್ಚಿನ ಅವತರಣಿಕೆಗಳನ್ನು ಕಂಡಿದೆ.

1994ರ ಇಡೀ ವರ್ಷ 'ಮಾರ್ಕ್ಸಿಸ್ಟ್' ಸೈದ್ಧಾಂತಿಕ ತ್ರೈಮಾಸಿಕ ಹೊರತರಲು ಆಗಲಿಲ್ಲ, ಪಾರ್ಟಿ ವಾರ್ತಾ ಪತ್ರಗಳನ್ನು ನಿಯಮಿತವಾಗಿ ತರಲು ಸಾಧ್ಯವಾಗಿಲ್ಲ, ಪಕ್ಷದ ಕೆಲವು ಪ್ರಕಟಣೆಗಳನ್ನು ತಂದಿದೆ. ಆದರೆ ಪಕ್ಷದ ಚಟುವಟಿಕೆಗಳಿಗೆ ಪೂರಕವಾಗುವ, ಸೈದ್ಧಾಂತಿಕ ಹೋರಾಟಕ್ಕೆ ಸಹಾಯ ಮಾಡಬೇಕಾದ ಪಕ್ಷದ ಪ್ರಚಾರ ಮಾಧ್ಯಮ ದುರ್ಬಲವಾಗಿದೆ. ಪಕ್ಷ ತನ್ನ ಪ್ರಕಟಣಾ ವಿಭಾಗವನ್ನು ಗಮನಾರ್ಹವಾಗಿ ಬಲಗೊಳಿಸಬೇಕಾಗಿದೆ.

ಸೈದ್ಧಾಂತಿಕ ಹೋರಾಟದ ಅಗತ್ಯವನ್ನು ಪಕ್ಷ ಇಡೀಯಾಗಿ ಇನ್ನೂ ಗ್ರಹಿಸಿಲ್ಲ, ತತ್‌ಕ್ಷಣದ ವಿಷಯಗಳ ಬಗ್ಗೆ ದೈನಂದಿನ ಪ್ರಚಾರ ಪ್ರಕ್ಷೋಭೆಯೊಂದೇ ಸಾಲದು. ತಿರುವಂತಪುರ ಎಕೆಜಿ ಸೆಂಟರ್ ಕೇರಳದ ಬಗ್ಗೆ ನಡೆಸಿದ ಅಂತರ್‌ರಾಷ್ಟ್ರೀಯ ವಿಚಾರ ಸಂಕಿರಣ ಈ ಬಗೆಯ ಹೋರಾಟವನ್ನು ವ್ಯಾಪಕವಾಗಿ ನಡೆಸಿದ ಹೊಸ ವಿಧಾನವಾಗಿತ್ತು. ಇದನ್ನು ದೊಡ್ಡ ಪ್ರಮಾಣದಲ್ಲಿ ನಡೆಸಲು ಸಿದ್ಧತೆ ಮಾಡಬೇಕಾಗಿದೆ.

ಹಿಂದೀ ರಾಜ್ಯಗಳಲ್ಲಿ ಪಕ್ಷದ ಬಲಾಬಲ

ಪಕ್ಷದ ಪ್ರಮುಖ ದೌರ್ಬಲ್ಯಗಳಲ್ಲೊಂದಾದ ಹಿಂದಿ ರಾಜ್ಯಗಳಲ್ಲಿ ದುರ್ಬಲ ಸಂಘಟನೆ ಹಾಗೇನೇ ಮುಂದುವರಿದಿದೆ. ಈ ರಾಜ್ಯಗಳಲ್ಲಿ ಸಾಮೂಹಿಕ ಸಂಘಟನೆಗಳ ಸದಸ್ಯತ್ವದಲ್ಲಿ ಹೆಚ್ಚಳವಿದ್ದರೂ, ಇನ್ನೂ ಬಹಳ ಏರುಪೇರಾಗುತ್ತಿರುತ್ತದೆ. ಸಾಮೂಹಿಕ ಸಂಘಟನೆಗಳು ತೀವ್ರ ಚಟುವಟಿಕೆಯಲ್ಲಿ ತೊಡಗದೆ ಪಕ್ಷವನ್ನು ಬಲಗೊಳಿಸಲು ಸಾಧ್ಯವಿಲ್ಲ ಎಂಬ ಬಗ್ಗೆ ಇನ್ನೂ ಸಾಕಷ್ಟು ಸ್ಪಷ್ಟ ತಿಳುವಳಿಕೆ ಇಲ್ಲ. ರಾಜಕೀಯ ಹಾಗೂ ಸೈದ್ಧಾಂತಿಕ ರಂಗದಲ್ಲೂ ಗಮನಾರ್ಹ ಸುಧಾರಣೆ ಆಗಿಲ್ಲ. 'ಲೋಕಲಹರ್'ನ ಪ್ರಸಾರದ ಹೆಚ್ಚಳ ಇಲ್ಲವೆನ್ನುವಷ್ಟು ಕಡಿಮೆ. ಈ ರಾಜ್ಯಗಳಲ್ಲಿ ನಮ್ಮ ದೌರ್ಬಲ್ಯವನ್ನು ಹೋಗಲಾಡಿಸುವ ದಾರಿಯನ್ನು ವಿಚಾರ

ಪುಟ 8ಕ್ಕೆ

ದೇಶದೊಳಗೆ



ವಿಶ್ವ

ಯಶಸ್ವಿ ತಮಿಳುನಾಡು ಬಂದ್

ಮೇ ನಾಲ್ಕರಂದು ತಮಿಳುನಾಡು ಬಂದ್ ನಡೆಸಲು ರಾಜ್ಯದ ಪ್ರತಿಪಕ್ಷಗಳು ನೀಡಿದ್ದ ಕರೆಗೆ ಇಡೀ ರಾಜ್ಯದಲ್ಲಿ ಜನರು ಸ್ಪಂದಿಸಿದ್ದಾರೆ. ಬಂದ್ ಯಶಸ್ವಯಾಗಿತ್ತು. ಶಾಂತಿಯುತವೂ ಆಗಿತ್ತು.

ಬಂದ್ ವಿಫುಲಗೊಳಿಸಲು ಎ.ಐ.ಡಿ.ಎಂ.ಕೆ. ನಡೆಸಿದ ಎಲ್ಲಾ ದಬ್ಬಾಳಿಕೆಯನ್ನು ಮೀರಿಯೂ ಬಂದ್ ಯಶಸ್ವಿಯಾಯಿತು.

ಮುಖ್ಯಮಂತ್ರಿ ಜಯಲಲಿತಾ ರಾಜೀನಾಮೆ ಕೊಡಬೇಕೆಂದು ಬಂದ್ ಗೆ ಕರೆ ನೀಡಿದ್ದ ಸಿಪಿಐ(ಎಂ), ಸಿಪಿಐ, ಡಿ.ಎಂ.ಕೆ., ಪಿ.ಎಂ.ಕೆ., ಎಂ.ಡಿ.ಎಂ.ಕೆ. ಮೊದಲಾದ ಪಕ್ಷಗಳ ಪ್ರಮುಖ ಬೇಡಿಕೆಯಾಗಿತ್ತು. ಕಾಂಗ್ರೆ ಕೂಡಾ ಬಂದ್ ಗೆ ಬೆಂಬಲ ಕೊಟ್ಟಿತ್ತು.

ಭ್ರಷ್ಟಾಚಾರದ ಆರೋಪಗಳನ್ನು ಎದುರಿಸುತ್ತಿರುವ ಮುಖ್ಯಮಂತ್ರಿ ಜಯಲಲಿತಾ ಅವರ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಬಹುದು ಎಂದು ರಾಜ್ಯಪಾಲ ಎಂ. ಚೆನ್ನಾರೆಡ್ಡಿ ಜನತಾಪಕ್ಷದ ಅಧ್ಯಕ್ಷ ಡಾ. ಸುಬ್ರಮಣ್ಯ ಸ್ವಾಮಿಗೆ ಅನುಮತಿ ಕೊಟ್ಟಿದ್ದರು. ಈ ಹಿನ್ನೆಲೆಯಲ್ಲಿ ಜಯಾರ ರಾಜೀನಾಮೆಯ ಬೇಡಿಕೆಯನ್ನು ಮಂಡಿಸಲಾಗಿತ್ತು.

ರಾಜ್ಯಪಾಲರ ಕ್ರಮವನ್ನು ಪ್ರಶ್ನಿಸಿ ಜಯಲಲಿತಾ ಸಲ್ಲಿಸಿದ್ದ ಅರ್ಜಿಯನ್ನು ಮದರಾಸು ಹೈಕೋರ್ಟ್ ತಿರಸ್ಕರಿಸಿದ್ದರಿಂದ ಪ್ರತಿಪಕ್ಷಗಳ ಬೇಡಿಕೆಗೆ ಇನ್ನಷ್ಟು ಬಲಬಂದಿತ್ತು.

ಸಾವಿರಾರು ಬಂಧನ

ಪ್ರತಿಪಕ್ಷಗಳ ಕರೆಗೆ ಜನರ ಉತ್ಸಾಹದ ಪ್ರತಿಕ್ರಿಯೆಯಿಂದ ಗಾಬರಿಗೊಂಡ ಸರಕಾರ ಬಂದನ್ನು ವಿಫುಲಗೊಳಿಸುವ ಉದ್ದೇಶದಿಂದ ದಬ್ಬಾಳಿಕೆ ನಡೆಸತೊಡಗಿತ್ತು. ರಾಜ್ಯದಾದ್ಯಂತ ಪ್ರತಿಪಕ್ಷಗಳ ಸಾವಿರಾರು ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು. ಹಿಂಸಾಚಾರವನ್ನು ಹುಟ್ಟುಹಾಕಲು ಪ್ರತಿಪಕ್ಷಗಳು ಹುನ್ನಾರ ನಡೆಸಿವೆ ಎಂದು ಸರಕಾರ ಭಾರೀ ಅಪಪ್ರಚಾರ ಮಾಡಿತು. ಜನರಲ್ಲಿ ತಪ್ಪು ಭಾವನೆ ಮೂಡಿಸಿ ಬಂದ್ ವಿರುದ್ಧ ಅಭಿಪ್ರಾಯವನ್ನು ರೂಪಿಸುವುದು ಸರಕಾರ ಉದ್ದೇಶವಮಾಗಿತ್ತು.

ಆದರೆ ಅದರ ಕುತಂತ್ರ ಫಲಿಸಲಿಲ್ಲ. ಕೆಲವು ಸಣ್ಣ ಪುಟ್ಟ ಅಹಿತಕರ ಘಟನೆಗಳನ್ನು ಬಿಟ್ಟರೆ ಉಳಿದಂತೆ ಬಹುತೇಕವಾಗಿ ಶಾಂತ ರೀತಿಯಿಂದ ಬಂದ್ ನಡೆಯಿತು. ಸರಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಯ ಸಿಬ್ಬಂದಿ ಕೂಡಾ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರಿಂದ ಆಳುವ ಪಕ್ಷದ ಕಾರ್ಮಿಕ ಸಂಘಟನೆ ಹಾಗೂ ಕೆಲವು ಕ್ಯಾಜುವಲ್ ಕಾರ್ಮಿಕರ ನೆರವಿನಿಂದ ಬಸ್ ಗಳನ್ನು ಓಡಿಸಲಾಯಿತು. 'ಪ್ರಯಾಣಿಕರ ರಕ್ಷಣಾ ಪಡೆ'ಗಳನ್ನು ಬಂದ್ ವೇಳೆ ಹೊಸದಾಗಿ ಪರಿಚಯಿಸಿದ್ದು ಹೊಸ ವಿದ್ಯಮಾನವಾಗಿತ್ತು. ಆಳುವ ಎ.ಐ.ಡಿ.ಎಂ.ಕೆ. ಯಾವುದೇ ಈ 'ಪಡೆ'ಯಲ್ಲಿ ಇದ್ದು ಬಸ್ ಗಳಲ್ಲಿ ಓಡಾಡುತ್ತಿದ್ದರು ಇದು ಜಯಲಲಿತಾರ ಹತಾಶೆಯ ಪ್ರತೀಕವಾಗಿದೆ.

ಸರಕಾರಿ ಭಾರಿ ದಬ್ಬಾಳಿಕೆ ನಡೆಸಿದರೂ ಬಂದ್ ಗೆ ಜನರ ಅಭೂತಪೂರ್ವ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು 'ಸರಕಾರದ ವಿರುದ್ಧದ ಜನರ ಆಕ್ರೋಶದ ಪ್ರತಿಬಿಂಬವಾಗಿದೆ' ಎಂದು ಡಿ.ಎಂ.ಕೆ. ಅಧ್ಯಕ್ಷ ಎಂ. ಕರುಣಾನಿಧಿ ಹೇಳಿದ್ದಾರೆ.

ಸಿಪಿಐ(ಎಂ) ಒತ್ತಾಯ

ಸರಕಾರದ ದಬ್ಬಾಳಿಕೆ ಹಾಗೂ ಪ್ರಜಾಪ್ರಭುತ್ವ ವಿರೋಧಿ ಕ್ರಮದ ಅಂಗವಾಗಿ ಬಂಧಿತರಾಗಿರುವ ಎಲ್ಲರನ್ನು ಬಿಡುಗಡೆ ಮಾಡಬೇಕು ಎಂದು ಸಿಪಿಐ(ಎಂ) ತಮಿಳುನಾಡು ರಾಜ್ಯ ಸಮಿತಿ ಕಾರ್ಯದರ್ಶಿ ಎನ್. ಶಂಕರಯ್ಯ ಒತ್ತಾಯಿಸಿದ್ದಾರೆ.

ಗೋವರಿ ಹತ್ಯಾಕಾಂಡಕ್ಕೆ ಪೋಲೀಸರು ಹೊಣೆ

ಕಳೆದ ವರ್ಷ ನವೆಂಬರ್‌ನಲ್ಲಿ ಒಂದು ಇಡೀ ಪ್ರದೇಶದಲ್ಲಿ ಆಘಾತದ ಅಲೆಯೊಂದು ಹರಿದಿತ್ತು. ಮಹಾರಾಷ್ಟ್ರದಿಂದ ಆ ಘೋರ ಸುದ್ದಿ ಬಂದಿತ್ತು.

ನಾಗಾಪುರದಲ್ಲಿ ಶಾಂತಿಯುತವಾಗಿ ಪ್ರದರ್ಶನ ನಡೆಸುತ್ತಿದ್ದ ಗೋವಾರಿ ಬುಡಕಟ್ಟು ಜನರ ವಿರುದ್ಧ ಪೋಲೀಸರು ಅಮಾನುಷವಾಗಿ ವರ್ತಿಸಿದ್ದರಿಂದ ಉಂಟಾದ ಕಾಲ್ತುಳಿತಕ್ಕೆ ಸಿಕ್ಕಿ 150 ಹೆಚ್ಚು ಗೋವಾರಿಗಳು ಮೃತಪಟ್ಟಿದ್ದರು.

ಮೀಸಲಾತಿ ಸೌಲಭ್ಯಕ್ಕಾಗಿ ತಮ್ಮನ್ನು ಬುಡಕಟ್ಟು ಜನರ ಪಟ್ಟಿಗೆ ಸೇರಿಸಬೇಕೆಂಬುದ ಗೋವಾರಿಗಳ ಪ್ರಮುಖ ಬೇಡಿಕೆಯಾಗಿತ್ತು.

ಸುಮಾರು 50,000 ಗೋವಾರಿಗಳು ಆ ದಿನ ಜಮಾಯಿಸಿದ್ದರು. ಪೋಲೀಸರ ಅವಿವೇಕದ ಕೃತ್ಯದಿಂದಾಗಿ ಮುಗ್ಧ ಜನರ ಹೆಣಗಳು ಬಿದ್ದವು. ಪೋಲೀಸರದ್ದೇ ಬಹುತೇಕ ತಪ್ಪು ಎಂದು ಆಗಲೇ ಬಹಳಷ್ಟು ಪತ್ರಿಕೆಗಳು ಬರೆದಿದ್ದವು. ಈ ಅಮಾನವೀಯ ಕೃತ್ಯಕ್ಕೆ ದೇಶದೆಲ್ಲೆಡೆ ಆಕ್ರೋಶ ವ್ಯಕ್ತವಾಗಿತ್ತು.

'ಪೋಲೀಸ್ ನಿರ್ಮಿತ'ವಾದ ಆ ದುರಂತದ ಬಗ್ಗೆ ತನಿಖೆ ನಡೆಸಿದ ಭಾರತೀಯ ಜನತಾ ಮಾನವ ಹಕ್ಕುಗಳ ಆಯೋಗ (ಐ.ಪಿ.ಎಚ್. ಆರ್.ಸಿ.) ಕೂಡಾ ಈ ಅಭಿಪ್ರಾಯಕ್ಕೆ ಪುಷ್ಠಿ ನೀಡಿದೆ.

ಲಾಠಿ ಪ್ರಹಾರದಿಂದ ಗಾಬರಿಗೊಂಡು ಓಡುತ್ತ ಕಾಲ್ತುಳಿತಕ್ಕೆ ಒಳಗಾದ ಜನರು ಬದುಕಿದ್ದಾರೆಯೇ ಸತ್ತಿದ್ದಾರೆಯೇ ಎಂಬುದನ್ನು ಗಮನಿಸದೆ ಅವರನ್ನು ವ್ಯಾನ್ ಗಳಿಗೆ ಎತ್ತಿ ಹಾಕಲಾಯಿತು. ಇದರಿಂದ ಕೂಡಾ ಸಾವುಗಳು ಸಂಭವಿಸಿವೆ ಎಂದು ಆಯೋಗದ ತನಿಖಾ ಮಂಡಳಿಯಲ್ಲಿದ್ದ ನ್ಯಾಯಾಧೀಶರು ಹೇಳಿದ್ದಾರೆ. ನ್ಯಾ. ಎಸ್. ಎಂ. ದಾವೂದ್ (ನಿವೃತ್ತ) ಮತ್ತು ಕೇರಳ ಹೈಕೋರ್ಟಿನ ಮಾಜಿ ನ್ಯಾಯಾಧೀಶ ಕೆ.ಕೆ. ನರೇಂದ್ರ ಮಂಡಳಿಯ ಸದಸ್ಯರಾಗಿದ್ದರು.

ಪೋಲೀಸರು ಜವಾಬ್ದಾರಿಯಿಂದ ವರ್ತಿಸಿದ್ದರೆ 20ನೇ ಶತಮಾನದ ಈ ದುರಂತವನ್ನು ತಪ್ಪಿಸಬಹುದಿತ್ತು ಎಂದು ನ್ಯಾಯಮೂರ್ತಿಗಳು ಹೇಳಿದ್ದಾರೆ.

"ಎರಡೂ ಕಡೆಯಿಂದ ಹಿಂಸಾಚಾರ ನಿಲ್ಲಲಿ. ಶಾಂತಿ-ಅಭಿವೃದ್ಧಿ ನಮಗೆ ಬೇಕು" ಕಾಶ್ಮೀರಿ ಜನಸಾಮಾನ್ಯರ ಆಕಾಂಕ್ಷೆ

ಕಾಶ್ಮೀರ ಕಣಿವೆಯ ಜನ ಉಗ್ರಗಾಮಿಗಳ ಹಿಂಸಾಚಾರದ ಹಾಗೂ ಭದ್ರತಾ ಪಡೆಗಳ ಅತ್ಯಾಚಾರಗಳಿಂದ ಬೇಸತ್ತಿದ್ದಾರೆ. ಅದರಿಂದ ಶಾಂತಿ ಮತ್ತು ಅಭಿವೃದ್ಧಿ ಬಯಸುತ್ತಾರೆ. ಇದು ಸಿಪಿಐ(ಎಂ)ನ ಜಮ್ಮು-ಕಾಶ್ಮೀರ ರಾಜ್ಯ ಕಾರ್ಯದರ್ಶಿ-ಮಹಮ್ಮದ್ ಯುಸುಫ್ ತರಿಗಾಮಿ ಕಣ್ಣಾರೆ ಕಂಡ ಸಂಗತಿ.

ಏಪ್ರಿಲ್ 22 ಹಾಗೂ 23 ರಂದು ಅವರು ಅನಂತನಾಗ್ ಜಿಲ್ಲೆಯ ಕುಲ್ ಗಾಂ -ನೂರ್ ಬಾದ್ ಪ್ರದೇಶದ ಹಲವು ಹಳ್ಳಿಗಳಿಗೆ ಹಾಗೂ ಕುಲ್‌ಗಾಂ ಪಟ್ಟಣಕ್ಕೆ ಭೇಟಿ ನೀಡಿದ್ದರು. ತರಿಗಾಮಿಯವರು ಕಳೆದ ಐದು ವರ್ಷಗಳಲ್ಲಿ ಕಾಶ್ಮೀರದ ಗ್ರಾಮೀಣ ಪ್ರದೇಶಗಳಿಗೆ ಭೇಟಿ ನೀಡಿದ ಪ್ರಥಮ ರಾಜಕೀಯ ಕಾರ್ಯಕರ್ತರಾಗಿದ್ದಾರೆ.

ಹಳ್ಳಿಗಳ ವ್ಯಾಪಕ ಭೇಟಿಯ ವೇಳೆಗೆ ತರಿಗಾಮಿಯವರು ಹಲವಾರು ಸಭೆಗಳನ್ನುದ್ದೇಶಿಸಿ ಮಾತನಾಡಿದರು. ಅವುಗಳಲ್ಲಿ ಜನ ನೂರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ತಮ್ಮ ಕುಂದುಕೊರತೆಗಳನ್ನು ದೂರುಗಳನ್ನು ಮುಂದಿಟ್ಟಿದ್ದರು. ಈ ಬಗ್ಗೆ ಐ.ಎನ್.ಎಸ್. ಸುದ್ದಿ ಸಂಸ್ಥೆ ಯೊಡನೆ ಒಂದು ಸಂದರ್ಶನದಲ್ಲಿ ಮಾತನಾಡುತ್ತಾ ತರಿಗಾಮಿಯವರು "ಅಭಿವೃದ್ಧಿಯಾಗುತ್ತಿದೆ ಎಂದು ಆಡಳಿತ ದೊಡ್ಡದಾಗಿ ಹೇಳಿಕೊಂಡರೂ ಗ್ರಾಮೀಣ ಪ್ರದೇಶಗಳು ಸಂಪೂರ್ಣ ನಿರ್ಲಕ್ಷಿತವಾಗಿವೆ ಎಂಬುದು ವಾಸ್ತವ ಸಂಗತಿ. ಈ ಕುಲ್‌ಗಾಂ-ನೂರ್ ಬಾದ್ ಪ್ರದೇಶಕ್ಕೆ ರಸ್ತೆಗಳ, ಸೇತುವೆಗಳ ವ್ಯವಸ್ಥೆಯಿಲ್ಲದ ಭಯಾನಕ ಪರಿಸ್ಥಿತಿಗಳಿಂದ ರಾಜ್ಯದ ಇತರೆಡೆಗಳಿಂದ ಸಂಪರ್ಕವೇ ಇಲ್ಲದಂತಾಗಿದೆ. ಸರಕಾರೀ ಹಾಗೂ ಖಾಸಗಿ ಸಾರಿಗೆಯವರು ಈ ಪ್ರದೇಶಕ್ಕೆ ವಾಹನಗಳನ್ನೇ ಓಡಿಸದಿರುವುದರಿಂದ ಇಲ್ಲಿಯ ಸಾಮಾನ್ಯ ನಾಗರಿಕರ ಪಾಡು ಇನ್ನಷ್ಟು ಹದಗೆಟ್ಟಿದೆ' ಎಂದರು.

ಹಿಂಸಾಚಾರದ ಜತೆಗೆ ಭ್ರಷ್ಟಾಚಾರ ಕೂಡಾ

ಕಳೆದ ಚಳಿಗಾಲದಲ್ಲಿ ಈ ಪ್ರದೇಶದಲ್ಲಿ ವಿಪರೀತ ಹಿಮಪಾತವಾದಾಗ ಉಗ್ರಗಾಮಿಗಳ ನಿರ್ದೇಶನದ ಹೆಸರಲ್ಲಿ ಹಿಮವನ್ನು ಸರಿಸುವ ಕೆಲಸ ನಡೆಯಲೇ ಇಲ್ಲ ಇದರಿಂದಾಗಿ ಈ ಹಳ್ಳಿಗರ ಸುಮಾರು 12 ಗರ್ಭಿಣಿ ಹೆಂಗಸರು ಸಮಯಕ್ಕೆ ಸರಿಯಾಗಿ ಆಸ್ಪತ್ರೆಗೆ ಹೋಗಲಾರದೆ ಸತ್ತರು ಎಂದು ತರಿಗಾಮಿ ತಿಳಿಸುತ್ತಾರೆ. ಇನ್ನೂ ಹೊಲಸು ಸಂಗತಿಯೆಂದರೆ ಇನ್ನೂ ಹಿಮವನ್ನು ಸರಿಸಿಲ್ಲವಾದರೂ ಆ ಕೆಲಸವಾಗಿದೆ ಎಂದು ಇಂಜಿನಿಯರಿಂಗ್ ಇಲಾಖೆ ಮಾತ್ರ ಈಗಾಗಲೇ ಬಿಲ್ ಪಾವತಿ ಮಾಡಿಸಿಕೊಂಡಿದೆ!

ಜಿಲ್ಲಾ ಅಧಿಕಾರಿಗಳು ಭ್ರಷ್ಟಾಚಾರಕ್ಕೆ ಕುಖ್ಯಾತರಾದವರು ಎನ್ನುತ್ತಾ ತರಿಗಾಮಿಯವರು ಕಳೆದ ವರ್ಷ ಎಂಟು ಕೋಟಿ ರೂಪಾಯಿಗಳನ್ನು ನುಂಗಿ ಹಾಕಿದ ಹಗರಣದ ಉದಾಹರಣೆ ನೀಡುತ್ತಾರೆ. "ನಮ್ಮ ಪಕ್ಷದ ಪ್ರಯತ್ನಗಳಿಂದಾಗಿ ಈ ಹಗರಣದ ಮೇಲೆ ಕ್ರಮ ಕೈಗೊಳ್ಳಲಾಯಿತು, ಜಿಲ್ಲಾ ಕಮಿಶನರ್ ಸೇರಿದಂತೆ ಕೆಲವು ಅಧಿಕಾರಿಗಳನ್ನು ವಜಾ ಮಾಡಲಾಯಿತು" ಎಂದು ತರಿಗಾಮಿ ಹೇಳಿದರು.

ಈ ಪ್ರದೇಶದ ತೀವ್ರ ನಿರ್ಲಕ್ಷ್ಯದ ಬಗ್ಗೆ ಹೇಳುತ್ತು ಅನಂತನಾಗ್ ಬಹುಪಾಲು ಕೃಷಿಯಲ್ಲಿ ತೊಡಗಿರುವ ಜಿಲ್ಲೆಯಾದರೂ ರೈತರಿಗೆ ಗೊಬ್ಬರ ಸಿಗುತ್ತಿಲ್ಲ ಎಂದು ತರಿಗಾಮಿ ಹೇಳುತ್ತಾರೆ. ಪಟ್ಟಣಗಳಲ್ಲೂ ವಿದ್ಯುತ್ ಇಲ್ಲ, ಸೀಮೆಎಣ್ಣೆಯೂ ಸಿಗುತ್ತಿಲ್ಲ. ಜಿಲ್ಲೆಯನ್ನು ಪ್ರವೇಶಿಸುವ ಅಲ್ಪಸ್ವಲ್ಪ ಸೀಮೆಎಣ್ಣೆ ಕೂಡಾ ಕಾಳಸಂತೆಯಲ್ಲಿ ದುಬಾರಿ ಬೆಲೆಯಲ್ಲಿ ಮಾರಾಟವಾಗುತ್ತದೆ.

ಉಗ್ರಗಾಮಿಗಳು ಹೌಹಾರಿದರು.

ಉಗ್ರಗಾಮಿ ಸಂಘಟನೆ ಹಿಜ್ ಬುಲ್ ಮುಜಾಹಿದೀನ್ ತರಿಗಾಮಿಯವರ ಭೇಟಿಗೆ ಜನರ ಸ್ಪಂದನ ಕಂಡು ಹೌಹಾರಿತು. ಎಚ್ಚರಿಕೆ ಗಂಟೆಯೆಂದು ಕುಲ್ ಗಾಂ ಗ್ರಾಮದ ಒಬ್ಬ ಹಿರಿಯ ನಾಗರಿಕ 75 ವರ್ಷದ ಹಾಜಿ ಅಮೇಹ್‌ಭತ್‌ನ ತೋಳಿಗೆ ಗುಂಡೇಟು ಹೊಡೆಯಲಾಯಿತು. "ನನ್ನೊಡನೆ ಕೈಕುಲಿಕಿದ್ದಕ್ಕಾಗಿ ಮಾತ್ರವೇ ಭತ್‌ರ ತೋಳಿಗೆ ಗುಂಡೇಟು ಬಿದ್ದಿದೆ' ಎಂದರು ತರಿಗಾಮಿ. ಅವರೀಗ ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿದ್ದಾರೆ.

ಹಿಜ್‌ಬುಲ್ ಮುಜಾಹಿದೀನ್ ತರಿಗಾಮಿಯವರು ಭೇಟಿ ನೀಡಿದ ಎಲ್ಲಾ ಗ್ರಾಮಗಳಲ್ಲಿ ಪೋಸ್ಟರ್‌ಗಳನ್ನು ಹಾಕಿ ಸಿಪಿಐ(ಎಂ) ಮುಖಂಡರನ್ನು ಮತ್ತೊಮ್ಮೆ ಭೇಟಿಯಾಗಬೇಡಿ ಎಂದು ಜನರಿಗೆ ಎಚ್ಚರಿಕೆ ನೀಡಿದೆ. ಆ ಸಂಘಟನೆಯ ಕಮಾಂಡರ್ ಎನಿಸಿಕೊಳ್ಳುವಾತ ಆ ಪೋಸ್ಟರುಗಳಿಗೆ ಸಹಿ ಮಾಡಿದ್ದಾನೆ.

ಆದರೆ ತಾವು ಉಗ್ರಗಾಮಿಗಳಿಂದ ಹಾಗೂ ನಡೆಯುತ್ತಿರುವ ಹಿಂಸಾಚಾರದಿಂದ ಸಂಪೂರ್ಣ ಭ್ರಮನಿರಸನಗೊಂಡಿದ್ದೇವೆ ಎಂದು ಜನರು ತರಿಗಾಮಿಯವರಿಗೆ ಸ್ಪಷ್ಟಪಡಿಸಿದರು. ಭದ್ರತಾ ಪಡೆಗಳ ಅತ್ಯಾಚಾರಗಳ ಬಗ್ಗೆಯೂ ಅವರು ದೂರಿದರು. ಮೇಲಧಿಕಾರಿಗಳೊಂದಿಗೆ ತಮ್ಮ ಸಮಸ್ಯೆಗಳನ್ನು ಎತ್ತಿ ಎಂದು ಭಿನ್ನವಿಸಿದರು. ಎರಡೂ ಕಡೆಗಳಿಂದ ಹಿಂಸಾಚಾರ ನಿಲ್ಲಬೇಕು ಎಂಬುದನ್ನು ಅವರು ಮತ್ತೆ ಮತ್ತೆ ಭಿನ್ನವಿಸಿಕೊಂಡರು. ಶಾಂತಿ ಮತ್ತು ಅಭಿವೃದ್ಧಿ ಅವರ ಪ್ರಧಾನ ಆಕಾಂಕ್ಷೆ ಎಂದು ತರಿಗಾಮಿ ತಿಳಿಸಿದ್ದಾರೆ.

(ಐ.ಎನ್.ಎಸ್.)

ಪೋಲಿಸ್ ದೌರ್ಜನ್ಯ, ಸಿ.ಐ.ಟಿ.ಯು ಖಂಡನೆ.

ಪೀಣ್ಯ: ಪೀಣ್ಯಾದ ಇಂಟಿಗ್ರೇಟೆಡ್ ಕಾರ್ಮಿಕರ ಹೋರಾಟವನ್ನು ಮುರಿಯಲು, ರಾಜಗೋಪಾಲ್ ನಗರ ಪೋಲಿಸರನ್ನು ಉಪಯೋಗಿಸಿಕೊಳ್ಳುವುದಲ್ಲದೆ, ಕಾಮಾಕ್ಷಿಪಾಳ್ಯದ ಪೋಲಿಸರನ್ನು ಉಪಯೋಗಿಸಿಕೊಳ್ಳಲಾಗಿದೆ. ಸಂಘದ ಪದಾದಿಕಾರಿಗಳಲ್ಲೊಬ್ಬರಾದ ರಾಮಲಿಂಗಯ್ಯರನ್ನು ಏಪ್ರಿಲ್ 14ರ ರಾತ್ರಿ ಅವರ ನಿವಾಸದಿಂದ ಎತ್ತಿಕೊಂಡು ಹೋಗಿ 3 ದಿನಗಳ ಕಾಲ ಪೋಲಿಸ್ ಸ್ಟೇಶನ್‌ನಲ್ಲಿಟ್ಟುಕೊಂಡು ಅವರಿಗೆ ಅತೀವ ಹಿಂಸೆ ಕೊಟ್ಟು ಏರೋಪ್ಲೇನ್ ಎತ್ತಿಸಿ ನಂತರ ಪೋಲಿಸ್ ಕಮಿಷನ್‌ರಿಗೆ ನಾವು ಲಿಖಿತ ದೂರು ಕೊಟ್ಟ ಮೇಲೆ ಬಿಟ್ಟಿದ್ದಾರೆ.

ಕೂಡಲೇ ಸರಕಾರ ಕಾಮಾಕ್ಷಿಪಾಳ್ಯ ಪೋಲೀಸ ಸ್ಟೇಶನ್ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀ ಚಂಗಪ್ಪ ಸಬ್ ಇನ್ಸ್‌ಪೆಕ್ಟರ್ ಯಶವಂತ ಸರ್ದಾರ್ ಮತ್ತು ಮೂವರು ಪೋಲಿಸ್ ಪೇದೆಗಳನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಬೇಕೆಂದು ಸಿ.ಐ.ಟಿ.ಯು ಒತ್ತಾಯಿಸುತ್ತದೆ. ಒಂದು ವಾರದೊಳಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಈ ಪೋಲಿಸ್ ದೌರ್ಜನ್ಯವನ್ನು ಖಂಡಿಸಿ ಕಾರ್ಮಿಕರ ಉಗ್ರ ಪ್ರತಿಭಟನೆಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳ ಬೇಕಾಗುತ್ತದೆಂದೂ ಸಿ.ಐ.ಟಿ.ಯು ಎಚ್ಚರಿಸಿದೆ.

ಚಿಲ್ಲರೆ ವ್ಯಾಪಾರಸ್ಥರ ಪ್ರತಿಭಟನೆ

ವಿಜಾಪುರ: ಏಪ್ರಿಲ್ 30 ರಂದು ಶನಿದೇವರ ರಸ್ತೆಯಿಂದ ಎ.ಪಿ.ಎಂ.ಸಿ ವಾರ್ಡಿಗೆ ಕಾಯಿಪಲ್ಯ ಇನ್ನಿತರ ಚಿಲ್ಲರೆ ಸಂತೆ ವ್ಯಾಪಾರವನ್ನು ನಗರಸಭೆಯವರು ವರ್ಗಾಯಿಸಿದ್ದರ ವಿರುದ್ಧ 3 ಕಾಯಿಪಲ್ಯ ಚಿಲ್ಲರೆ ವ್ಯಾಪಾರಸ್ಥರು ತಮ್ಮ ಗಂಟು ಮೂಟೆಯನ್ನು ಹೊತ್ತಿಕೊಂಡು ಘೋಷಣೆ ಕೂಗುತ್ತ ಜಿಲ್ಲಾಧಿಕಾರಿಗಳ ಮನೆ ಮುಂದೆ ಸೇರಿದರು. ಶ್ರೀ ರೋಜನದಾರ ನಗರಸಭೆಯ ಸದಸ್ಯರು ಶನಿದೇವರ ರಸ್ತೆಯಿಂದ ಎ.ಪಿ.ಎಂ.ಸಿ ವಾರ್ಡಗೆ ವರ್ಗಾಯಿಸಿದ್ದು ಸಭೆಯಲ್ಲಿ ವಿರೋಧಿಸಿದ್ದೇವೆ. ಎ.ಪಿ.ಎಂ.ಸಿ ವಾರ್ಡನಲ್ಲಿ ರೋಕ್ ವ್ಯಾಪಾರ ನಡೆಯುತ್ತದೆ. ಆದರೆ ಚಿಲ್ಲರೆ ವ್ಯಾಪಾರ ಮಾಡಲಿಕ್ಕೆ ಕಾನೂನು ಇಲ್ಲ ಅದನ್ನು ಬದವಾಯಿಸಿ ಸಾರ್ವಜನಿಕರಿಗೂ ವ್ಯಾಪಾರಸ್ಥರಿಗೂ ಅನುಕೂಲ ಮಾಡಿಕೊಡಬೇಕೆಂದು ಒತ್ತಾಯಿಸಿದರು. ಭೀಮಶಿ ಕಲಾದಗಿ ರೈತ ಸಂಘದ ಜಿಲ್ಲಾಧ್ಯಕ್ಷರು ಮಾತನಾಡಿದರು.

ವಾರಿಕಾರರ, ಆರೋಗ್ಯ ಮಾರ್ಗದರ್ಶಿಗಳ ವೇತನ ಏರಿಕೆಗೆ ಒತ್ತಾಯ

ವಿಜಾಪುರ: ಮಾಜಿ ವಾರಿಕಾರರ ಸಂಘ ಹಾಗೂ ಸಮುದಾಯ ಆರೋಗ್ಯ ಮಾರ್ಗದರ್ಶಿಗಳ ಸಂಘಟನೆಗಳ ಸಂಯುಕ್ತ ಆಶ್ರಯದಲ್ಲಿ ಪ್ರಮುಖ ಬೇಡಿಕೆಗಳಾದ ಮಾಜಿ ವಾಲಿಕಾರರಿಗೆ ಮತ್ತು ಆರೋಗ್ಯ ಮಾರ್ಗದರ್ಶಿಗಳಿಗೆ ಕೊಡತಕ್ಕಂತ ತಿಂಗಳಿಗೆ ಕೇವಲ 75 ರೂ ಯಾವುದಕ್ಕೂ ಸಾಲದು ಅವರ ಬದುಕು ಚಿಂತಾಜನಕವಾಗಿದ್ದರಿಂದ ಪ್ರತಿ ತಿಂಗಳಿಗೆ ಕನಿಷ್ಠ 500 ರೂಪಾಯಿಗಳಿಗೆ ಏರಿಸಬೇಕು ಮತ್ತು ನಿವೇಶನ ರಹಿತವಾದ ಅವರಿಗೆ ನಿವೇಶನ ಸಲುವಾಗಿ ಜಮೀನು ಮಂಜೂರ್ ಮಾಡಬೇಕು. ಅವರ ಮಕ್ಕಳಿಗೆ ಸರ್ಕಾರದ ಯಾವುದೆ ಇಲಾಖೆಯಲ್ಲಿ ನೌಕರಿ ತುಂಬುವಾಗ ಮೊದಲನೆಯ ಆಧ್ಯತೆ ಕೊಡಬೇಕೆಂದು ಒತ್ತಾಯಿಸಿ ಜಿಲ್ಲಾದಿಕಾರಿಗಳ ಕಛೇರಿಯ ಮಂದೆ ಮೇ 2 ರಿಂದ ಅನಿರ್ಧಿಷ್ಟ ಕಾಲ ಧರಣಿ ಆರಂಭಿಸಿದರು.

ಸರ್ಕಾರವು ಇವರನ್ನು ಕಡೆಗಣಿಸಿ ಮಲತಾಯಿ ದೋರಣೆ ತಾಳಿದ್ದನ್ನು ಖಂಡಿಸಿದ ಧರಣಿಕಾರರು ಬೇಡಿಕೆ ಪೂರೈಸುವವರೆಗೆ ದರಣಿ ಕೈ ಬಿಡುವುದಿಲ್ಲ ಎಂದು ಅವರು ಸರ್ಕಾರಕ್ಕೆ ಎಚ್ಚರಿಸಿದ್ದಾರೆ. ಇಂದಿನ ಧರಣಿಯಲ್ಲಿ ಮಾಜಿ ವಾಲಿಕಾರರ ಪರವಾಗಿ ದಸ್ತಗೀರ್ ಸಾಬ್, ಭೀಮಶಿ, ರಾಜಶೇಖರ್, ಪಾಟೀಲ್ ಸೆಂಟರ್ ಆಫ್ ಟ್ರೇಯುನಿಯನ್ ಜಿಲ್ಲಾ ಸಮಿತಿ ಮುಖಂಡರಾದ ಮುನ್ನಸಾಬ್ ಕಲಾದಗಿ, dyfi ನ ಸದಾನಂದ ಮೋದಿ, ಯಲ್ಲಪ್ಪ ಚಲವಾದಿ ಹಾಗೂ ಮುಂತಾದವರು ಇಂದಿನ ಧರಣಿಯ ನೇತೃತ್ವ ವಹಿಸಿದ್ದರು.

ಲೋಕ ಸಂಚಾರ

ಶರತ್ಚಂದ್ರ

ಬಲಪಂಥೀಯ ಚಿರಾಕ್ ಹೊಸ ಫ್ರೆಂಚ್ ಅಧ್ಯಕ್ಷ

ಮೂರು ಬಾರಿ ಪ್ಯಾರಿಸ್‌ನ ಮೇಯರಾಗಿದ್ದ ಹಾಗೂ ಪ್ರಧಾನಮಂತ್ರಿಯಾಗಿದ್ದ ಬಲಂಥೀಯ ಚಿರಾಕ್ ಫ್ರಾನ್ಸ್ ನ ಅಧ್ಯಕ್ಷರಾಗಿ ಎರಡನೇ ಸುತ್ತಿನ ಮತದಾನದಲ್ಲಿ ಆಯ್ಕೆಯಾಗಿದ್ದಾರೆ. ಅವರು ಸೋಶಲಿಸ್ಟ್ ಅಭ್ಯರ್ಥಿ ಜೊಸ್‌ಫಿನ್ ಅವರನ್ನು ಅತ್ಯಲ್ಪ ಬಹುಮತದಿಂದ ಸೋಲಿಸಿ ಆಯ್ಕೆಯಾಗಿದ್ದಾರೆ. ಮೊದಲ ವರದಿಗಳ ಪ್ರಕಾರ ಬಹುಮತ ಕೇವಲ ಶೇಕಡಾ 2 ಮತಗಳದ್ದು ಎನ್ನಲಾಗಿದೆ. ಚಿರಾಕ್ ಅವರು 7 ವರ್ಷಗಳ ಕಾಲ ಅಂದರೆ 2002. 21 ನೇ (ಶತಮಾನದ ಆದಿವರೆಗೆ) ಫ್ರೆಂಚ್ ಅಧ್ಯಕ್ಷರಾಗಿರುತ್ತಾರೆ.

ಮೊದಲ ಸುತ್ತಿನ ಮತದಾನದಲ್ಲಿ ಚಿರಾಕ್ ಸೋಶಲಿಸ್ಟ್ ಅಭ್ಯರ್ಥಿ ಜೊಸ್‌ಪಿನ್ ಅವರಿಂದ ಶೇಕಡಾ 3 ರಷ್ಟು ಮತಗಳಿಂದ ಹಿಂದಿದ್ದರು. ಮೊದಲ ಸುತ್ತಿನಲ್ಲಿ ಒಂಭತ್ತು ಅಭ್ಯರ್ಥಿಗಳಿದ್ದು ಸೋಶಲಿಸ್ಟ್ ಜೋಸ್‌ಪಿನ್ ಶೇಕಡಾ 23.2 ಮತಗಳಿಸಿ ಎಲ್ಲರಿಗಿಂತ ಮುಂದಿದ್ದರು. ಗಾಲಿಸ್ಟ್ ಪಕ್ಷದ ನಾಯಕ ಚಿರಾಕ್ ಶೇಕಡಾ 20.5 ಮತಗಳಿಸಿದ್ದರು. ಪ್ರಸಕ್ತ ಪ್ರಧಾನಿ ಹಾಗೂ ಬಲಪಂಥೀಯ ಪಕ್ಷದ ಅಭ್ಯರ್ಥಿ ಬಲ್ಲಾದುರ್ ಶೇಕಡಾ 18.54 ಮತಗಳಿಸಿದ್ದರು. ಬಲಪಂಥೀಯ ಉಗ್ರಗಾಮಿ ಹಾಗೂ ನವ-ನಾಜಿ ಪಂಥದ ನಾಯಕ ಲೆ ಪೆನ್ ಶೇಕಡಾ 15ರಷ್ಟು ಮತಗಳಿಸಿದ್ದಾರೆ. ಕಮ್ಯುನಿಸ್ಟ್ ನಾಯಕ ರೊಬರ್ಟ್ ಹೂ, ಟ್ರೊಟ್‌ಸ್ಕಿವಾದಿ ನಾಯಕ ಲ್ಯಾಗುಲ್ಲೆರ್ ಹಾಗೂ ಪರಿಸರವಾದಿ ನಾಯಕ ಡೊಮಿನಿಕ್ ವೊಯ್‌ನೆಟ್ ಒಟ್ಟು ಶೇಕಡಾ 17ರಷ್ಟು ಮತಗಳಿಸಿದ್ದಾರೆ. ಈ ಮೂವರು ನಾಯಕರು ಹಾಗೂ ಪಕ್ಷಗಳು ಎರಡನೇ ಸುತ್ತಿನಲ್ಲಿ ಸೋಶಲಿಸ್ಟ್ ಅಭ್ಯರ್ಥಿ ಜೊಸ್ ಪಿನ್ ಅವರಿಗೆ ಎಡಪಂಥೀಯ ಅಭ್ಯರ್ಥಿಯಾಗಿ ಬೆಂಬಲ ಕೊಟ್ಟಿದ್ದರು. ಮೊದಲ ಸುತ್ತಿನಲ್ಲಿ ಶೇಕಡಾ 40ರಷ್ಟು ಇದ್ದ ಎಡಪಂಥೀಯ ಮತಗಳು ಎರಡನೇ ಸುತ್ತಿನಲ್ಲಿ ಶೇಕಡಾ 48ಕ್ಕೇರಿದೆ. ಫ್ರೆಂಚ್ ಅಧ್ಯಕ್ಷೀಯ ಚುನಾವಣಾ ನಿಯಮಗಳ ಪ್ರಕಾರ ಮೊದಲನೆಯ ಸುತ್ತಿನ ಮತದಾನದಲ್ಲಿ ಅತ್ಯಧಿಕ ಮತ ಪಡೆದ ಅಭ್ಯರ್ಥಿಗೆ ಶೇಕಡಾ 50ಕ್ಕಿಂತ ಹೆಚ್ಚು ಮತಬರದಿದ್ದರೆ, ಎರಡನೇ ಸುತ್ತಿನಲ್ಲಿ ಅತ್ಯಧಿಕ ಮತ ಪಡೆದ ಎರಡು ಅಭ್ಯರ್ಥಿಗಳಿಗೆ ಮತದಾನ ನಡೆಯುತ್ತದೆ.

ನವ-ನಾಜಿ ಲೇಪೆನ್ ನಡೆಸಿದ ರ್‍ಯಾಲಿಯಲ್ಲಿ ಭಾಗವಹಿಸುತ್ತಿದ್ದ ಕೆಲವು ಉನ್ಮತ್ತ ಯುವಕರು ಮೊರೊಕ್ಕೊ ವಲಸೆಗಾರರನ್ನು ಅಟ್ಟಿಸಿಕೊಂಡು ಹೋಗಿ ನದಿಯಲ್ಲಿ ಮುಳುಗಿಸಿ ಕೊಂದ ಘಟನೆ ಎರಡು ಸುತ್ತಿನ ಮತದಾನಗಳ ನಡುವೆ ನಡೆದು ಆತಂಕ ಹುಟ್ಟಿಸಿತ್ತು. ಚಿರಾಕ್ ಹಾಗೂ ಜೊಸ್‌ಪಿನ್ ಇಬ್ಬರೂ ಈ ಘಟನೆಯನ್ನು ಖಂಡಿಸಿದ್ದರೂ ಲೆಪೆನ್ ಬೆಂಬಲದ ಮೇಲೆ ಅವಲಂಬಿತನಾಗಿದ್ದ ಚಿರಾಕ್‌ಗೆ ಇದರಿಂದ ಹೆಚ್ಚಿನ ಹಾನಿ ಆಗಬಹುದೆಂದು ನಿರೀಕ್ಷಿಸಲಾಗಿತ್ತು. ಮೊದಲ ಸುತ್ತಿನಲ್ಲಿ ಸೋಶಲಿಸ್ಟ್ ಅಭ್ಯರ್ಥಿ ಹೆಚ್ಚಿನ ಮತಪಡೆದಿದ್ದು ಹಾಗೂ ಎರಡನೇ ಸುತ್ತಿನಲ್ಲಿ ಅತ್ಯಲ್ಪ ಬಹುಮತದಿಂದ ಬಲಪಂಥೀಯ ಅಭ್ಯರ್ಥಿ ಆಯ್ಕೆಯಾಗಿದ್ದು ಫ್ರೆಂಚ್ ಆಳುವ ವರ್ಗಗಳಲ್ಲಿ ಆತಂಕ, ಮೂಡಿಸಿದೆ

ಮಲೇಶ್ಯಾ ಪ್ರಧಾನಿ ಮಹಾತೀರ್ ಪುನರಾಯ್ಕೆ

1981ರಿಂದ ಮಲೇಶ್ಯಾದ ಪ್ರಧಾನಿಯಾಗಿರುವ ಮಹಾತೀರ್ ಮಹ್ಮದ್ ರ ರಾಷ್ಟ್ರೀಯರಂಗ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಪುನರಾಯ್ಕೆಯಾಗಿದೆ. ರಾಷ್ಟ್ರೀಯ ರಂಗ 192 ಸೀಟುಗಳ ಪಾರ್ಲಿಮೆಂಟಿನಲ್ಲಿ ಶೇಕಡಾ 82ಗಳಿಗಿಂತ ಹೆಚ್ಚು ಸೀಟುಗಳಿಸಿದೆ. ತನ್ನ ಬಲವನ್ನು ಹೆಚ್ಚಿಸಿಕೊಂಡಿದೆ. 1957ರಿಂದ ಬ್ರಿಟನ್ ನಿಂದ ಸ್ವಾತಂತ್ರ್ಯ ಪಡೆದ ನಂತರ ಇದು ರಾಷ್ಟ್ರೀಯರಂಗ ಅತಿ ದೊಡ್ಡ ವಿಜಯ. ಮುಖ್ಯ ವಿರೋಧ ಪಕ್ಷವಾದ ಚೀನಿ ಮೂಲದವರ ಮುಖ್ಯ ಬೆಂಬಲದಿಂದಿರುವ ಡಿ.ಎ.ಪಿ. (ಡೆಮಾಕ್ರಾಟಿಕ್ ಆಕ್ಷನ್ ಪಾರ್ಟಿ) ಬಲ ಪಾರ್ಲಿಮೆಂಟಿನಲ್ಲಿ 20 ಸೀಟುಗಳಿಂದ 7 ಸೀಟುಗಳಿಗೆ ಇಳಿದಿದೆ.

ಪ್ರಧಾನಿ ಮಹಾತೀರ್ ಮಹ್ಮದ್ ಅಂತರ್‍ರಾಷ್ಟ್ರೀಯ ವೇದಿಕೆಗಳಲ್ಲಿ ಮೂರನೇ ಜಗತ್ತಿನ ಹಿತಾಸಕ್ತಿ ಹಾಗೂ ಐಕ್ಯತೆಯ ಬಗ್ಗೆ ದೃಢ ನಿಲುವು ತೆಗೆದುಕೊಳ್ಳುವ ನಾಯಕ. EAEC (East Asian Economic Cacus) ಎಂಬ ಆರ್ಥಿಕ ಸಹಕಾರ ಸಂಘಟನೆಯನ್ನು ಪೂರ್ವ ಏಶ್ಯಾದ ದೇಶಗಳು ಕಟ್ಟಿಕೊಳ್ಳಬೇಕೆಂದು ವಾದಿಸುತ್ತಾ ಬಂದವರು.

ಬ್ರಿಟನ್‌ನಲ್ಲಿ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಟೋರಿಗಳಿಗೆ ಪರಾಜಯ

ಬ್ರಿಟನ್‌ನಲ್ಲಿ ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಆಳುವ ಪಕ್ಷ ಟೋರಿಗಳಿಗೆ ಭಾರಿ ಪರಾಜಯವಾಗಿದೆ. ಇದು ಟೋರಿಗಳಿಗೆ ಹಿಂದಿನ ಚುನಾವಣೆಗಳ ನಂತರ ದೊರೆತ ಭಾರಿ ಪರಾಜಯ. ಲೇಬರ್ ಪಕ್ಷ 30 ವರ್ಷಗಳಲ್ಲೇ ಅತ್ಯಧಿಕ ಎನ್ನಲಾದ ಶೇಕಡಾ 50 ಮತಗಳಿಸಿ ಭಾರಿ ಜಯ ಸಾಧಿಸಿದೆ. ಫಲಿತಾಂಶ ಲಭ್ಯವಿರುವ 315 ಕೌನ್ಸಿಲ್‌ಗಳಲ್ಲಿ 141 ಕೌನ್ಸಿಲ್ ಗಳಲ್ಲಿ ಲೇಬರ್, ಲಿಬರಲ್ ಪಕ್ಷ 42 ಹಾಗೂ ಆಳುವ ಟೋರಿ ಪಕ್ಷ ಕೇವಲ ಎಂಟು ಕೌನ್ಸಿಲ್‌ಗಳಲ್ಲಿ ಬಹುಮತ ಗಳಿಸಿದೆ. ಉಳಿದ ಕೌನ್ಸಿಲ್ ಗಳಲ್ಲಿ ಯಾರಿಗೂ ಬಹುಮತ ದೊರಕಿಲ್ಲ.

ಲೇಬರ್ ಪಕ್ಷ 32 ಹೊಸ ಕೌನ್ಸಿಲ್‌ಗಳನ್ನು ಹಾಗೂ 1400 ಹೆಚ್ಚಿನ ಸೀಟುಗಳನ್ನು ಗೆದ್ದಿದೆ. ಆಳುವ ಟೋರಿ ಪಕ್ಷ 48 ಕೌನ್ಸಿಲ್‌ಗಳನ್ನು ಹಾಗೂ ಸುಮಾರು 1700 ಸೀಟುಗಳನ್ನು ಕಳೆದುಕೊಂಡಿದೆ. ಇಡೀ ವೇಲ್ಸ್ ಪ್ರಾಂತ್ಯದಲ್ಲಿ ಟೋರಿಗಳು ಒಂದೂ ಕೌನ್ಸಿಲ್ ಗೆದ್ದಿಲ್ಲ. ಕಳೆದ ತಿಂಗಳು ಸ್ಕಾಟ್‌ಲೆಂಡ್ ನ ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲೂ ಟೋರಿ ಪಕ್ಷ ಭಾರಿ ಪರಾಭವ ಹೊಂದಿತ್ತು.

ಫ್ರೆಂಚ್ ಚುನಾವಣೆಯಲ್ಲಿ ಬಲಪಂಥೀಯ ಅಭ್ಯರ್ಥಿ ಗೆದ್ದರೂ ಮತಗಳಿಕೆಯಲ್ಲಿ ಆಗಿರುವ ಹಿನ್ನಡೆ, ಹಿಂದೆ ಜರ್ಮನ್ ಚುನಾವಣೆಯಲ್ಲಿ ಬಲಪಂಥೀಯರಿಗೆ ಆದ ಹಿನ್ನಡೆ ಹಾಗೂ ಟೋರಿ ಪರಾಜಯ ಪಶ್ಚಿಮ ಯುರೋಪಿನ ಜನತೆ ಬಲಪಂಥೀಯ ನೀತಿಗಳಿಂದ ಬೇಸತ್ತಿದ್ದಾರೆ, ಬದಲಿಯನ್ನು ಹುಡುಕುತ್ತಿದ್ದಾರೆ ಎನ್ನುವುದನ್ನು ತೋರಿಸುತ್ತದೆ.

ಇರಾನ್ ಮೇಲೆ ಅಮೇರಿಕಾದ ದಿಗ್ಬಂಧನ

ಅಮೇರಿಕದ ಅಧ್ಯಕ್ಷ ಕ್ಲಿಂಟನ್ ಇರಾನ್ ಮೇಲೆ ಆರ್ಥಿಕ ದಿಗ್ಬಂಧನ ಹೊರಿಸಿ, ಯುರೋಪಿಯನ್ ಒಕ್ಕೂಟ ಹಾಗೂ ಜಪಾನೀಯರು ಹಾಗೆ ಮಾಡಬೇಕೆಂದು ಒತ್ತಾಯಿಸಿದ್ದಾರೆ. ಈ ಆರ್ಥಿಕ ದಿಗ್ಬಂಧನ ಪ್ರಕಾರ ಅಮೇರಿಕನ್ ಕಂಪನಿಗಳು ಇರಾನ್‌ನಿಂದ ತೈಲ ಕೊಳ್ಳುವಂತಿಲ್ಲ, ಇತರ ದೇಶಗಳಲ್ಲಿ ಶಾಖೆಗಳಿರುವ ಅಮೇರಿಕನ್ ಕಂಪನಿಗಳಿಗೂ ಈ ಆಜ್ಞೆ ಅನ್ವಯಿಸುತ್ತದಂತೆ. ಇರಾನ್ ಅಣ್ವಸ್ತ್ರ ತಯಾರಿಸ ತೊಡಗಿದೆ ಎಂದು ಅಧ್ಯಕ್ಷ ಕ್ಲಿಂಟನರು ಈ ಕ್ರಮ ಕೈಗೊಂಡಿದ್ದಾರಂತೆ. ಆದರೆ ಈ ಏಕಪಕ್ಷೀಯ ಕ್ರಮ ಅಮೇರಿಕದ ಮೇಲೆ ತಿರುಗುಬಾಣ ಆಗುವಂತೆ ಕಂಡು ಬರುತ್ತಿದೆ. ಯುರೋಪ್ ಹಾಗೂ ಜಪಾನ್ ಇರಾನ್‌ಗೆ ಆರ್ಥಿಕ ದಿಗ್ಬಂಧನ ಹಾಕಲು ನಿರಾಕರಿಸಿದೆ. ರಶ್ಯಾ ಸಹ ಇರಾನ್ ಜತೆ ಅಣುಶಕ್ತಿ ರಿಯಾಕ್ಟರುಗಳ ತಂತ್ರಜ್ಞಾನದಲ್ಲಿ ಮಾಡಿಕೊಂಡ ಒಪ್ಪಂದದಿಂದ ಹಿಂಜರಿಯಲು ಈವರೆಗೆ ನಿರಾಕರಿಸಿದೆ. ಈ ದಿಗ್ಬಂಧನ ಆರ್ಥಿಕವಾಗಿಯೂ, ರಾಜಕೀಯವಾಗಿಯೂ ಅಮೇರಿಕಕ್ಕೆ ಹಾನಿಕಾರಕವಾಗಬಹುದು. ಆರ್ಥಿಕವಾಗಿಯೂ ಅಮೇರಿಕನ್ ಕಂಪನಿಗಳು ನಿರಾಕರಿಸುವ ವ್ಯಾಪಾರವನ್ನು ಯುರೋಪಿಯನ್ ಒಕ್ಕೂಟವೂ ಜಪಾನ್‌ಗಳು ಕಬಳಿಸಲಿವೆ. ಅಮೇರಿಕದ ಈ ಮೂರ್ಖ ಕ್ರಮದಿಂದ ಇರಾನ್ ಸರಕಾರದ ಬಗ್ಗೆ ಅಲ್ಲಿಯ ಜನರ ಬೆಂಬಲ ಇನ್ನಷ್ಟು ಜಾಸ್ತಿಯಾಗುವ ಸಂಭವ ಹೆಚ್ಚು. ಇರಾನ್‌ನ ಪ್ರಜಾಸತ್ತಾತ್ಮಕ ವಿರೋಧ ಪಕ್ಷಗಳನ್ನು ಇನ್ನಷ್ಟು ದುರ್ಬಲಗೊಳಿಸಿದೆ.

ರ್‍ವಾಂಡಾ ನಿರಾಶ್ರಿತರ ಕ್ಯಾಂಪ್‌ನಲ್ಲಿ ಎಂಟು ಸಾವಿರ ಜನರ ನರಮೇಧ

ರ್‍ವಾಂಡಾದ ನೈಋತ್ಯದಲ್ಲಿರುವ ಕಿಬಿಹೊ ನಿರಾಶ್ರಿತರ ಕ್ಯಾಂಪ್ ನಲ್ಲಿ ಸೈನ್ಯದ ಗುಂಡಿಗೆ ಬಲಿಯಾಗಿ, ಅದರಿಂದ ಉಂಟಾದ ಗಾಬರಿ, ಭಯ ಮಿಶ್ರಿತ ವಾತಾವರಣದಲ್ಲಿ ಜನ ಚೆಲ್ಲಾಪಿಲ್ಲಿ ಓಡಾಡಲಾರಂಭಿಸಿದ್ದರಿಂದ ಎಂಟು ಸಾವಿರಕ್ಕೂ ಹೆಚ್ಚು ಜನ ಬಲಿಯಾದ ಭೀಕರ ನರಮೇಧ ವರದಿಯಾಗಿದೆ. ಕಳೆದ ಕೆಲವು ವರ್ಷಗಳಲ್ಲಿ 'ಟುಟ್ಸಿ' ಹಾಗೂ 'ಹೂತು' ಎಂಬ ಎರಡು ಆದಿವಾಸಿ ಗುಂಪುಗಳ ನಡುವೆ ಆಂತರಿಕ ಯುದ್ಧ ಹಿಂಸಾಚಾರ ಕಂಡಿರುವ ರ್‍ವಾಂಡಾ -ಬುರುಂಡಿಯಿಂದ ಇದು ಇತ್ತೀಚೆಗೆ ವರದಿಯಾಗಿರುವ ಅತ್ಯಂತ ಭೀಕರ ನರಮೇಧ. ಈ ನಿರಾಶ್ರಿತರ ಕ್ಯಾಂಪ್ ನಲ್ಲಿ ಸುಮಾರು 80 ಸಾವಿರದಷ್ಟು 'ಹೂತು' ನಿರಾಶ್ರಿತರು ವಾಸಿಸಿದ್ದರು. ಈ ನಿರಾಶ್ರಿತರ ಕ್ಯಾಂಪನ್ನು ಕಾಯುತ್ತಿದ್ದ ಟುಟ್ಸಿ ಆದಿವಾಸಿ ಗುಂಪಿನ ರ್‍ವಾಂಡಾ ಪೇಟ್ರಿಯಾಟಿಕ್ ಫ್ರಂಟ್ ನಡೆಸುತ್ತಿರುವ ಸರ್ಕಾರದ ಸೈನ್ಯ ಗೋಲಿಬಾರ್ ಮಾಡಿತು. ಕೆಲವು ನಿರಾಶ್ರಿತರು ಮಳೆಯಿಂದ ಆಶ್ರಯ ಪಡೆಯಲು ಕ್ಯಾಂಪ್‌ನಿಂದ ಹೊರಗೆ ದೊಡ್ಡ ಗುಂಪಿನಲ್ಲಿ ಹೊರಹೋಗಲಾರಂಭಿಸಿದ್ದನ್ನು ಸೈನ್ಯ ತಮ್ಮ ಮೇಲೆ ಆಕ್ರಮಣ ಎಂದು ತಿಳಿದು, ಗೋಲಿಬಾರ್ ಆರಂಭಿಸಿದರು ಎಂದು ಒಂದು ಮೂಲ ಹೇಳಿದರೆ, 'ಹೂತು' ನಿರಾಶ್ರಿತರ ನಡುವೆ ಆಂತರಿಕ-ಸಂಘರ್ಷದಲ್ಲಿ ಗುಂಡು ಹಾರಿಸಿದ್ದರಿಂದ ಗಾಬರಿಯಾಗಿ ಸೈನ್ಯ ಗೋಲೀಬಾರು ಆರಂಭಿಸಿತು ಎಂದು ಇನ್ನೊಂದು ಮೂಲ ಹೇಳಿದೆ. ಯಾವುದೇ ಪ್ರಚೋದನೆ ಇಲ್ಲದೆ ಸೈನ್ಯ ಗೋಳಿಬಾರು ಆರಂಭಿಸಿತು ಎಂದು ಇನ್ನೂ ಕೆಲವು ವರದಿಗಳು ಹೇಳಿವೆ. ರ್‍ವಾಂಡಾದ ಸರ್ಕಾರ ಕೆಲವು ಹೂತು ಗೆರಿಲ್ಲಾಗಳು ನಿರಾಶ್ರಿತರ ಕ್ಯಾಂಪ್ ನ ಒಳಗಿಂದ ಸೈನ್ಯದ ಮೇಲೆ ಗುಂಡು ಹಾರಿಸಿದಾಗ ಸೈನ್ಯ ಆತ್ಮರಕ್ಷಣೆಯಲ್ಲಿ ಗೋಲಿಬಾರು ಮಾಡಬೇಕಾಯಿತು, ಗೋಲಿಬಾರಿನಲ್ಲಿ ಸತ್ತವರ ಸಂಖ್ಯೆ ಕೇವಲ 300 ಎಂದು ಸಮರ್ಥಿಸಿಕೊಂಡಿದೆ. ಆದರೆ ವಿಶ್ವಸಂಸ್ಥೆ ಹಾಗೂ ಇತರ ಸ್ವತಂತ್ರ ಮೂಲಗಳಿಂದ ನರಮೇಧದ ಬಗೆಗಿನ ವರದಿ ಪುಷ್ಟಿಯಾಗಿದೆ.

1962ರಲ್ಲಿ ಬೆಲ್ಜಿಯಂ ನಿಂದ ಸ್ವಾತಂತ್ರ್ಯ ಪಡೆದ ರ್‍ವಾಂಡಾ ಹಾಗೂ ಬುರುಂಡಿ ದೇಶಗಳಲ್ಲಿ ಈ ಎರಡು ಆದಿವಾಸಿ ಗುಂಪು (ಟುಟ್ಸಿ ಹಾಗೂ ಹೂತು)ಗಳ ನಡುವೆ ದ್ವೇಷ, ಹೊಡೆದಾಟ, ಹಿಂಸಾಚಾರ ನಡೆದುಕೊಂಡೇ ಬಂದಿದೆ. ಇದರ ಮೂಲ ಬೆಲ್ಜಿಯಂ ವಸಾಹತುಶಾಹಿಗ ಈ ಆದಿವಾಸಿಗಳ ಗುಂಪುಗಳನ್ನು ಒಡೆದು ಆಳಲು ಹುಟ್ಟು ಹಾಕಿದ ವೈಷಮ್ಯ ಹಾಗೂ ಪರಸ್ಪರ ಕಾದಾಟಕ್ಕೆ ಕೊಟ್ಟ ಕುಮ್ಮಕ್ಕು ಎಂದು ಬೇರೆ ಹೇಳಬೇಕಾಗಿಲ್ಲ. ರ್‍ವಾಂಡಾದಲ್ಲಿ ಹೂತು ಆದಿವಾಸಿ ಗುಂಪು ಬಹುಸಂಖ್ಯಾತರು. ಕಳೆದ ವರ್ಷದಲ್ಲಿ ನಡೆದ ಆಂತರಿಕ ಯುದ್ಧದಲ್ಲಿ ಅಲ್ಪಸಂಖ್ಯಾತ ಜನಾಂಗದ ೫ ಲಕ್ಷಕ್ಕೂ ಹೆಚ್ಚು ಜನ ಸತ್ತಿದ್ದರು. ಈ ಹಿನ್ನೆಲೆಯಲ್ಲಿ ಟುಟ್ಸಿ ಆದಿವಾಸಿ ಗುಂಪಿನ ರ್‍ವಾಂಡಾ ಪೇಟ್ರಿಯಾಟಿಕ್ ಫ್ರಂಟ್ (R.P.F) ಹಾಗೂ ಆಗಿನ 'ಹೂತು'-ನಿಯಂತ್ರಿತ ಸರ್ಕಾರದ ನಡುವೆ ನಡೆದ ಹೋರಾಟದಲ್ಲಿ ಆರ್.ಪಿ.ಎಫ್. ವಿಜಯಿಯಾಗಿತ್ತು. ಆರ್.ಪಿ.ಎಫ್. ಅಧಿಕಾರಕ್ಕೆ ಬಂದ ಕೂಡಲೇ 'ಹೂತು' ಆದಿವಾಸಿ ಮೂಲದ ಜನರ ಮೇಲೆ ಪ್ರತೀಕಾರ ಕೈಗೊಳ್ಳುತ್ತಾರೆಂಬ ಭಯದಿಂದ, ಬಹುಸಂಖ್ಯಾತ 'ಹೂತು' ದೊಡ್ಡ ಸಂಖ್ಯೆಯಲ್ಲಿ ದೇಶದಿಂದ ಓಡಿ ಹೋಗತೊಡಗಿದರು. ಇದು ಭಾರಿ ಸಮಸ್ಯೆಯಾದಾಗ ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ದೇಶದ ನೈಋತ್ಯದಲ್ಲಿ ಒಂಭತ್ತು ಸುರಕ್ಷಿತ ಕ್ಯಾಂಪ್ ಗಳಲ್ಲಿ ಸುಮಾರು ಎರಡುವರೆ ಲಕ್ಷದಷ್ಟು ಹೂತು ಜನ ವಾಸಿಸುತ್ತಿದ್ದಾರೆ. ಆರ್.ಪಿ.ಎಫ್. ಸರ್ಕಾರ ಅಂತರ್‍ರಾಷ್ಟ್ರೀಯ ಒತ್ತಡದಿಂದ ಹಾಗೂ ಆಳುವ ಪಕ್ಷ ಆದ ಮೇಲೆ ದೇಶವನ್ನು ಸಾಮಾನ್ಯಗೊಳಿಸಲು ಬೇಕಾದ ಅಂತರ್‍ರಾಷ್ಟ್ರೀಯ ನೆರವು ಪಡೆಯಲು ಪೂರ್ವಭಾವಿಯಾಗಿ ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿತ್ತು. ಎರಡು ಆದಿವಾಸಿ ಜನಾಂಗಗಳ ನಡುವೆ ಸಾಮರಸ್ಯ ತರಲು ಪ್ರಯತ್ನಿಸುತ್ತಿತ್ತು. ಕನಿಷ್ಠ ಹಾಗೆಂದು ಹೇಳಿಕೊಳ್ಳುತ್ತಿತ್ತು. ಇದರ ಭಾಗವಾಗಿ ನಿರಾಶ್ರಿತರ ಕ್ಯಾಂಪ್ ಖಾಲಿ ಮಾಡಿಸಿ ಹೂತು ಜನ ತಂತಮ್ಮ ಮನೆಗಳಿಗೆ ವಾಪಸಾಗಬೇಕೆಂದು ಅದು ಪ್ರಯತ್ನಿಸುತ್ತಿತ್ತು. ವಿಶ್ವಸಂಸ್ಥೆಯೂ ಇದಕ್ಕಾಗಿ ಪ್ರಯತ್ನಿಸುತ್ತಿತ್ತು. ಇದಕ್ಕಾಗಿ ಹೂತು ಜನರಲ್ಲಿ ಅವರು ಸುರಕ್ಷಿತರಾಗಿರುತ್ತಾರೆ ಎಂಬ ಭರವಸೆ ಮುಖ್ಯ. ಆದರೆ ಈ ನಡುವೆ ಆರ್.ಪಿ.ಎಫ್.ನಲ್ಲಿರುವ ಉಗ್ರಗಾಮಿಗಳು ತಾಳ್ಮೆಗೆಟ್ಟು ಇದಕ್ಕೆ ಮಿಲಿಟರಿ ಪರಿಹಾರಕ್ಕೆ ಪ್ರಯತ್ನಿಸಿದ್ದು ಈ ನರಮೇಧಕ್ಕೆ ಕಾರಣವಾಗಿರಬಹುದು. ಹಲವು ತಿಂಗಳುಗಳಿಂದ ಈ ನಿರಾಶ್ರಿತರ ಕ್ಯಾಂಪ್ ಗಳನ್ನು ಆರ್.ಪಿ.ಎಫ್. ಸೈನ್ಯ ಸುತ್ತುವರಿದಿತ್ತು. ಕೆಲವು ಹೂತು ಗೆರಿಲ್ಲಾಗಳು ಈ ಕ್ಯಾಂಪ್‌ನಲ್ಲಿ ಠಿಕಾಣಿ ಹೂಡಿ, ಸರ್ಕಾರದ ವಿರುದ್ಧ ಚಟುವಟಿಕೆಗಳಿಗೆ ಅದನ್ನು ನೆಲೆ ಮಾಡಿಕೊಂಡಿದ್ದಾರೆಂಬ ಗುಮಾನಿ ಈ ತಾಳ್ಮೆಗೆಡುವುದಕ್ಕೆ ಕಾರಣವಾಗಿರಬಹುದು.

ದುಡಿಯುವ ಜನರ ಹೀನ, ಕಡುವೈರಿ ಫ್ಯಾಸಿಸಂ

ಪುಟ 5ರಿಂದ

ಅವನ ಸೇನೆಗೆ ಮಾಸ್ಕೋದ ವರೆಗೆ ಮಾತ್ರ ಹೋಗಲು ಸಾಧ್ಯವಾಯಿತು. ಅದಕ್ಕಿಂತ ಮುಂದೆ ಮುನ್ನುಗ್ಗಲು ಆಗಲಿಲ್ಲ. ಸ್ಟಾಲಿನ್ ಗ್ರಾಡ್ ಇಡೀ ಯುದ್ಧದ ಗತಿ ಹಾಗೂ ಫಲಿತಾಂಶವನ್ನು ಬದಲಾಯಿಸಿತು. ಸ್ಟಾಲಿನ್‌ಗ್ರಾಡ್‌ನಲ್ಲಿ ಹಿಟ್ಲರ್ ಪಡೆಗಳು ಅತ್ಯಂತ ತೀಕ್ಷ್ಣ ಪ್ರತಿರೋಧವನ್ನು ಎದುರಿಸಬೇಕಾಯಿತು. ಸೋವಿಯತ್ ಒಕ್ಕೂಟದ ಜನರು, ತಮ್ಮ ಮಾತೃಭೂಮಿ ಮಾತ್ರವಲ್ಲದೆ ಇಡೀ ಮಾನವಕುಲವನ್ನು ಫ್ಯಾಸಿಸಂನ ಅಪಾಯದದಿಂದ ಉಳಿಸಲು ಜೀವನ್ಮರಣ ಹೋರಾಟ ನಡೆಸಿದರು. ಆದ್ದರಿಂದಲೇ ಅವರು ಪ್ರತಿಯೊಂದು ಬೀದಿಗಾಗಿ, ಪ್ರತಿಯೊಂದು ಕಟ್ಟಡಕ್ಕಾಗಿ ಹಾಗೂ ಪ್ರತಿ ಇಂಚು ಜಮೀನಿಗಾಗಿ ಕಾದಾಡಿದರು.

ಸಮಾಜವಾದ ನೀಡಿದ ಸ್ಫೂರ್ತಿ

ಕೆಂಪು ಸೇನೆಯ ಸೈನಿಕರು ಪ್ರದರ್ಶಿಸಿದ ಈ ಅಪೂರ್ವ ಧೈರ್ಯ ಹಾಗೂ ಸಾಹಸಕ್ಕೆ ಏನಾದರೂ ಸ್ಫೂರ್ತಿ ಇದ್ದಿರಲೇಬೇಕು. ಈ ಸ್ಫೂರ್ತಿಯೊಂದಿಗೆ ಒಂದು ಗುರಿಗೆ ಬದ್ಧತೆಯೂ ಸೇರಿರಬೇಕು- ಸಮಾಜವಾದವೇ ಆ ಗುರಿ. ಸಮವಸ್ತ್ರ ಧರಿಸಿದವರಿಗೂ-ಧರಿಸದವರಿಗೂ ತ್ಯಾಗ ಮಾಡಿ ವಿಜಯಕ್ಕಾಗಿ ಕಾದಾಡುವಂತೆ ಸ್ಫೂರ್ತಿ ತುಂಬಿದ್ದು ಸಮಾಜವಾದ. ಸೋವಿಯತ್ ಜನರು, ಕೆಂಪು ಸೇನೆಗೆ ನಾಯಕತ್ವ ನೀಡುವಲ್ಲಿ ಸ್ಟಾಲಿನ್ ವಹಿಸಿದ ಪಾತ್ರ ವಿವಾದಾತೀತವಾಗಿದೆ.

1945 ಮೇ 9 ರಂದು ಫ್ಯಾಸಿಸಂ ಮೇಲೆ ವಿಜಯವನ್ನು ಸಾಧಿಸಲಾಯಿತು. ಹಿಟ್ಲರ ಸೇನೆಯನ್ನು ಮಾಸ್ಕೋದಿಂದ ಹಿಮ್ಮೆಟ್ಟಿಸಿದ ಕೆಂಪುಸೇನೆ ಬರ್ಲಿನ್ ವರೆಗೂ ಜರ್ಮನಿ ಸೈನಿಕರನ್ನು ಬೆನ್ನಟ್ಟಿಸಿಕೊಂಡು ಹೋಗಿ ನಾಜಿ ಯುದ್ಧ ಯಂತ್ರವನ್ನು ಧ್ವಂಸಗೊಳಿಸಿತು. ನಾಜಿ ಸೇನೆ ವಶಪಡಿಸಿಕೊಂಡಿದ್ದ ಎಲ್ಲಾ ಪ್ರದೇಶಗಳನ್ನು ಬರ್ಲಿನ್‌ಗೆ ಸಾಗುವ ಮಾರ್ಗದಲ್ಲಿ ಕೆಂಪುಸೇನೆ ವಿಮೋಚನೆಗೊಳಿಸಿತು.

ಫ್ಯಾಸಿಸಂ ಮೇಲಿನ ವಿಜಯ ಮಹತ್ವದ್ದಾಗಿತ್ತು, ಯಾಕೆಂದರೆ ಅದು ರಾಷ್ಟ್ರೀಯ ವಿಮೋಚನಾ ಚಳುವಳಿಗಳಿಗೆ ದೊಡ್ಡ ಚಾಲನೆ ಕೊಟ್ಟಿತು. ಪೂರ್ವ ಯುರೋಪಿನ ಸಮಾಜವಾದಿ ದೇಶಗಳ ಸ್ಥಾಪನೆಗೂ ಚಾಲನೆ ನೀಡಿತು.

ಫ್ಯಾಸಿಸಂ ಸೋತರೆ ವಿಮೋಚನಾ ಚಳುವಳಿ ಹಾಗೂ ಜಗತ್ತಿನೆಲ್ಲೆಡೆಯ ದುಡಿಯುವ ವರ್ಗದ ಆಂದೋಲನದ ಮೇಲೆ ಭಾರೀ ಪರಿಣಾಮಬೀರುತ್ತದೆ ಎನ್ನುವುದನ್ನು ಕಮ್ಯೂನಿಸ್ಟ್ ಪಕ್ಷಗಳು ಮೊದಲೇ ಅರಿತಿದ್ದವು. ಯುದ್ಧೋತ್ತರ ಅವಧಿಯಲ್ಲಿನ ವಿದ್ಯಮಾನಗಳು ಇದಕ್ಕೆ ಸಾಕ್ಷಿಯಾಗಿವೆ. ಯುದ್ಧದಲ್ಲಿನ ಯಶಸ್ಸು ಚೀನಾ, ವಿಯೆಟ್ನಾಂ ಮತ್ತು ಕೊರಿಯಾ ಕ್ರಾಂತಿಗಳ ಯಶಸ್ಸಿಗೆ ಕೊಡುಗೆ ನೀಡಿದವು.

ಜಗತ್ತಿನ ಮೇಲೆ ಸ್ವಾಮ್ಯ ಸ್ಥಾಪಿಸುವ ಸಾಮ್ರಾಜ್ಯಶಾಹಿಗಳ ಯತ್ನಗಳಿಗೆ ತಡೆಯಾದ ಶಕ್ತಿಯಾಗಿ ಸಮಾಜವಾದಿ ವ್ಯವಸ್ಥೆ ಹೊರ ಹೊರಮ್ಮುವುದರೊಂದಿಗೆ ಈ ವಿದ್ಯಮಾನಗಳು ಜಗತ್ತಿನ ವರ್ಗ ಬಲಾಬಲವನ್ನು ಕಾರ್ಮಿಕ ವರ್ಗದ ಪರವಾಗಿ ಸಮತೋಲವನ್ನು ಗಣನೀಯವಾಗಿ ಪರಿವರ್ತಿಸಿತು.

ಸಣ್ಣ ಸಣ್ಣ ದೇಶಗಳಲ್ಲೂ ಕಮ್ಯೂನಿಸ್ಟ್ ಚಳುವಳಿ ಬೇಗನೆ ಬೆಳೆಯಿತು. ನೂರಕ್ಕೂ ಹೆಚ್ಚು ದೇಶಗಳಲ್ಲಿ ಸಂಘಟಿತ ಕಮ್ಯೂನಿಸ್ಟ ಆಂದೋಲನ ವಿಸ್ತರಿಸಿತು.

ಈಗಿನ ಸಂದರ್ಭದಲ್ಲಿ

50 ವರ್ಷಗಳ ಹಿಂದೆಯೇ ಫ್ಯಾಸಿಸಂಗೆ ನೆಲಕಚ್ಚುವಂಥ ಸೋಲುಂಟಾದರೂ ನಾವು ನಮ್ಮ ಎಚ್ಚರಿಕೆಯನ್ನು ಬಿಟ್ಟು ಕೊಡಬಾರದು, ಅನೇಕ ದೇಶಗಳಲ್ಲಿ ಫ್ಯಾಸಿಸಂ ಮತ್ತೆ ತಲೆಯೆತ್ತುತ್ತಿದೆ. ನವ ಫ್ಯಾಸಿಸ್ಟ್ ಪಕ್ಷಗಳು ಮತ್ತು ಫ್ಯಾಸಿಸ್ಟ್ ಪ್ರವೃತ್ತಿಯುಳ್ಳ ಪಕ್ಷಗಳು ರಾಜಕೀಯ ರಂಗವನ್ನು ಪ್ರವೇಶಿಸುತ್ತಿವೆ. ಸೋವಿಯತ್ ಒಕ್ಕೂಟ ಛಿದ್ರವಾಗಿ, ಸಮಾಜವಾದಕ್ಕೆ ಹಿನ್ನಡೆಯುಂಟಾದ ನಂತರ ಈ ವಿದ್ಯಮಾನ ವಿಶೇಷವಾಗಿ ಕಂಡುಬಂದಿದೆ. ಬಂಡವಾಳಶಾಹಿ ಬಿಕ್ಕಟ್ಟು ಆಳವಾಗುತ್ತಿರುವುದು ಹಾಗೂ ವೈರುಧ್ಯಗಳು ತೀವ್ರಗೊಳ್ಳುತ್ತಿರುವ ಹಿನ್ನೆಲೆಯಲ್ಲಿಯೂ ಇದನ್ನು ಗಮನಿಸಬೇಕು. ಅನೇಕ ದೇಶಗಳಲ್ಲಿ ಆಳುವ ವರ್ಗಗಳು ಅಂಧದೇಶಾಭಿಮಾನಿ ಭಾವನೆಗಳನ್ನು ಕೆರಳಿಸುತ್ತಿವೆ. ಜರ್ಮನಿ, ಜಪಾನ್, ಇಟಲಿ ಮತ್ತು ಯುರೋಪಿನ ಇತರ ಅನೇಕ ದೇಶಗಳಲ್ಲಿ ನವ ಫ್ಯಾಸಿಸ್ಟ್ ಪಕ್ಷಗಳು ಮತ್ತು ಗುಂಪುಗಳು ಮತ್ತೆ ತಲೆಯೆತ್ತಿವೆ.

ಮಧ್ಯಪ್ರಾರ್ವ ಭಾರತ ಮತ್ತಿತರ ಕಡೆ ಧಾರ್ಮಿಕ ಮೂಲಭೂತವಾದಿ ಶಕ್ತಿಗಳು ಬಲಗೊಳ್ಳುತ್ತಿವೆ. ಈ ಶಕ್ತಿಗಳ ಅಪಾಯವನ್ನು ಕಡೆಗಣಿಸಿದರೆ ನಮ್ಮ ಸರ್ವನಾಶವನ್ನು ನಾವೇ ಆಹ್ವಾನಿಸಿದಂತೆಯೇ ಸರಿ.

"ಫ್ಯಾಸಿಸಂ -ದುಡಿಯುವ ಜನರ ಮೇಲೆ ಬಂಡವಾಳದ ಅತ್ಯಂತ ದುಷ್ಟ ಆಕ್ರಮಣವಾಗಿದೆ.

ಫ್ಯಾಸಿಸಂ -ಲಂಗುಲಗಾಮಿಲ್ಲದ ಅಂಧ ದೇಶಾಭಿಮಾನವಾಗಿದೆ ಹಾಗೂ ಕೊಳ್ಳೆಹೊಡೆಯುವ ಯುದ್ಧವಾಗಿದೆ.

"ಫ್ಯಾಸಿಸಂ -ಹೀನ ಪ್ರತಿಗಾಮಿ ಹಾಗೂ ಕ್ರಾಂತಿವಿರೋಧಿಯಾಗಿದೆ.

ಫ್ಯಾಸಿಸಂ -ಕಾರ್ಮಿಕ ವರ್ಗದ ಹಾಗೂ ಎಲ್ಲಾ ದುಡಿಯುವ ಜನರ ಅತ್ಯಂತ ಕಡುವೈರಿಯಾಗಿದೆ." ಎಂದಿದ್ದರು ಕಮ್ಯುನಿಸ್ಟ್ ಅಂತರ್‍ರಾಷ್ಟ್ರೀಯದ 7ನೇ ಮಹಾಧಿವೇಶನದಲ್ಲಿ ದಿಮಿತ್ರೋವ್.

ಫ್ಯಾಸಿಸಂ ಮೇಲಿನ ವಿಜಯದ 50ನೇ ವಾರ್ಷಿಕೋತ್ಸವವನ್ನು ಆಚರಿಸುವ ಈ ಸಂದರ್ಭದಲ್ಲಿ, ಮಾನವ ನಾಗರಿಕತೆಯ ಸಾಧನೆಯನ್ನು ನಾಶ ಮಾಡಲು ಹೊರಟ ಇಂತಹ ಶಕ್ತಿಗಳ ವಿರುದ್ಧ ತೀಕ್ಷ್ಣ ಹೋರಾಟ ನಡೆಸಲು ನಮ್ಮಲ್ಲಿ ಶಕ್ತಿಯನ್ನು ಧಾರೆಯೆರೆಯಲು ನಾವು ಪಣತೊಡಬೇಕು.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ರಾಜಕೀಯ ವ್ಯವಸ್ಥೆಯ ಸ್ವರೂಪ ಬದಲಿಸುವ ಸಲಹೆ, ಸೂಚನೆ ಲೋಕಸಭಾಧ್ಯಕ್ಷರು ಏನು ಬಯಸುತ್ತಾರೆ?

ಸಿಪಿಐ(ಎಂ) ಪೊಲಿಟ್ ಬ್ಯೂರೋ ಪ್ರಶ್ನೆ

ತುರ್ತಾಗಿ ಆಗಬೇಕಾಗಿರುವ ಚುನಾವಣಾ ಸುಧಾರಣೆಗಳನ್ನು ಕೈಗೊಂಡು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಬಲಗೊಳಿಸಬೇಕು ಎಂಬುದು ಸಿಪಿಐ(ಎಂ) ನಿಲುವು. ಈ ಅಜೆಂಡಾವನ್ನು ಬಿಟ್ಟು ಲೋಕಸಭಾ ಅಧ್ಯಕ್ಷರು ದೇಶದ ರಾಜಕೀಯ ವ್ಯವಸ್ಥೆಯ ಸ್ವರೂಪದಲ್ಲಿ ಮೂಲಭೂತ ಬದಲಾವಣೆ ತರುವ ಸಲಹೆ-ಸೂಚನೆಗಳನ್ನು ಇಡಬಾರದು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಮೇ 4 ರಂದು ನೀಡಿದ ಹೇಳಿಕೆಯೊಂದರಲ್ಲಿ ಅಭಿಪ್ರಾಯಪಟ್ಟಿದೆ.

ಸಂವಿಧಾನ ರಾಜಕೀಯ ಪಕ್ಷಗಳನ್ನು ಆಧರಿಸಿದ ಒಂದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒದಗಿಸಿದೆ. ಈ ವ್ಯವಸ್ಥೆಯಲ್ಲಿ ಸರಳ ಬಹುಮತ ಪಡೆದಿರುವ ಒಂದು ಪಕ್ಷ ಅಥವಾ ಪಕ್ಷಗಳ ಕೂಟ ಸರಕಾರ ರಚಿಸಬಹುದು. ಈಗ ಚರ್ಚೆಗೆಂದು ಇಟ್ಟಿರುವ ಪ್ರಸ್ತಾವಗಳನ್ನು ಈ ವ್ಯವಸ್ಥೆಯನ್ನು ಬದಲಿಸಿ ಲೋಕಸಭೆಯಲ್ಲಿ ಎರಡನೇ ಮೂರರಷ್ಟು ಬಹುಮತವಿರುವ "ಸಮಿಶ್ರ ಸರಕಾರ', ಅಥವಾ ಎಲ್ಲಾ ಪಕ್ಷಗಳ ರಾಷ್ಟ್ರೀಯ ಸರಕಾರ ಅಥವಾ ಒಂದು ಸೀಮಿತ ಅವಧಿಗೆ ಸಂಸತ್ತಿನ ಹೊರಗಿನವರು ಇರುವ ಸರಕಾರ ಎಂಬಂತಹ ಸೂಚನೆಗಳೂ ಬಂದಿವೆ. ಈ ಎಲ್ಲಾ ಪ್ರಸ್ತಾವಗಳು ರಾಜಕೀಯ ಪಕ್ಷಗಳ ವ್ಯವಸ್ಥೆಯನ್ನು ಬುಡಮೇಲು ಮಾಡುವಂತಹವು ಎಂದು ಪಿ.ಬಿ. ಹೇಳಿದೆ.

ಈ ಪ್ರಸ್ತಾವಗಳು ರಾಜಕೀಯ ಪಕ್ಷಗಳು ಸೈದ್ಧಾಂತಿಕ, ವರ್ಗ ಹಾಗೂ ರಾಜಕೀಯ ಭಿನ್ನತೆಗಳಿವೆ ಎಂಬ ವಾಸ್ತವತೆಯನ್ನು ಈ ನಿರ್ಲಕ್ಷಿಸುತ್ತವೆ. ಆಳುವ ವರ್ಗಗಳಿಗೆ "ಸ್ಥಿರತೆ"ಯನ್ನು ಕೊಡಮಾಡಿಸುವುದೇ ಈ ಪ್ರಸ್ತಾವಗಳ ಗುರಿ. ಜನಗಳ ಆದೇಶವಿಲ್ಲದಾಗಲೂ ಕೋಮುವಾದಿ ಪಕ್ಷಗಳು ಕೂಡಾ ಸರಕಾರದ ಭಾಗವಾಗಲು ಸಾಧ್ಯವಾಗುವ ಒಂದು ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವ ಪ್ರಯತ್ನ ಇದು ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಬಿಜೆಪಿ ಮುಖಂಡತ್ವ ಕೂಡಾ ಅಧ್ಯಕ್ಷೀಯ ಮಾದರಿಯ ಬಗ್ಗೆ ಮಾತನಾಡುತ್ತಿರುವುದು, ಸಂವಿಧಾನದಲ್ಲಿ ಮೂಲಭೂತ ಬದಲಾವಣೆಗಳನ್ನು ಪ್ರತಿಪಾದಿಸುತ್ತಿರುವುದು ಆಕಸ್ಮಿಕವೇನಲ್ಲ ಎಂದು ಹೇಳಿದೆ.

ಸಂವಿಧಾನಿಕ ಸ್ಥಾನಮಾನ ಪಡೆದಿರುವುದು (ಲೋಕಸಭಾ ಅಧ್ಯಕ್ಷರಂತವರು) ಅದರ ಬದಲು ಉದ್ದೇಶ ಏನೆಂದು ಸ್ಪಷ್ಟವಿಲ್ಲದ ಬದಲಾವಣೆಗಳನ್ನು ಆರಂಭಿಸುವ ಬದಲು ಈಗಿರುವ ಸಂಸದೀಯ ಪ್ರಜಾಪ್ರಭುತ್ವವನ್ನು ಬಲಗೊಳಿಸುವುದೇ ಒಳ್ಳೆಯದು ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಭಿಪ್ರಾಯ ಪಟ್ಟಿದೆ.

ಕೊನೆಗೂ ಬೀಡಿ ಕಾರ್ಮಿಕರ ಕೂಲಿಯ ಕರಡು ಹೊರಬಂತು!

ಪುಟ ೧ ರಿಂದ...

ಮಂತ್ರಿಗಳಿಗೆ ಸಿಐಟಿಯು ರಾಜ್ಯ ಮುಖಂಡರು ಒಂದು ಮನವಿ ಸಲ್ಲಿಸಿದರು. ಮುಖ್ಯಮಂತ್ರಿಗಳು ನಗರದಲ್ಲಿ ಇರಲಿಲ್ಲವಾದ್ದರಿಂದ ಅವರು ಬಂದ ಮೇಲೆ ಮುಖಂಡರಿಗೆ ಸಂದರ್ಶನ ನೀಡುವರೆಂಬ ಆಶ್ವಾಸನೆ ನೀಡಲಾಗಿದೆ ಎಂದು ಸಿಐಟಿಯು ಪತ್ರಿಕಾ ಹೇಳಿಕೆ ತಿಳಿಸಿದೆ.

ಮನವಿಯಲ್ಲಿ ಬೀಡಿ ಕಾರ್ಮಿಕರು ಹೋರಾಟಕ್ಕಿಳಿಯಬೇಕಾದ ಹಿನ್ನೆಲೆಯನ್ನು ಸ್ಥೂಲವಾಗಿ ನೀಡುತ್ತಾ ಕಳೆದ ವಾರ "ಲೇಬರ್ ಸೆಕ್ರೆಟರಿ ಮತ್ತು ಲೇಬರ್ ಕಮಿಶನರ್ ಬೀಡಿ ಮಾಲಿಕರೊಡನೆ ಶಾಮೀಲಾದ ಮಟ್ಟವನ್ನು ಹಾಗೂ ಹೊಸದಾಗಿ ಬಂದ ಕಾರ್ಮಿಕ ಸಚಿವರನ್ನು ತಪ್ಪುದಾರಿಗೆ ಎಳೆದಿರುವ ರೀತಿಯನ್ನು" ಮುಖ್ಯ ಮಂತ್ರಿಗಳ ಗಮನಕ್ಕೆ ತರಲಾಗಿದೆ. ಬೀಡಿ ಕಾರ್ಮಿಕರ ಕನಿಷ್ಠ ಕೂಲಿ ರೂ. 45 ರಷ್ಟಾದರೂ ಇರಬೇಕು ಎಂದು ಮನವಿ ಒತ್ತಾಯಿಸಿದೆ. ಅಸಂಘಟಿತ ವಲಯದ ಕಾರ್ಮಿಕರಿಗೆ ಸರ್ಕಾರ ವಿಶೇಷ ಗಮನ ಕೊಡುವ ಅಗತ್ಯವಿದೆ. ಈ ದಿಸೆಯಲ್ಲಿ ಸರ್ಕಾರ ಇನ್ನೂ ಹೆಚ್ಚು ಕಾಳಜಿ ವಹಿಸಬೇಕಾಗಿದೆ ಎಂದೂ ಮನವಿ ಆಗ್ರಹಿಸಿದೆ.

ಬಂಗಾರಪ್ಪ ಸರ್ಕಾರ ಅಸಂಘಟಿತ ವಲಯದ ಕಾರ್ಮಿಕರಿಗೆ ಮಾಡಿರುವ ಇನ್ನೊಂದು ಅನ್ಯಾಯವನ್ನೂ ಸರಿಪಡಿಸಬೇಕಾಗಿದೆ. ಫ್ಯಾಕ್ಟರಿ ಆಕ್ಟ್ 87ನೇ ಸೆಕ್ಷನ್ ಪವರ್ ಲೂಂ ಇತ್ಯಾದಿ ಸಣ್ಣ ಕೈಗಾರಿಕೆಗಳಿಗೆ ಅನ್ವಯವಾಗದಂತೆ ಮಾಡಿ ಈ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಲಕ್ಷಾಂತರ ಕಾರ್ಮಿಕರ ಸುರಕ್ಷತೆ, ಆರೋಗ್ಯ ಹಾಗೂ ಪರಿಸರ ಮತ್ತು ಸಾರ್ವಜನಿಕ ಹಿತಕ್ಕೆ ಧಕ್ಕೆಯುಂಟಾಗಿದೆ. ಇದನ್ನು ತಕ್ಷಣ ಸರಿಪಡಿಸಬೇಕು ಎಂದು ಮನವಿ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಮಾಲೀಕರ ಕೈಗೊಂಬೆಯಾಗಿರುವ ಭ್ರಷ್ಟ ಲೇಬರ್ ಸೆಕ್ರೆಟರಿ ಮತ್ತು ಲೇಬರ್ ಕಮಿಷನರ್ ರವರನ್ನು ಕೂಡಲೇ ಬೇರೆ ಇಲಾಖೆಗೆ ವರ್ಗಾಯಿಸಬೇಕು ಎಂದೂ ಮನವಿ ಆಗ್ರಹಿಸಿದೆ. ಇದಲ್ಲದೆ ಅಸಂಘಟಿತ ವಲಯದ ಕಾರ್ಮಿಕರಿಗೆ ನಿಗದಿಪಡಿಸಿದ ಕನಿಷ್ಠ ಕೂಲಿ ಮತ್ತು ಇತರ ಸೌಲಭ್ಯಗಳ ಜಾರಿ ಕಡ್ಡಾಯವಾಗಿ ಆಗಬೇಕು, ಕಾರ್ಮಿಕ ಇಲಾಖೆ ಮತ್ತು ಕಾರ್ಮಿಕ ನ್ಯಾಯಾಲಯಗಳಲ್ಲಿ ಖಾಲಿ ಆಗಿರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು ಎಂದೂ ಮನವಿ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದೆ.

ಜಂಟಿ ಚಟುವಟಿಕೆಗಳು, ಹೋರಾಟಗಳಿಂದ ಮಾತ್ರ ಎಡ ಐಕ್ಯತೆ: ಬೇರೆ ಸುಲಭೋಪಾಯವಿಲ್ಲ

ಸಿಪಿಐ ರಾಷ್ಟ್ರೀಯ ಮಂಡಳಿ ಎಪ್ರಿಲ್ 21-23ರ ಸಭೆಯ ನಂತರ ನೀಡಿದ ಪತ್ರಿಕಾ ಹೇಳಿಕೆ ಕೆಲವು ಅಂಶಗಳ ಬಗ್ಗೆ ಸಿಪಿಐ(ಎಂ)ನ್ನು ಟೀಕಿಸಿದೆ. ಈ ಟೀಕೆಗೆ ಸಿಪಿಐ(ಎಂ) ಪ್ರತಿಕ್ರಿಯೆ

ಸಿಪಿಐ ಹೇಳಿಕೆ "ಇಂತಹ ಒಂದು ಕ್ಲಿಷ್ಟ ಸನ್ನಿವೇಶದಲ್ಲಿ 15ನೇ ಸಿಪಿಐ(ಎಂ) ಮಹಾಧಿವೇಶನ 'ಯಾರು ಪ್ರಧಾನ ವೈರಿ -ಕಾಂಗ್ರೆಸ್ ಅಥವಾ ಬಿಜೆಪಿ' ಎಂಬ ಬರಡು ವಿವಾದದಲ್ಲೇ ಮುಳುಗಿತ್ತು ಆದರೆ ಒಂದು ಒಪ್ಪಬಹುದಾದ ಉತ್ತರ ನೀಡಲು ವಿಫಲಗೊಂಡಿತು" ಎಂದಿದೆ.

ಮೊದಲನೆಯದಾಗಿ, 15ನೇ ಮಹಾಧಿವೇಶನದಲ್ಲಿ ಪಕ್ಷ ರಾಜಕೀಯ ಕಾರ್ಯತಂತ್ರದ ಮಾರ್ಗದ ಬಗ್ಗೆ ವಿವಾದವೂ ಇರಲಿಲ್ಲ, "ಬರಡು" ಚರ್ಚೆಯೂ ಇರಲಿಲ್ಲ, ಅಲ್ಲಿ ಗಂಭೀರ ಚರ್ಚೆಯಾದದ್ದು ಕಾಂಗ್ರೆಸ್ ಮತ್ತು ಬಿಜೆಪಿಗಳನ್ನು ಸೋಲಿಸಬೇಕೆಂಬ 14ನೇ ಮಹಾಧಿವೇಶನದ ಮಾರ್ಗದ ಅನುಷ್ಠಾನದಲ್ಲಿ ಕಳೆದ ಮೂರು ವರ್ಷಗಳ ಅನುಭವ ಭವಿಷ್ಯದ ಕಾರ್ಯತಂತ್ರವನ್ನೂ ರೂಪಿಸಲು ಈ ಅನುಷ್ಠಾನದ ಅನುಭವ ಹಾಗೂ ಪ್ರಸ್ತುತ ಸನ್ನಿವೇಶದ ಬಗ್ಗೆ ಗಮನಕೇಂದ್ರೀಕರಿಸುವುದು ಸಹಜವೇ ಆಗಿತ್ತು. ಕಾಂಗ್ರೆಸ್ (ಐ) ತ್ವರಿತವಾಗಿ ತನ್ನ ನೆಲೆ ಕಳಕೊಳ್ಳುತ್ತಿರುವುದು ಈಗಿನ ಸನ್ನಿವೇಶದ ಒಂದು ಗಮನಸೆಳೆಯುವ ಅಂಶ ಎಂಬುದು ವಾಸ್ತವ ಸಂಗತಿ. ಸಿಪಿಐ ಇದನ್ನು ಗುರುತಿಸಲಿಕ್ಕಿಲ್ಲ, ಇತ್ತೀಚಿನ ವಿಧಾನಸಭಾ ಚುನಾವಣೆಗಳ ನಂತರ ಅದು ಇನ್ನಷ್ಟು ಸ್ಪಷ್ಟವಾಗಿ ಕಾಣುತ್ತಿದೆ. ಅದೇ ವೇಳೆಗೆ ಬಿಜೆಪಿ ಒಡ್ಡಿರುವ ಕೋಮುವಾದಿ ಸವಾಲು ಇನ್ನೂ ಇದೆ. ಹಿಂದಿನ ಉತ್ತರ ಭಾರತದ ವಿಧಾನ ಸಭಾ ಚುನಾವಣೆಗಳಲ್ಲಿ ಹಿನ್ನಡೆಯಾಗಿದ್ದರೂ ಅದೀಗ ಮಹಾರಾಷ್ಟ್ರ, ಗುಜರಾತ್ ಗಳಲ್ಲಿನ ವಿಜಯಗಳಿಂದ ಮತ್ತೆ ನೆಲೆ ಪಡೆದು ಕೊಂಡಿದೆ ಎಂಬ ವಾಸ್ತವತೆಯನ್ನು ಗಮನಿಸಿ ಕೋಮುವಾದಿ ಶಕ್ತಿಗಳ ಬಲಾಬಲದಿಂದ ಸರಿಯಾದ ಅಂದಾಜು ಮಾಡುವುದು ಅಗತ್ಯ.

ಇತ್ತೀಚಿನ ಅವಧಿಯಲ್ಲಿ ಬಿಜೆಪಿಯ ನಿಜವಾದ ಸಾಮೂಹಿಕ ಬೆಂಬಲ ಎಷ್ಟು, ಅದರ ಕೋಮುವಾದಿ ವೇದಿಕೆಯ ಪ್ರಭಾವ ಎಷ್ಟು ಎಂಬ ದೃಷ್ಟಿಯಿಂದಲೂ ಬಿಜೆಪಿಯ ಬಲದ ಅಂದಾಜು ಮಾಡಬೇಕು. ಈ ಅಂಶಗಳ ಮೇಲೆ ಚರ್ಚೆ "ಎರಡು ವಿವಾದದಲ್ಲಿ ಮುಳುಗಿಹೋಯಿತು" ಎಂದಾದರೆ ರಾಜಕೀಯ ಮಾರ್ಗದ ಪ್ರಮುಖ ದಿಕ್ಕನ್ನು ನಿರ್ಧರಿಸುವುದು ಹೇಗೆ ಎಂಬ ಬಗ್ಗೆ ಸಿಪಿಐ ನಮಗೆ ಜ್ಞಾನೋದಯ ಮಾಡಿಸಬೇಕು. ನಮ್ಮ ಪಕ್ಷವಂತೂ ಕಾಂಗ್ರೆಸ್, ಬಿಜೆಪಿಗಳೆರಡರ ವಿರುದ್ಧವೂ ಹೋರಾಟ ನಡೆಸಿ ಸೋಲಿಸಬೇಕೆಂಬ ತೀರ್ಮಾನಕ್ಕೆ ಬಂತು. ಹಾಗೆ ಮಾಡುವಾಗ ಒಂದು ನಿರ್ದಿಷ್ಟ ಗಳಿಗೆಯಲ್ಲಿ ಎದ್ದು ಬರುವ ಪ್ರಶ್ನೆಗಳಿಗೆ ಅನುಗುಣವಾಗಿ ನಾವು ಇವುಗಳಲ್ಲಿ ಒಂದರ ಮೇಲೆ ಧಾಳಿ ಕೇಂದ್ರೀಕರಿಸಬೇಕಾದೀತು. ಸಿಪಿಐಗೆ ಪ್ರಧಾನ ವೈರಿ ಯಾರು ಎಂದು ನಿರ್ಧರಿಸುವುದು ಬಹಳ ಸುಲಭ ಹಾಗೂ ಸರಳವಾಗಿರಬಹುದು. ಹಿಂದೆ ಅದು ಬಲಪಂಥೀಯ ಪಕ್ಷಗಳ ಎದುರು ಹೋರಾಡಲು ಕಾಂಗ್ರೆಸ್ ನೊಂದಿಗೆ ಹಿಂದೆ ಮುಂದೆ ನೋಡದೆ ಹೀಗೆ ಕೈಜೋಡಿಸಿತು ಎಂಬುದನ್ನು ನಾವು ನೋಡಿದ್ದೇವೆ.

ಸಿಪಿಐ ಒಂದು ಗಂಭೀರ ಆಪಾದನೆ ಮಾಡಿದೆ. ಎಡಐಕ್ಯತೆಯ ಬಗ್ಗೆ ಸಿಪಿಐ(ಎಂ) ಮುಖಂಡತ್ವದ ನಕಾರಾತ್ಮಕ ನಿಲುವು 'ಕೋಮುವಾದಿ ಶಕ್ತಿಗಳಿಗೆ ನೆರವಾದ ಒಂದು ಅಂಶ ಎಂದು ಅದು ಆಪಾದಿಸಿದೆ. ಈ ನಕಾರಾತ್ಮಕ ನಿಲುವಿಗೆ ಅದು ಕೊಟ್ಟಿರುವ ಉದಾಹರಣೆಯೆಂದರೆ ಆಂಧ್ರಪ್ರದೇಶ ಮತ್ತು ಬಿಹಾರಗಳ ವಿಧಾನ ಸಭೆಗಳಲ್ಲಿ ಎಡ ಪಕ್ಷಗಳ (ಮುಖ್ಯವಾಗಿ ಸಿಪಿಐ ಹಾಗೂ ಸಿಪಿಐ(ಎಂ)ನ) ಶಾಸಕಾಂಗ ಕೂಟವನ್ನು ರಚಿಸಬೇಕೆಂಬ ಸಿಪಿಐ ಪ್ರಸ್ತಾಪವನ್ನು ಸಿಪಿಐ(ಎಂ) ಬೆಂಬಲಿಸಲಿಲ್ಲ ಎಂಬುದು. ಹೀಗೆ ಮಾಡಿದ್ದರೆ ಕಾಂಗ್ರೆಸ್(ಐ) ಹಾಗೂ ಬಿಜೆಪಿ ಪ್ರಮುಖ ಪ್ರತಿಪಕ್ಷದ ಸ್ಥಾನ ಪಡೆಯದಂತೆ ಹಾಗೂ ಅವುಗಳ ಮುಖಂಡರು ಪ್ರತಿಪಕ್ಷದ ಮುಖಂಡರ ಸ್ಥಾನ ಪಡೆಯದಂತೆ ತಡೆಯಬಹುದಾಗಿತ್ತು ಎಂದು ಸಿಪಿಐ ವಾದ.

ಸಿಪಿಐನ ಈ ವಿಚಾರವನ್ನು ಸಿಪಿಐ(ಎಂ) ಒಪ್ಪಿಲ್ಲ, ಇದು ಸಿಪಿಐಗೆ ಎಷ್ಟೇ ಇಷ್ಟವಾಗಿರದಿದ್ದರೂ ಸಿಪಿಐ(ಎಂ) ಹಾಗೆ ಮಾಡುವುದಕ್ಕೆ ಬಲವಾದ ಕಾರಣಗಳಿವೆ. ಬಿಹಾರದ ಉದಾಹರಣೆ ತೆಗೆದುಕೊಳ್ಳೋಣ.

ಸಿಪಿಐ ಹಾಗೂ ಸಿಪಿಐ(ಎಂ) ಜನತಾದಳದೊಳಗೆ ಚುನಾವಣಾ ಹೊಂದಾಣಿಕೆ ಹೊಂದಿದ್ದವು. ಇದು ಕಾಂಗ್ರೆಸ್(ಐ) ಹಾಗೂ ಬಿಜೆಪಿ ಎರಡನ್ನೂ ಸೋಲಿಸುವ ಗುರಿ ಸಾಧಿಸಲು ನೆರವಾಯಿತು. ಸಿಪಿಐ ಮುಖಂಡತ್ವ ಚುನಾವಣಾ ಫಲಿತಾಂಶಗಳು ಪ್ರಕಟವಾಗುವ ಮೊದಲೇ ಜನತಾದಳ ಮತ್ತು ಎಡಪಕ್ಷಗಳು ಒಟ್ಟಾಗಿ ಚುನಾವಣೆ ಗೆದ್ದರೆ ತಾನು ರಾಜ್ಯ ಸರಕಾರವನ್ನು ಸೇರುವ ವಿಚಾರವನ್ನು ತೇಲಿಬಿಟ್ಟಿತು. ಇದನ್ನು ತಾನು ಒಪ್ಪುವುದಿಲ್ಲ ಎಂದು ಸಿಪಿಐ(ಎಂ) ಸ್ಪಷ್ಟಪಡಿಸಿತು. ಜನತಾದಳ ಸರಕಾರದ ಸ್ಥಾಪನೆಯ ನಂತರ ಇತ್ತೀಚೆಗಷ್ಟೆ ಸರಕಾರ ಸೇರುವ ಮಾತನಾಡಿದ್ದ ಸಿಪಿಐ ಮುಖಂಡರೇ ಎಡಪಕ್ಷಗಳ ಶಾಸಕಾಂಗ ಕೂಟ ರಚಿಸಿಕೊಳ್ಳಬಯಸಿದರು. ಇದು ಸರಿಯಲ್ಲ, ಸಮಯಸಾಧಕತನವಾಗುತ್ತದೆ ಕೂಡಾ ಎಂದು ಸಿಪಿಐ(ಎಂ) ಭಾವಿಸಿತು. ಅಲ್ಲದೆ ಸಿಪಿಐ(ಎಂ) ಮತ್ತು ಸಿಪಿಐ ಸೇರಿ ಒಟ್ಟಾಗಿ ಬಿಜೆಪಿಗಿಂತ ಹೆಚ್ಚು ಸ್ಥಾನಗಳಿಸಲಿಲ್ಲ, ಆದ್ದರಿಂದ ಸಿಪಿಐ(ಎಂ-ಎಲ್)ನ್ನು ಈ ಕೂಟಕ್ಕೆ ಸೇರಿಯಬೇಕೆಂದು ಸಿಪಿಐ ಬಯಸಿತು. ಇದೊಂದು ಸಮಯಸಾಧಕ ಕೃತ್ಯವಾಗುತ್ತಿತ್ತು, ಏಕೆಂದರೆ ಲಲ್ಲೂ ಪ್ರಸಾದ್ ರವರನ್ನು ಸೋಲಿಸಬೇಕೆಂಬ ಪ್ರಮುಖ ಘೋಷಣೆಯ ಮೇಲೆ ಸಿಪಿಐ(ಎಂ-ಎಲ್) ಚುನಾವಣೆಗಿಳಿದಿತ್ತು, ಅದಕ್ಕಾಗಿ ಅದು ಸಮತಾ ಪಾರ್ಟಿಯೊಂದಿಗೂ ಕೈಜೋಡಿಸಿತ್ತು. ಇಂತಹ ದಾರಿ ಬಿಜೆಪಿ, ಕಾಂಗ್ರೆಸ್ ನಂತಹ ಪಕ್ಷಗಳಿಗೆ ನೆರವಾಗುತ್ತಿತ್ತು. ಆದರೂ ಸಿಪಿಐ ಮುಖಂಡತ್ವ ಪ್ರಮುಖ ಪ್ರತಿಪಕ್ಷದ ಸ್ಥಾನ ಪಡೆಯಲು; ಚುನಾವಣೆಯವರೆಗೆ ಒಂದು ದಾರಿ ಚುನಾವಣೆಯ ನಂತರ ಇನ್ನೊಂದು ದಾರಿ ಹಿಡಿಯಲು ಹಿಂದೆ-ಮುಂದೆ ನೋಡುತ್ತಿಲ್ಲ.

ಚುನಾವಣೆಯ ಮೊದಲು ಸಿಪಿಐ ಜನತಾದಳದೊಂದಿಗೆ ಒಂದು ಜಂಟಿ ಕನಿಷ್ಠ ಕಾರ್ಯಕ್ರಮ ರೂಪಿಸಿಕೊಳ್ಳುವ ಬಗ್ಗೆಯೂ ಮಾತನಾಡಿತ್ತು. ಸರಕಾರ ಸೇರುವ ಉದ್ದೇಶದಿಂದಲೇ ಈ ಮಾತನಾಡಿತ್ತು ಎಂಬುದು ಸ್ವಯಂ ವೇದ್ಯ. ಸಿಪಿಐ(ಎಂ) ಈ ಪ್ರಸ್ತಾಪವನ್ನು ಒಪ್ಪಿರಲಿಲ್ಲ, ಏಕೆಂದರೆ ಎಡಪಕ್ಷಗಳು ಒಂದು ಸರಕಾರದ ನೀತಿಗಳನ್ನು ರೂಪಿಸುವಷ್ಟು ಬಲಿಷ್ಠವಾಗಿರದಿದ್ದರೆ ಚುನಾವಣಾ ಪ್ರಣಾಳಿಕೆಯ ಜಂಟಿ ಕನಿಷ್ಠ ಕಾರ್ಯಕ್ರಮ ರೂಪಿಸುವುದರಿಂದ ಏನೂ ಪ್ರಯೋಜನವಿಲ್ಲ, ಇಂತಹ ಪಕ್ಷಗಳು ಅಧಿಕಾರಕ್ಕೆ ಬಂದ ನಂತರ ಅವನ್ನು ಜ್ಯಾರಿಗೆ ತರುವುದಿಲ್ಲ ಎಂಬುದು ಅನುಭವಸಿದ್ಧ ಮಾತು. ಒರಿಸ್ಸಾದಲ್ಲಿ ಜನತಾದಳ ಒಪ್ಪಿದ 18 ಅಂಶಗಳ ಕಾರ್ಯಕ್ರಮವನ್ನು 1990ರ ಚುನಾವಣೆ ಗೆದ್ದ ಮೇಲೆ ಬಿಜು ಪಟ್ನಾಯಕ್ ಸರಕಾರ ಕಸದ ಬುಟ್ಟಿಗೆ ಎಸೆದದ್ದು ಸಿಪಿಐಗೆ ಚೆನ್ನಾಗಿ ಗೊತ್ತಿದೆ.

ಆಂಧ್ರಪ್ರದೇಶದಲ್ಲೂ ಇಂತಹ ಒಂದು ವಿಚಾರದಿಂದಾಗಿ ಸಿಪಿಐ(ಎಂ) ಕೇವಲ ಕಾಂಗ್ರೆಸ್(ಐ)ಗೆ ಪ್ರತಿಪಕ್ಷದ ಸ್ಥಾನ ದೊರಕದಂತೆ ಮಾಡುವ, ನಮಗೆ ಪ್ರತಿಪಕ್ಷದ ನಾಯಕನೆಂಬ ಸ್ಥಾನ ಪಡೆಯುವ ಉದ್ದೇಶಕ್ಕಾಗಿ ಮಾತ್ರವೇ ಒಂದು ಶಾಸಕಾಂಗ ಕೂಟ ರಚಿಸಿಕೊಳ್ಳುವುದು ಸರಿಯಲ್ಲಾ ಎಂದು ಸಿಪಿಐಗೆ ಹೇಳಿತು.

ಸಮಸ್ಯೆಯಾಗಿರುವುದು ಸಿಪಿಐ ಹೇಳುವಂತೆ "ಎಡ ಐಕ್ಯತೆ ಕುರಿತಂತೆ ಸಿಪಿಐ(ಎಂ)ನ ನಕಾರಾತ್ಮಕ ಧೋರಣೆ" ಅಲ್ಲ. ಎಡಪಕ್ಷಗಳ ಮುತುವರ್ಜಿಯಿಂದ ಹೆಚ್ಚೆಚ್ಚು ಹೋರಾಟಗಳನ್ನೂ, ಜಂಟಿ ಚಟುವಟಿಕೆಗಳನ್ನು ನಡೆಸುವ ಮೂಲಕ ಚುನಾವಣೆಗಳಲ್ಲಿ ಸ್ಥಾನ ಹೊಂದಾಣಿಕೆಯಲ್ಲಿ ಎಡಪಕ್ಷಗಳು ತೃಪ್ತಿಕರ ರೀತಿಯಲ್ಲಿ ಮಧ್ಯಪ್ರವೇಶಿಸುವಂತಾಗುವ, ಬಂಡವಾಳಶಾಹಿ ಪ್ರತಿಪಕ್ಷಗಳು ನಮ್ಮನ್ನು ಮೂಲೆಗೊತ್ತದಂತೆ ಮಾಡುವ ಪರಸ್ಪರ ಸಂಯೋಜನೆಯ ಮೂಲಕವಷ್ಟೆ ಎಡಐಕ್ಯತೆ ಬಲಗೊಳ್ಳಲು ಸಾಧ್ಯ. ಇದಕ್ಕೆ ಉತ್ತಮ ಸಹಕಾರ, ಐಕ್ಯ ಚಟುವಟಿಕೆ ರೂಪಿಸುವ ಹಾಗೂ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವ ತಾಳ್ಮೆಯಿಂದ ಕೂಡಿದ ಪ್ರಯತ್ನಗಳು ಅಗತ್ಯ. ಬೇರೆ ಸುಲಭೋಪಾಯವಿಲ್ಲ, ರಾತ್ರಿ ಬೆಳಗಾಗುವಷ್ಟರಲ್ಲಿ ನಿಲುವುಗಳನ್ನು ಬದಲಿಸಿ, ಎಡ ಐಕ್ಯತೆಯ ಹೆಸರಲ್ಲಿ ಶಾಸಕಾಂಗ ಸಭೆಗಳಲ್ಲಿ ಕೂಟ ರಚಿಸಿಕೊಳ್ಳುವ ಕಸರತ್ತು ನಡೆಸುವುದರಿಂದ ಇದು ಸಾಧ್ಯವಾಗುವುದಿಲ್ಲ.

15ನೇ ಮಹಾಧಿವೇಶನ ಕಂಡಂತೆ

ಪುಟ 5 ರಿಂದ....

ರದಲ್ಲಿ ನಮ್ಮ ಚಟುವಟಿಕೆ ತೋರಿಸಿದೆ. ಭೂಹೋರಾಟಗಳನ್ನು ನಡೆಸಿದ್ದು, ತೀವ್ರ ದಬ್ಬಾಳಿಕೆ ನಡೆವೆಯೂ ಅದನ್ನು ಮುಂದುವರೆಯಲು ಹೋಗುತ್ತಿರುವುದು ಈ ದಾರಿ ಸರಿ ಎಂದು ತೋರಿಸಿಕೊಟ್ಟಿದೆ. ದುರ್ಬಲ ವಿಭಾಗಗಳ ಮೇಲೆ ಸಾಮಾಜಿಕ ದಬ್ಬಾಳಿಕೆ ಹಾಗೂ ಪಾಳೆಯಗಾರಿ ಸಂಸ್ಕೃತಿ ವಿರುದ್ಧ ಸಮಾಜ ಸುಧಾರಣಾ ಚಳವಳಿಯ ಮೂಲಕ ಪಕ್ಷ ದೊಡ್ಡ ಪ್ರಮಾಣದಲ್ಲಿ ಮಧ್ಯ ಪ್ರವೇಶಿಸಬೇಕಾಗಿದೆ.

ಪಕ್ಷದ ಸದಸ್ಯತ್ವದ ಗುಣಮಟ್ಟ

ಪಕ್ಷದ ಸದಸ್ಯತ್ವ 50 ಸಾವಿರದಷ್ಟು ಹೆಚ್ಚಿದ್ದು, ಈಗಿನ ಸಂಕೀರ್ಣ ಪರಿಸ್ಥಿತಿಯಲ್ಲಿ ಸಮಾಧಾನಕರ ಎನ್ನಬಹುದಾದರೂ, ಸದಸ್ಯತ್ವ ಹಾಗೂ ಕಾರ್ಯಕರ್ತರ ಗುಣಮಟ್ಟದ ಬಗ್ಗೆ ಅದನ್ನೇ ಹೇಳುವಂತಿಲ್ಲ,

ಪಕ್ಷದ ವರ್ಗ ಪ್ರಮಾಣ ಸುಧಾರಿಸಿದೆ. ಕಾರ್ಮಿಕ ವರ್ಗ, ಬಡರೈತ ಹಾಗೂ ಕೃಷಿ ಕೂಲಿಕಾರರ ಪ್ರಮಾಣ ಸದಸ್ಯತ್ವದಲ್ಲಿ ಹೆಚ್ಚಾಗಿವೆ. ಆದರೆ ಈ ವಿಭಾಗಗಳ ಸಂಖ್ಯೆ ರಾಜ್ಯ ಸಮ್ಮೇಳನಗಳ, ಮಹಾಧಿವೇಶನದಲ್ಲಿ ಪ್ರತಿನಿಧಿ ಸಂಖ್ಯೆ ಹಾಗೂ ಪಕ್ಷದ ಸಮಿತಿಗಳಲ್ಲಿ ಪ್ರತಿಬಿಂಬಿತವಾಗಿಲ್ಲ, ಅಂದರೆ ಈ ಮೂಲಭೂತ ವರ್ಗಗಳಿಂದ ಬಂದ ಸದಸ್ಯರನ್ನು ಸೈದ್ಧಾಂತಿಕ ರಾಜಕೀಯ ಶಿಕ್ಷಣದ ಮೂಲಕ ನಾಯಕತ್ವದ ಸ್ಥಾನಗಳಿಗೆ ಬಡ್ತಿ ನೀಡುವ ಕೆಲಸ ವ್ಯವಸ್ಥಿತವಾಗಿ ಆಗಿಲ್ಲ ಎಂದರ್ಥ.

ಪಕ್ಷದ ಸಾಮಾಜಿಕ ಪ್ರಮಾಣ ಸಹ ಸುಧಾರಿಸಿದೆ. ಪರಿಶಿಷ್ಟ ಜಾತಿ, ಆದಿವಾಸಿ ವಿಭಾಗಗಳಿಂದ ಬಂದ ಸದಸ್ಯರ ಸಂಖ್ಯೆ ಹೆಚ್ಚಿದೆ. ಆದರೆ ಇನ್ನೂ ಮುಸ್ಲಿಂ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳ ತೃಪ್ತಿಕರವಾಗಿಲ್ಲ, ಈಗಿನ ವಾತಾವರಣ ಪಕ್ಷ ಮುಸ್ಲಿಂ ಜನತೆಯನ್ನು ತಲುಪಲು, ಆಕರ್ಷಿಸಲು ಅನುಕೂಲಕರವಾಗಿದ್ದರೂ ನಿರೀಕ್ಷಿಸಿದ ಮಟ್ಟದಲ್ಲಿ ಹೆಚ್ಚಳವಾಗಿಲ್ಲ, ಉರ್ದು ಪತ್ರಿಕೆಯೊಂದನ್ನು ಆರಂಭಿಸುವ ಪ್ರಯತ್ನ ಪುನಃ ಆರಂಭವಾಗಿದೆ. ಆದರೆ ಇದು ಪಕ್ಷದ ಮುಖಪತ್ರಿಕೆಯಾಗಿರದೆ ಅಲ್ಪಸಂಖ್ಯಾತರ ಪ್ರಜಾಸತ್ತಾತ್ಮಕ ಧೋರಣೆ ಪ್ರತಿಬಿಂಬಿಸುವ ವಿಶಾಲ ತಳಹದಿಯ ಪತ್ರಿಕೆಯಾಗಲಿದೆ.

ಮಹಿಳಾ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚಳ ಸಹ ತೀರಾ ಕಡಿಮೆ. ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 30 ಸ್ಥಾನಗಳನ್ನು ಮಹಿಳೆಯರಿಗೆ ಕಾದಿರಿಸಿರುವುದು, ದೊಡ್ಡ ಪ್ರಮಾಣದಲ್ಲಿ ಪಕ್ಷ ಮಹಿಳೆಯರನ್ನು ಹೋರಾಟಗಳಲ್ಲಿ ಒಳಗೊಳ್ಳಲು ಪ್ರಯತ್ನಿಸುವ ಅವಶ್ಯಕತೆಯ ಸಂದರ್ಭದಲ್ಲಿ 5 ಸಾವಿರ ಹೆಚ್ಚಳ ಸಾಲದು.

ಶಾಖೆಯ ಕೆಲಸ ಹಾಗೂ ಪೂರ್ಣಾವಧಿ ಕಾರ್ಯಕರ್ತರು

ಮದ್ರಾಸ್ ಮಹಾಧಿವೇಶನದ ನಿರ್ದೇಶನದಂತೆ ಕೆಲವು ರಾಜ್ಯ ಸಮಿತಿಗಳ ಪಕ್ಷದ ಸಂಘಟನೆಯ ಮೂಲಭೂತ ಇಟ್ಟಿಗೆಗಳಾದ ಶಾಖೆಗಳನ್ನು ಸಕ್ರಿಯಗೊಳಿಸಲು ಪ್ರಯತ್ನಿಸಿವೆ. ಆದರೆ ಈ ಬಗ್ಗೆ ಒಟ್ಟಾರೆ ಪ್ರಗತಿ ತೃಪ್ತಿಕರವಾಗಿಲ್ಲ, ಈಗಲೂ ಹೆಚ್ಚಿನ ಶಾಖೆಗಳು ನವೀಕರಣಕ್ಕೆ ಮಾತ್ರ ಅಥವಾ ಇನ್ಯಾವುದೇ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸಭೆ ಸೇರುವ ಪರಿಸ್ಥಿತಿ ಇನ್ನೂ ಇದೆ. ಶಾಖೆಗಳನ್ನು ಸಕ್ರಿಯಗೊಳಿಸದೆ, ದೊಡ್ಡ ಪ್ರಮಾಣದಲ್ಲಿ ಜನರಲ್ಲಿ ಪ್ರಭಾವ ಹೆಚ್ಚಿಸುವ ಯಾವುದೇ ಸಾಧ್ಯತೆ ಇಲ್ಲ, ಪಕ್ಷದ ಎಲ್ಲ ಕೆಲಸಕ್ಕೂ ಶಾಖೆಗಳನ್ನು ಸಕ್ರಿಯಗೊಳಿಸುವುದು ಕೇಂದ್ರವಾದ ಕೆಲಸ.

ಪಕ್ಷ ತನ್ನ ಕಾರ್ಯಕರ್ತರ ಬಗ್ಗೆ ಸ್ಪಷ್ಟ ನೀತಿ ಹೊಂದಬೇಕಾಗಿದೆ. ಕಾರ್ಯಕರ್ತರ ಸಾಮರ್ಥ್ಯ, ಅಭಿರುಚಿಗಳಿಗನುಸಾರವಾಗಿ ಅವರನ್ನು ವಿವಿಧ ಸಾಮೂಹಿಕ ಸಂಘಟನೆಗಳಲ್ಲಿ, ವಿವಿಧ ಹಂತದ ನಾಯಕತ್ವದಲ್ಲಿ ತೊಡಗಿಸಬೇಕಾಗಿದೆ. ಪಕ್ಷದ ಕಾರ್ಯಕರ್ತರಲ್ಲಿ ಕೆಲಸದ ಸರಿಯಾದ ಹಂಚಿಕೆ, ಪಕ್ಷದ ಸಾಮೂಹಿಕ ಕೆಲಸದಲ್ಲಿ ದಕ್ಷತೆಯನ್ನು ಹೆಚ್ಚಿಸುವಂತಿರಬೇಕು. ಎಲ್ಲವನ್ನು ತಾನೇ ಮಾಡುವ ಕೆಲವು ಕಾರ್ಯಕರ್ತರ ಧೋರಣೆಯನ್ನು ನಿಲ್ಲಿಸಬೇಕು. ಪೂರ್ಣಾವಧಿ ಕಾರ್ಯಕರ್ತರಿಗೆ ಸರಿಯಾದ ವೇತನದ ಬಗ್ಗೆ ನೀತಿ ಅನುಸರಿಸಬೇಕಾಗಿದೆ. ಇದರಲ್ಲಿ ಈಗ ರಾಜ್ಯಗಳ ನಡುವೆ ಸಾಕಷ್ಟು ವ್ಯತ್ಯಾಸಗಳಿವೆ. ಪಂಜಾಬ್ ಹಾಗೂ ತಮಿಳುನಾಡುಗಳಲ್ಲಿ ಕನಿಷ್ಠ ವೇತನ ಶ್ರೇಣಿಗಳ ನೀತಿ ಅನುಸರಿಸಲಾಗುತ್ತಿದೆ. ಆಂಧ್ರದಲ್ಲಿ ಎಲ್ಲರಿಗೂ ಒಂದೇ ವೇತನ ನೀತಿ ಅನುಸರಿಸಲಾಗುತ್ತಿದೆ. ಎಲ್ಲಾ ಕಾರ್ಯಕರ್ತರು ಕಮ್ಯುನಿಸ್ಟ್ ನೀತಿ ಸಂಹಿತೆ ಅನುಸರಿಸುವಂತೆ, ಅದನ್ನು ದುರ್ಬಲಗೊಳಿಸುವ ಎಲ್ಲಾ ವಿಕೃತಿಗಳ ವಿರುದ್ಧ ಹೋರಾಡುವಂತೆ ಎಚ್ಚರ ವಹಿಸಬೇಕಾಗಿದೆ. ಪಾರ್ಲಿಮೆಂಟರಿಸಂ, ಫೆಡರಲಿಸಂ, ಗುಂಪುಗಾರಿಕೆ ವಿರುದ್ಧ ಸತತ ಹೋರಾಟ ಅಗತ್ಯ.

ಪ್ರಜಾಸತ್ತಾತ್ಮಕ ಕೇಂದ್ರವಾದದ ಆಚರಣೆಯಲ್ಲಿ

ಈ ಬಾರಿ ಎಲ್ಲಾ ಮಟ್ಟದ ಪಕ್ಷದ ಸಮ್ಮೇಳನಗಳಲ್ಲಿ ಪಕ್ಷದ ಆಂತರಿಕ ಪ್ರಜಾಪ್ರಭುತ್ವದ ಮೇಲೆ ಹೆಚ್ಚು ಒತ್ತು ನೀಡಲಾಗಿತ್ತು. ಹೊಸ ಸಮಿತಿಗಳಿಗೆ ಹೊರಹೋಗುವ ಸಮಿತಿ ಶಿಫಾರಸು ಮಾಡಿದ ಪಟ್ಟಿಯನ್ನು, ಮೊದಲೇ ಸದಸ್ಯರಿಗೆ ತಲುಪಿಸಲಾಗಿತ್ತು. ಕೆಲವು ಸಮ್ಮೇಳನಗಳಲ್ಲಿ ಸಮಿತಿಯನ್ನು ಆಯ್ಕೆ ಮಾಡಲು ಗುಪ್ತ ಮತದಾನದ ಆಧಾರದ ಮೇಲೆ ಚುನಾವಣೆ ಸಹ ನಡೆಸಲಾಯಿತು. ಈ ಬಗ್ಗೆ ಮಿಶ್ರ ಪ್ರತಿಕ್ರಿಯೆ ಬಂದಿದೆ. ಕೆಲವರು ಸಮಿತಿಗಳಿಗೆ ಚುನಾವಣೆ ಗುಂಪುಗಾರಿಕೆಗೆ ಎಡೆ ಮಾಡಿಕೊಡುತ್ತದೆ, ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ದುರ್ಬಲಗೊಳಿಸುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಉಳಿದವರು ಆಂತರಿಕ ಪ್ರಜಾಪ್ರಭುತ್ವವನ್ನು ಪೂರ್ಣವಾಗಿ ಆಚರಿಸಿದ್ದನ್ನು ಸ್ವಾಗತಿಸಿದ್ದಾರೆ. ಸಮಿತಿಯ ಚುನಾವಣೆ ಪ್ರಜಾಸತ್ತಾತ್ಮಕ ಕೇಂದ್ರವಾದವನ್ನು ದುರ್ಬಲಗೊಳಿಸುತ್ತದೆ ಎನ್ನುವುದು ತಪ್ಪು. ಸಮ್ಮೇಳನಗಳಲ್ಲಿ ಸಮಿತಿಯ ಆಯ್ಕೆಯಲ್ಲಾಗಲಿ, ಇತರ ಚರ್ಚೆಗಳಲ್ಲಾಗಲಿ ಅಲ್ಪಸಂಖ್ಯಾತ ಅಭಿಪ್ರಾಯವನ್ನು ಮುಚ್ಚಿ ಹಾಕುವ ಪ್ರಯತ್ನ ತಪ್ಪು. ಸಮಿತಿಯ ಚುನಾವಣೆ ಪದ್ಧತಿಗಳಲ್ಲಿ ವೈವಿಧ್ಯ ಕಂಡುಬಂದಿದೆ. ಕೇಂದ್ರ ಸಮಿತಿ ಸಾಮಾನ್ಯ ಚುನಾವಣಾ ವಿಧಿ ವಿಧಾನಗಳನ್ನು ರೂಪಿಸುವುದು.

ಕೆಲವು ರಾಜ್ಯಗಳಲ್ಲಿ ಪ್ರಜಾಸತ್ತಾತ್ಮಕ ಕೇಂದ್ರದಿಂದ ದೂರವಾಗಿರುವ ಧೋರಣೆಗಳು ಕಂಡು ಬಂದಿವೆ. ಅತಿ ಕೇಂದ್ರವಾದಿ ವರ್ತನೆಗಳು ಕಂಡು ಬಂದಿವೆ. ಇದನ್ನು ಸರಿಪಡಿಸಲು ಕೇಂದ್ರ ಸಮಿತಿ ಮಾರ್ಗದರ್ಶಕ ಸೂತ್ರಗಳನ್ನು ಸಿದ್ಧಪಡಿಸುವುದು. 1981ರ ಸಾಮೂಹಿಕ ಸಂಘಟನೆಗಳ ಬಗ್ಗೆ ಕೇಂದ್ರ ಸಮಿತಿಯ ನಿರ್ಣಯ ಇನ್ನೂ ಜಾರಿಯಾಗಿಲ್ಲ. ಸಾಮೂಹಿಕ ಸಂಘಟನೆಗಳಲ್ಲಿ ಪ್ರಜಾಸತ್ತಾತ್ಮಕ ನೀತಿಗಳನ್ನು ಉಲ್ಲಂಘಿಸಲಾಗುತ್ತಿದೆ. ಪಾರ್ಟಿ ಕೇಂದ್ರದಂತೆ ಸಾಮೂಹಿಕ ಸಂಘಟನೆಗಳ ಅಖಿಲ ಭಾರತ ಹಾಗೂ ರಾಜ್ಯ ಕೇಂದ್ರಗಳನ್ನೂ ಬಲಗೊಳಿಸಬೇಕು.